ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com


ಸಂಪುಟ 6 ಸಂಚಿಕೆ 49
ಡಿಸೆಂಬರ್ 02, 2012

ಪುಟ 16 ರೂ. 5/-





ಕೇಂದ್ರ-ರಾಜ್ಯ ಸರ್ಕಾರಗಳ ದುರಾಡಳಿತದ ವಿರುದ್ಧ
ಜನಜಾಗೃತಿ ಜಾಥಾ ಆರಂಭ





ಭಾರತಕ್ಕೆ ವಾಲ್‌ಮಾರ್ಟ್ ಬೇಡವೇ ಬೇಡ

ಹೋಳು ಹೋಳಾದ ಬಿಜೆಪಿ

ಕೆ.ಜಿ.ಎಫ್. ನಲ್ಲಿ ಅಣು ತ್ಯಾಜ್ಯ ಖಂಡನೀಯ

ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳ : ದೇಶದ ಸಂಸತ್ತು ನಿರ್ಧರಿಸಲಿ

“ನನ್ನ ಕಣ್ಣೀರ ಕೊಳ್ಳುವವರಿದ್ದರೆ, ನಾನೂ ಶ್ರೀಮಂತನಾಗಿರುತ್ತಿದ್ದೆ”

ಇದು ಒಬ್ಬ ದಲಿತ ಹುಡುಗ ತನ್ನ ನೋಟು ಬುಕ್ಕಿನಲ್ಲಿ ಬರೆದ ಕಿರು ಕವನವಂತೆ. ತಮ್ಮ ಜಿಲ್ಲೆಯ 'ಸಿಜೇರಿಯನ್' ಕವಿಗಳು, 'ನ್ಯೂಸ್ ಪೇಪರ್' ಕವಿಗಳ ಕವನಗಳಿಗಿಂತ ಬದುಕಿನ ಅನುಭವದಿಂದ ಬಂದ ಈ ಎರಡು ಸಾಲುಗಳು ಹೆಚ್ಚು ಮಹತ್ವದ್ದು ಎನ್ನುತ್ತಾ ಕೊಪ್ಪಳದ ಸಾವಿತ್ರಿ ಮುಜುಂದಾರ್ ತಮ್ಮದೇ ಆದ ರೀತಿಯಲ್ಲಿ ಸಾಹಿತ್ಯದಲ್ಲಿ ಬದುಕಿಗೆ ಬದ್ಧತೆಯ ಅಗತ್ಯದ ಬಗ್ಗೆ ವ್ಯಾಖ್ಯಾನಿಸಿದರು. ಸಾಹಿತ್ಯ ಸಮುದಾಯ ಸಂಘಟಿಸಿದ್ದ ಹೈದರಾಬಾದ್ ಕರ್ನಾಟಕ ಲೇಖಕರ ಸಮಾವೇಶದಲ್ಲಿ ಕೆ.ನೀಲಾ ಅವರು 'ಬದುಕು, ಸಾಹಿತ್ಯ ಮತ್ತು ಬದ್ಧತೆ' ಬಗ್ಗೆ ಮಂಡಿಸಿದ್ದ ದಿಕ್ಸೂಚಿಯ ಬಗ್ಗೆ ಸಂವಾದದಲ್ಲಿ ಅವರು ಹೇಳಿದ್ದು ಈ ಮಾತು. ಸಂವಾದದಲ್ಲಿ ಹೈದರಾಬಾದ್ ಕರ್ನಾಟಕದ ಹಲವು ಜಿಲ್ಲೆಗಳಿಂದ ಗುಲ್ಬರ್ಗ, ಬೀದರ, ಕೊಪ್ಪಳ, ಯಾದಗಿರಿ, ರಾಯಚೂರು, ಬಳ್ಳಾರಿ – ಬಂದ ಹತ್ತಕ್ಕೂ ಹೆಚ್ಚು ಲೇಖಕರು/ಸಾಹಿತ್ಯ ಸಂಘಟಕರು ಭಾಗವಹಿಸಿದರು. ಸಂವಾದದಲ್ಲಿ ಬಂದ ಸಲಹೆ-ಸೂಚನೆಗಳನ್ನು ಸ್ವೀಕರಿಸಿ ಈ ದಿಕ್ಸೂಚಿಯನ್ನು ಸಮಾವೇಶ ಅಂಗೀಕರಿಸಿತು. ಸಮಾವೇಶದಲ್ಲಿ 50ಕ್ಕೂ ಹೆಚ್ಚು ಲೇಖಕರಲ್ಲದೆ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕಗಳ ಸಂಘಟಕರು, ಪದಾಧಿಕಾರಿಗಳು ಭಾಗವಹಿಸಿದ್ದರು. ಇವರಲ್ಲದೆ ಹಲವು ಸಾಹಿತ್ಯಾಸಕ್ತರು, ಸ್ನಾತಕೋತ್ತರ/ಸಂಶೋಧನಾ ವಿದ್ಯಾರ್ಥಿಗಳು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಸುಮಾರು 200–250 ಜನ ಭಾಗವಹಿಸಿದ್ದು, ದೊಡ್ಡ ಸಂಖ್ಯೆಯಲ್ಲಿ ಯುವಜನರು, ಮಹಿಳೆಯರು ಇದ್ದಿದ್ದು ವಿಶೇಷವಾಗಿತ್ತು. ಸಂವಾದದಲ್ಲಿ ಡಾ.ವಿಠ್ಠಲ ಭಂಡಾರಿಯವರು ಪ್ರಬಲ ಜನಮುಖಿ ಸಾಹಿತ್ಯ ವೇದಿಕೆಯೊಂದರ ರಚನೆಯ ಅಗತ್ಯದ ಬಗೆಗೆ ಒತ್ತು ಕೊಟ್ಟರು. ಇನ್ನೂ ಹಲವರು ವೇದಿಕೆಯ ಅಗತ್ಯದ ಬಗ್ಗೆ ಮಾತನಾಡಿದರು. ಸಮಾವೇಶವನ್ನು ಸಾಹಿತ್ಯ ಸಮುದಾಯ ಕನ್ನಡ ಸಾಹಿತ್ಯ ಪರಿಷತ್ತಿನ ಗುಲ್ಬರ್ಗಾ ಜಿಲ್ಲಾ ಘಟಕದ ಸಹಕಾರದೊಂದಿಗೆ ಸಂಘಟಿಸಿತ್ತು.

ದಿಕ್ಸೂಚಿಯನ್ನು ಮಂಡಿಸುತ್ತಾ ಕೆ.ನೀಲಾ ಅವರು ಎರಡು ಪ್ರಮುಖ ವಿಷಯಗಳನ್ನು ಪ್ರಸ್ತಾಪಿಸಿದರು. ಬದುಕು ಮತ್ತು ಸಾಹಿತ್ಯಗಳ ಸಂಬಂಧ, ಸಾಹಿತ್ಯದಲ್ಲಿ ಯಾವ ರೀತಿಯ ಬದ್ಧತೆಯ ಅಗತ್ಯವಿದೆ ಎಂಬುದು ಮೊದಲನೆಯ ವಿಷಯವಾಗಿತ್ತು. ಹೈದರಾಬಾದ್ ಕರ್ನಾಟಕದ ಬದುಕು ಮತ್ತು ಸಾಹಿತ್ಯಗಳ ಇಂದಿನ ಸ್ಥಿತಿ, ಮುಂದೆ ಸಾಗಬೇಕಾದ ಹಾದಿ ಯಾವುದು ಎಂಬುದು ಎರಡನೇ ವಿಷಯವಾಗಿತ್ತು. “ಸಾಹಿತ್ಯ ಸೃಷ್ಟಿಯಲ್ಲಿ ಸೈದ್ಧಾಂತಿಕ ಬದ್ಧತೆ ಇರಬೇಕೋ ಬೇಡವೋ ಎಂಬುದು ಈ ಹೊತ್ತಿನ ಪ್ರಶ್ನೆಯಲ್ಲ. ಅಭಿವ್ಯಕ್ತಿಸುತ್ತಿರುವ ಸೈದ್ಧಾಂತಿಕ ನೆಲೆ ಯಾವುದೆನ್ನುವುದು ಪ್ರಮುಖ ಪ್ರಶ್ನೆ... ಪ್ರಸಕ್ತ ತಲ್ಲಣಗಳಿಗೆ, ಸಮಸ್ಯೆ-ಸವಾಲುಗಳಿಗೆ ಇರುವ ರಾಜಕೀಯ, ಆರ್ಥಿಕ ಸಾಮಾಜಿಕ ಚಾರಿತ್ರಿಕ ಕಾರಣಗಳನ್ನು ಹೆಕ್ಕುತ್ತ ಅರ್ಥೈಸಿಕೊಳ್ಳುತ್ತ ಅದನ್ನು ಸಾಹಿತ್ಯ ಕಲೆಯ ಮೂಲಕ ಅನಾವರಣಗೊಳಿಸುವ ತುಡಿತಕ್ಕೆ ತನ್ನನ್ನು ತಾನು ಒಡ್ಡಿಕೊಳ್ಳುವುದು. ಚಾರಿತ್ರಿಕ ಸಾಧ್ಯತೆಗಳನ್ನು ಗುರುತಿಸುವುದು. ಭವಿಷ್ಯದ ಕನಸುಗಳನ್ನು ವಾಸ್ತವ ಅನುಭವದ ನೆಲೆಯಲ್ಲಿ ವೈಜ್ಞಾನಿಕ ದೃಷ್ಟಿ ಧೋರಣೆಯ ನೆರವಿನೊಂದಿಗೆ ಸೃಜನಾತ್ಮಕವಾಗಿ ಕಟ್ಟಿ ಕೊಡುವುದು. ಹೀಗೆ ಮಾಡುವ ಮೂಲಕ ಇವರು ಜನಪರ ಅಥವ ಜನತೆಯ ಪಗತಿಪರ ಸೈದ್ಧಾಂತಿಕ ಬದ್ಧತೆಯನ್ನು ತಮ್ಮ ಕಲೆ ಸಾಹಿತ್ಯದ ಮೂಲಕ ವ್ಯಕ್ತ ಪಡಿಸಿದಂತೆ.” ಈ ರೀತಿಯಲ್ಲಿ ಕೆ.ನೀಲಾ ಅವರು ಬದುಕು, ಸಾಹಿತ್ಯ ಮತ್ತು ಬದ್ಧತೆಗಳ ಸಂಬಂಧಗಳನ್ನು ಬಿಚ್ಚಿಟ್ಟರು.



ಮನುಷ್ಯನ ದೀರ್ಘ ನಡೆಯಲ್ಲಿ ಅಕ್ಷರ ಲೋಕಕ್ಕೆ ತೆರೆದುಕೊಂಡದ್ದು; ವೈದಿಕ, ಬೌದ್ಧ, ಜೈನ ಬದುಕಿನ ಮತ್ತು ಕಾವ್ಯ ಮೀಮಾಂಸೆಗಳ ಬೆಳವಣಿಗೆ ಮತ್ತು ಅವುಗಳ ನಡುವೆ ತಿಕ್ಕಾಟಗಳು; ವಚನ ಸಾಹಿತ್ಯದಲ್ಲಿ ಮೊದಲ ಬಾರಿಗೆ ಅಭಿಜಾತ ಕಾವ್ಯ ಮೀಮಾಂಸೆಗೆ ಎದುರಾಗಿ ಜನಜಾತ ಕಾವ್ಯ ಮೀಮಾಂಸೆಗೆ ಎದುರಾಗಿದ್ದು; ಆಧುನಿಕ ಕಾಲದಲ್ಲಿ ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ-ದಲಿತ ಸಾಹಿತ್ಯ ತಾತ್ವಿಕತೆಯ ವಿಕಾಸ – ಇವೆಲ್ಲವನ್ನೂ ದೀರ್ಘವಾಗಿ ವಿವರಿಸಿದರು. “ಇವತ್ತು ಎಲ್ಲಿಯೂ ಚಳುವಳಿಗಳಿಲ್ಲ, ಸಾಹಿತ್ಯಿಕ ವಾಗ್ವಾದಗಳಿಲ್ಲ” ಎಂಬ ನಂಬಿಕೆಗಳನ್ನು ಹರಿಬಿಡಲಾಗುತ್ತಿದೆ. ರೈತ-ದಲಿತ-ಕಾರ್ಮಿಕ-ಶೋಷಿತ ಚಳುವಳಿಗಳ ಕಾಲ ಈಗ ಮುಗಿದು ಹೋಯಿತು ಎಂಬ ಉದ್ದೇಶಿತ ವಾದವೊಂದು ಹರಿಬಿಡಲಾಗುತ್ತಿದೆ. ಹಾಗಾದರೆ ನಿಜವಾಗಿಯೂ ಭಾರತದೆಲ್ಲೆಡೆ ಇವತ್ತು ವಿವಿಧ ವರ್ಗದ ಜನತೆ ತಮ್ಮ ಹಕ್ಕುಗಳಿಗಾಗಿ ಬಡಿದಾಡುತ್ತಲೇ ಇಲ್ಲವೇ? ಪ್ರತಿಭಟನೆಯ ಕೂಗು ಏಳುತ್ತಲೇ ಇಲ್ಲವೇ?.. ನೈಜ ಚಳುವಳಿಗಳನ್ನು ನಗಣ್ಯಗೊಳಿಸಿ ನೇಪಥ್ಯಕ್ಕೆ ತಳ್ಳುವ ಹುನ್ನಾರ ನಡೆದಿದೆಯೇ?” ಎಂದು ಚಳುವಳಿಗಳ ಕಾಲ ಮುಗಿದು ಹೋಗಿದೆ ಎಂಬ ನಿಲುವನ್ನು ಬಲವಾಗಿ ಟೀಕಿಸಿದರು. “ಸೃಜನಶೀಲ ಚಟುವಟಿಕೆಗಳೆಲ್ಲವೂ ಸಾವಯವ ಸಮಗ್ರೀಕರಣದ ಮೂಲಕ ಜನಬದುಕಿಗೆ ಧಾರಣಶಕ್ತಿಯನ್ನು ತುಂಬಬೇಕಿದೆ. ಸಾಹಿತ್ಯಿಕ ಚಟುವಟಿಕೆಗಳು ಪರಸ್ಪರ ಕೊಡುಕೊಳ್ಳುವ ಮೂಲಕ ತಮ್ಮನ್ನು ತಾವು ನಿಷ್ಕರ್ಷಿಸಿಕೊಳ್ಳಬೇಕಿದೆ... ಭಯೋತ್ಪಾದನೆ, ನಕ್ಸಲ್ವಾದ, ಕೋಮುವಾದ, ಭಾಷಾಂಧತೆ, ಲಿಂಗತಾರತಮ್ಯ, ಮುಂತಾದವುಗಳು ತಿಕ್ಕಿ ಮುಕ್ಕುತ್ತಿರುವಾಗ ಇವೆಲ್ಲವುಗಳನ್ನು ತನ್ನ ಅನುಭವ ಕ್ಷೇತ್ರಕ್ಕೆ ತಾಕಿಸಿ ಆಕರ್ಷಿಸಿಕೊಳ್ಳದಿದ್ದರೆ ಹೇಗೆ? ಈ ಯಾವುದನ್ನೂ ಅಂತರ್ಗತ ಮಾಡಿಕೊಳ್ಳದೆಯೂ ಸೃಜನಶೀಲತೆಯನ್ನು ಕಾಪಾಡಿಕೊಂಡು ಬರಬೇಕು ಹಾಗೆ ಬರಲು ಸಾಧ್ಯ ಎಂದು ಬಿಂಬಿಸುತ್ತಿರುವ ಹುನ್ನಾರಗಳನ್ನು ಅರ್ಥ ಮಾಡಿಕೊಳ್ಳದಿದ್ದರೆ ಸೃಜನಶೀಲತೆಯೇ ದಮನಿತರನ್ನು ಇರಿಯುವ ವಂಚನೆಯ ಚೂರಿಯಾಗಬಲ್ಲದೆಂಬ ಎಂಬ ಎಚ್ಚರಿಕೆ ತಾಳಬೇಕಲ್ಲವೇ?” ಎಂದು ಲೇಖಕರ ಜವಾಬ್ದಾರಿ ಬಗ್ಗೆ ಎಚ್ಚರಿಸಿದರು.

ಹೈದರಾಬಾದ್ ಕರ್ನಾಟಕದ ವಚನ ತತ್ವಪದಕಾರರ ಶ್ರೀಮಂತ ಕ್ರಾಂತಿಕಾರಿ ಸಾಂಸ್ಕೃತಿಕ ಪರಂಪರೆ ಒಂದು ಕಡೆ, ಮಧ್ಯಕಾಲೀನ ಪಾಳೆಯಗಾರಿ ವ್ಯವಸ್ಥೆ ಬೇರೆ ಪ್ರದೇಶಗಳಿಗಿಂತ ಬಹಳ ವಿಳಂಬವಾಗಿ ಆಧುನಿಕತೆಗೆ ತೆರೆದುಕೊಳ್ಳುವುದು ಇನ್ನೊಂದು ಕಡೆ. ಹೀಗೆ ಒಟ್ಟಾರೆಯಾಗಿ 'ಹಿಂದುಳಿದ' ಪ್ರದೇಶವಾದರೂ ಮಹತ್ವದ ಸಾಂಸ್ಕೃತಿಕವಾಗಿ ಕೊಡುಗೆ ನೀಡಿದ್ದರ ಬಗ್ಗೆ ಕೆ.ನೀಲಾ ವಿವರವಾಗಿ ಮಾತನಾಡಿದರು. “ಇಲ್ಲಿ ತತ್ವಪದಗಳು, ಪುರಾಣಗಳು, ಭುಲಾಯಿ ಪದಗಳು, ಹಂತಿ ಪದಗಳು, ಮೊಹರಂ ಪದಗಳು, ಅಸಂಖ್ಯ ಜಾನಪದ ತ್ರಿಪದಿಗಳು ರಚನೆಯಾಗುತ್ತಿದ್ದವು. ಆಣಿಪಿಣಿ ಹಾಡುಗಳು, ಚಕ್ಕಿಕಿಪಾಟಾ ಹಾಡುಗಳು, ಗಂಡ-ಹೆಂಡತಿ ಹೆಸರು ಒಗಟುಗಳು, ಡೊಳ್ಳಿನ ಪದಗಳು, ಹಂತಿ ಪದಗಳು, ಚಾಜದ ಪದಗಳು, ಹೋಳಿ ಹುಣ್ಣಿಮೆ ಪದಗಳು, ಗೊಂದಲಿಗೇರ ಪದಗಳು, ಜೋಗತಿ ಸಂಪ್ರದಾಯದ ಹಾಡುಗಳು, ಶಿಶು ಗೀತೆಗಳು, ರಜಾಕಾರ ಸಂದರ್ಭದ ಲಾವಣಿಗಳು, ವೀರಭದ್ರೇಶ್ವರ ಒಡಪುಗಳು ಪ್ರಾಯಶ: ಕನ್ನಡ ನಾಡಿನ ಉಳಿದೆಲ್ಲ ಭಾಗದಂತೆ ಇಲ್ಲಿಯೂ ಕೂಡ ತುಂಬ ಗಟ್ಟಿಯಾದ ಸಾಂಸ್ಕೃತಿಕ ಪ್ರಕ್ರಿಯೆ ಅನೂಚಾನವಾಗಿ ಸಾಗಿಕೊಂಡು ಬರುತ್ತಲೇ ಇತ್ತು. ದುರಂತವೆಂದರೆ ಆಧುನಿಕ ಕನ್ನಡ ಸಾಹಿತ್ಯವನ್ನ ಸಂಗ್ರಹಿಸುವ ಮತ್ತು ಅದಕ್ಕೊಂದು ಚರಿತ್ರೆ ಬರೆಯುವ ಕಾಲದಲ್ಲಿ ಈ ಭಾಗವನ್ನು, ಇಲ್ಲಿರುವ ಸಾಹಿತ್ಯವನ್ನು ಗಮನಿಸಲೇ ಇಲ್ಲ.” ಎಂದು ಅವರು ಈ ಪ್ರದೇಶ ಅವಗಣನೆಗೆ ಒಳಗಾದದ್ದರ ಸಾಂಸ್ಕೃತಿಕ ರಾಜಕಾರಣವನ್ನು ಬಿಚ್ಚಿಟ್ಟರು. ಬಂಡಾಯ-ದಲಿತ ಚಳುವಳಿಯ ಭಾಗವಾಗಿ ಮತ್ತು ನಂತರ ಮಾತ್ರವೇ ಶಾಂತರಸ ಮುಂತಾದವರ ಪ್ರಯತ್ನಗಳಿಂದ ಇಲ್ಲಿನ ಲೇಖಕರ ಕೃತಿಗಳು ಬೆಳಕಿಗೆ ಬರುತ್ತಿವೆ. ನಿನ್ನೆ... ವಿಚಾರಸಂಕಿರಣ ಪ್ರಸ್ತುತ ಪಡಿಸಿದಂತೆ ಕಥಾಸಾಹಿತ್ಯದಲ್ಲಿ ಈ ಪ್ರದೇಶದ ಲೇಖಕರು ತಮ್ಮ ವಿಶಿಷ್ಟ ಛಾಪು ಒತ್ತಿದ್ದು ಹೆಮ್ಮೆಯ ವಿಷಯ. ಆದರೆ ಸಾಹಿತ್ಯದ ಇತರ ಪ್ರಕಾರಗಳಲ್ಲಿ ಇನ್ನಷ್ಟು ಹೆಚ್ಚು ಕೃಷಿ ಆಗಬೇಕು. ಈ ಭಾಗದ ಸಾಂಸ್ಕೃತಿಕ ದಾಖಲೀಕರಣ ಆಗಬೇಕು. ಈ ಪ್ರದೇಶದ ಸಮಸ್ಯೆಗಳ ಬಗ್ಗೆ ಮಾನವಿಕ ವಿಷಯಗಳಲ್ಲಿ ಹೆಚ್ಚಿನ ಸಂಶೋಧನೆ ಆಗಬೇಕು ಎಂದು ಅವರು ಮುಂದುವರೆದು ಹೇಳಿದರು.

“ಈ ಭಾಗದ ಭೂಮಿಯ ಸಮೃದ್ಧಿತನ ಅದು ದಕ್ಕಿರುವ ಜನತೆಯ ಪಾಲು; ದಕ್ಕದೆಯೇ ಇರುವ ಜನತೆಯ ಗೋಳು, ಕೂಲಿ ಗಿಟ್ಟದೆ ಸಾಗುತ್ತಿರುವ ಸಾಮೂಹಿಕ ವಲಸೆ, ಧಾರ್ಮಿಕ ಹೆಸರಿನ ಸ್ತ್ರೀ ಶೋಷಣೆಯ ಆಯಾಮವಾದ ದೇವದಾಸಿ ಪದ್ಧತಿ, ವೈಧವ್ಯ, ಬಹುಪತ್ನಿತ್ವ ಇತ್ತೀಚೆಗೆ ಹೆಚ್ಚುತ್ತಿರುವ ಬಾಲ್ಯ ವಿವಾಹ ಸಾಮಾಜಿಕ ಪ್ರತಿಷ್ಟೆಯಾಗುತ್ತಿರುವ ವರದಕ್ಷಿಣೆ ನಿತಾಂತವಾಗಿ ಕಾಡುತ್ತಿರುವ ನಿರುದ್ಯೋಗ ಜಾಗತಿಕ ಬಂಡವಾಳದಾರರಿಗಾಗಿ ಸೆರಗು ಹಾಸುತ್ತಿರುವ ವೇಶ್ಯಾವಾಟಿಕೆ, ರೂಪ ಮರೆಸಿಕೊಂಡು ಪ್ರತ್ಯಕ್ಷವಾಗುತ್ತಿರುವ ಜಾತೀಯತೆ ಮತರಾಜಾಕಾರಣಕ್ಕೆ ಜಾತಿ ತುಷ್ಟೀಕರಣ ಲೆಕ್ಕವಿಲ್ಲದಷ್ಟು ಸಂಗತಿಗಳು ನವ... ನಿದ್ರೆಗೆಡಿಸುತ್ತಿಲ್ಲವೇಕೆ? ಯಥಾಸ್ಥಿತಿಯನ್ನು ಕಾಪಾಡಬೇಕೆಂಬ ಧಾರ್ಮಿಕ ಮನೋಸ್ಥಿತಿ, ಈ ಮನೋಸ್ಥಿತಿಯನ್ನು ಗಟ್ಟಿಗೊಳಿಸುವ ರಾಜಕಾರಣ, ಪರಂಪರಾಗತ ಮೌಢ್ಯಗಳೊಳಗಿನ ವಿಜೃಂಭಣೆಯೇ ಸಾಂಸ್ಕೃತಿ ಎಂದು ನಂಬಿಸಲಾಗುತ್ತಿರುವ ಕುತಂತ್ರ ಹೀಗೆ ಎಲ್ಲ ಎಲ್ಲವನ್ನೂ ಬಗೆದು ಅಗೆದು ಜೀವನದಿಯು ಬತ್ತದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಯಾರ ಮೇಲೆ ಹೊರಿಸೋಣ? ಈ ಕೆಲಸವನ್ನು

ಪುಟ 15 ರಿಂ...

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಕೆ.ಜಿ.ಎಫ್.ನಲ್ಲಿ ಅಣು ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪಿಸುವ ಪ್ರಸ್ತಾವ ಖಂಡನೀಯ

ತಮಿಳುನಾಡಿನಲ್ಲಿ ಕಾರ್ಯಾರಂಭ ಮಾಡಲು ಉದ್ದೇಶಿಸಿರುವ ಕೂಡಂಗುಲಂ ಅಣು ವಿದ್ಯುತ್ ಸ್ಥಾವರದ ಅಣು ತ್ಯಾಜ್ಯವನ್ನು ವಿಲೇವಾರಿ ಮಾಡುವ ಘಟಕವನ್ನು ಕೆ.ಜಿ.ಎಫ್.ನಲ್ಲಿ ಸ್ಥಾಪಿಸುವ ಕೇಂದ್ರ ಸರ್ಕಾರದ ಪ್ರಸ್ತಾವ ಇಡೀ ರಾಜ್ಯದ ಜನತೆಯನ್ನೇ ಗಾಬರಿಗೊಳಿಸಿದೆ. ಅಣು ತ್ಯಾಜ್ಯ ವಿಲೇವಾರಿ ಸಂಬಂಧ ಸುಪ್ರೀಂ ಕೋರ್ಟ್‌ಗೆ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ಉತ್ತರ ನೀಡುವಾಗ ಕೇಂದ್ರ ಸರ್ಕಾರ ಕೂಡಂಗುಲಂನಲ್ಲಿ ಉಳಿಯುವ ಅಣು ತ್ಯಾಜ್ಯವನ್ನು ಕೆ.ಜಿ.ಎಫ್.ನ ಖಾಲಿ ಗಣಿಗಳಲ್ಲಿ ಹಾಕಿ ಮುಚ್ಚಿಬಿಡಬಹುದೆಂದು ಸರ್ಕಾರ ನೀಡಿದ ಹೇಳಿಕೆ ಖಂಡನೀಯವಾಗಿದೆ.

ಸುರಕ್ಷಿತ ಅಣು ಸ್ಥಾವರಗಳಿಂದ ಅಣು ವಿದ್ಯುತ್ ಉತ್ಪಾದಿಸುವುದು ದೇಶಕ್ಕೆ ಅನಿವಾರ್ಯವೇ ಆಗಿರಬಹುದು. ಆದರೆ ಪ್ರಕ್ರಿಯೆಯಲ್ಲಿ ಲಭ್ಯವಾಗುವ ಅಣು ತ್ಯಾಜ್ಯವನ್ನು ಅಷ್ಟೇ ಸುರಕ್ಷಿತ ಕ್ರಮಗಳ ಮೂಲಕ ವಿಲೇವಾರಿ ಮಾಡುವುದೂ ಸರ್ಕಾರದ ಜವಬ್ದಾರಿಯಾಗಿದೆ. ಕೂಡಂಕುಲಂ ಅಣು ವಿದ್ಯುತ್ ಸ್ಥಾವರದ ಅಣು ತ್ಯಾಜ್ಯವನ್ನು ಅಲ್ಲಿಯೇ ವಿಲೇವಾರಿ ಮಾಡಲು ಸ್ಥಳೀಯರಿಂದ ವಿರೋಧ ವ್ಯಕ್ತವಾಗಿರುವುದು ನಿಜ. ಸಾಮಾನ್ಯವಾಗಿ ಅಣು ಸ್ಥಾವರಗಳ ಆವರಣದಲ್ಲಿಯೇ ತ್ಯಾಜ್ಯವನ್ನು ವಿಲೇವಾರಿ ಮಾಡಲಾಗುತ್ತದೆ. ಆದರೆ ಅಲ್ಲಿಯ ಅಣು ತ್ಯಾಜ್ಯವನ್ನು ಕೆ.ಜಿ.ಎಫ್. ಗಣಿಗಳಲ್ಲಿ ಹೂಳಲು ಸರ್ಕಾರ ಯೋಜಿಸುತ್ತಿರುವುದು ದುರಂತಕ್ಕೆ ಆಹ್ವಾನ ನೀಡಿದಂತೆಯೇ. ಜನವಸತಿ ಇರುವ ಕೆ.ಜಿ.ಎಫ್.ನಂತಹ ಪ್ರದೇಶದಲ್ಲಿ ಅಣು ತ್ಯಾಜ್ಯ ಹೂತು ಹಾಕುವುದು ಅತ್ಯಂತ ಅಪಾಯಕಾರಿಯೇ ಆಗಿದೆ. ಅಣು ತ್ಯಾಜ್ಯವನ್ನು ಗಣಿಗಳಿಗೆ ತುಂಬಿದರೆ ವಿಕಿರಣಗಳು ನೀರಿನಲ್ಲಿ ವ್ಯಾಪಿಸಿ, ಕುಡಿಯುವ ನೀರು, ಪರಿಸರ ಮತ್ತು ಅಲ್ಲಿ ವಾಸಿಸುವ ಜನರ ಮೇಲೆ ದುಷ್ಪರಿಣಾಮ ಬೀರುವ ಅಪಾಯವಿದೆ.

ದೇಶಕ್ಕೆ ಇದುವರೆಗೆ 850 ಮೆಟ್ರಿಕ್ ಟನ್ ಚಿನ್ನವನ್ನು ನೀಡಿದ ಖ್ಯಾತಿಯ ಕೆ.ಜಿ.ಎಫ್. ಚಿನ್ನದ ಗಣಿಗಳನ್ನು ನಷ್ಟದ ನೆಪಮಾಡಿಕೊಂಡು 2001ರಲ್ಲಿ ಮುಚ್ಚಲಾಯಿತು. ಇಲ್ಲಿ ಚಿನ್ನ ಲಭ್ಯವಿದ್ದು ಗಣಿಗಳ ಪುನರಾರಂಭದ ಕನಸು ಕಾಣುತ್ತಾ ಕುಳಿತಿರುವ ಕಾರ್ಮಿಕರಿಗೆ ಈ ಸುದ್ದಿ ಬರಸಿಡಿಲಿನಂತೆ ಎರಗಿದಂತಾಗಿದೆ. ಇಲ್ಲಿಯ ಗಣಿಗಳಲ್ಲಿ ಇನ್ನೂ ಚಿನ್ನ ಲಭ್ಯ ಇರುವುದರಿಂದ ವಿದೇಶಿ ಮೂಲದ ಖಾಸಗಿ ಕಂಪೆನಿಗಳು ಈ ಗಣಿಗಳನ್ನು ಪಡೆಯಲು ಉತ್ಸುಕವಾಗಿವೆ. ಸರ್ಕಾರ ಅಗತ್ಯ ನೆರವನ್ನು ಒದಗಿಸಿದರೆ ಕೆಲಸವನ್ನು ಪುನರಂಭಿಸಬಹುದಾಗಿದೆ. ಆದರೆ ಅದೆಲ್ಲವನ್ನು ಬಿಟ್ಟು ಕೆ.ಜಿ.ಎಫ್. ಗಣಿಗಳನ್ನು ಅಣು ತ್ಯಾಜ್ಯದ ತೊಟ್ಟಿಗಳಾಗಿ ಬಳಸಿಕೊಳ್ಳಲು ಸರ್ಕಾರ ಯೋಜಿಸಿದ್ದು ಆಘಾತಕಾರಿಯಾಗಿದೆ.

ಗಣಿಗಳು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಸೇರುತ್ತವೆ. ಅಣು ಇಲಾಖೆಯನ್ನು ಪ್ರಧಾನ ಮಂತ್ರಿಗಳೇ ನಿರ್ವಹಿಸುತ್ತಾರೆ. ಆದರೆ ಕೆ.ಜಿ.ಎಫ್. ಗಣಿಗಳು ಇರುವುದು ಕರ್ನಾಟಕದಲ್ಲಿ. ಈ ಕುರಿತು ಕರ್ನಾಟಕ ಸರ್ಕಾರವನ್ನು ಸಂಪರ್ಕಿಸದೆ, ಕರ್ನಾಟಕದ ಜನತೆಯ ಅಭಿಪ್ರಾಯ ಪಡೆಯದೆ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟಿಗೆ ಹೇಳಿಕೆ ನೀಡಿದ್ದು ಆಕ್ಷೇಪಾರ್ಹವಾಗಿದೆ. ಕೆ.ಜಿ.ಎಫ್. ಗಣಿಗಳ ಪುನಶ್ಚೇತನಕ್ಕೆ ತುರ್ತು ಕ್ರಮ ಜರುಗಿಸುವುದನ್ನು ಬಿಟ್ಟು ಕೇಂದ್ರ ಸರ್ಕಾರ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಕರ್ನಾಟಕದ ಜನತೆಯ ಕನಸುಗಳನ್ನು ನುಚ್ಚು ನೂರು ಮಾಡಲು ಹೊರಟಿರುವುದನ್ನು ಒಪ್ಪಲಾಗದು. ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಕೋಲಾರದ ಚಿನ್ನದ ಗಣಿಗಳಲ್ಲಿ ಇನ್ನೂ ನೂರು ವರ್ಷ ಗಣಿಗಾರಿಕೆ ನಡೆಸಬಹುದು. ಆದ್ದರಿಂದ ಕೇಂದ್ರ ಸರ್ಕಾರದ ಈ ಪ್ರಸ್ತಾಪವನ್ನು ಬಲವಾಗಿ ವಿರೋಧಿಸಿ ಹಿಮ್ಮೆಟ್ಟಿಸಬೇಕಾಗಿದೆ. ●

ಹೋಳು ಹೋಳಾದ ಬಿಜೆಪಿ!

ಬಿಜೆಪಿ ಹೋಳಾಗಿದೆ. ಇಲ್ಲವೆನ್ನಲು ಆ ನಾಯಕರಿಗೆ ಕಮಲದ ಚಿನ್ಹೆಯಿಂದ ಆಯ್ಕೆಯಾಗಿರುವ ತಾಂತ್ರಿಕ ಕಾರಣ ಬಿಟ್ಟರೆ ಉಳಿದಿರುವುದು ಏನೂ ಇಲ್ಲ. ಹೈಕಮಾಂಡ್‌ನಿಂದ ಇಳಿದು ಬಂದಿದ್ದ ಧರ್ಮೇಂದ್ರ ಪ್ರಧಾನ್ ತನ್ನೊಂದಿಗೆ ಮಾತನಾಡುವ ಪ್ರಶ್ನೆಯೇ ಇಲ್ಲವೆಂದು ಯಡಿಯೂರಪ್ಪ ಬೇಲಿ ಹಾಕಿದ ಮೇಲೆ ಔಪಚಾರಿಕ ಸಂಧಾನದ ಅವಕಾಶವೂ ಇಲ್ಲವಾಗಿ ಉಳಿದದ್ದು ಪಕ್ಷವನ್ನೋ ಅಥವಾ ನಾಯಕರ ಮುಖವನ್ನೋ ಉಳಿಸಿಕೊಳ್ಳೋ ವರಸೆ ಅಷ್ಟೆ. ಹೀಗಾಗಿ ಬಿಎಸ್ ವೈ ನಿರ್ಗಮನದಿಂದ ಆಗಬಹುದಾದ ಹಾನಿಯನ್ನು ತಡೆಯಲು ಸುತ್ತಿನ ಮೇಲೆ ಮತ್ತೊಂದು ಸುತ್ತಿನಂತೆ ರಾಜ್ಯ ನಾಯಕರು ಸಭೆ ನಡೆಸಿದ್ದು ವಿಶೇಷ. ಅತ್ತ ಯಡಿಯೂರಪ್ಪ ಬಿಕ್ಕುತ್ತಿದ್ದರೆ ಇತ್ತ ಸಭೆಯಲ್ಲಿ ಕುಳಿತಿದ್ದ ಅನಂತ್ ಕುಮಾರ್ ನಲ್ಲಿ ವಿಜಯದ ನಗೆ ಉಕ್ಕುತ್ತಿದ್ದುದು ಕಾಕತಾಳೀಯವೇನಲ್ಲ. ಇವೆಲ್ಲವುಗಳಿಂದ ಹತಾಶೆಯಾಗಿ ಬಹಿರಂಗ ಸಮಾರಂಭದಲ್ಲಿಯೇ ಅದ್ವಾನಿಗೆ ಯಡಿಯೂರಪ್ಪ ಧಿಕ್ಕಾರ ಕೂಗಿದ್ದು ಅವರು ತಲುಪಿರುವ ಸ್ಥಿತಿಯ ದ್ಯೋತಕ. ಪಕ್ಷದಿಂದ ನಿರ್ಗಮಿಸುತ್ತಿರುವ ಯಡಿಯೂರಪ್ಪನವರ ಚಹಾ ಕೂಟದ ಬಲ ಪ್ರದರ್ಶನ ಶೆಟ್ಟರ ಸರಕಾರ ಕೃಪಾಕಟಾಕ್ಷದಲ್ಲಿ ಉಳಿದಿದೆ ಎಂಬ ಸಂದೇಶ ಹೊರಡಿಸಿದೆ. ನಿಜಕ್ಕೂ ರಾಜ್ಯದಲ್ಲಿ ಯಾವ ಪಕ್ಷದ ಸರಕಾರವಿದೆ? ಬಿಜೆಪಿ ಸರಕಾರವೋ, ಬಿಜೆಪಿ-ಕೆಜೆಪಿ ಸರಕಾರವೋ? ಯಡಿಯೂರಪ್ಪನವರ ಪ್ರಕಾರ ಇದು ಸಮಿಶ್ರ ಸರಕಾರ! ಅಧಿಕಾರದಲ್ಲಿ ಉಳಿಯಬೇಕೆಂದರೆ ಇದನ್ನು ಗಮನದಲ್ಲಿರಿಸಿ ಶೆಟ್ಟರ್ ರಾಜ್ಯಭಾರ ಮಾಡಬೇಕು ಎಂಬುದು ಯಡಿಯೂರಪ್ಪನವರ ಎಚ್ಚರಿಕೆ!.



ಉಳಿದೀತೆ , ಸರಕಾರ ಉರುಳೀತೆ!

ಡಿಸೆಂಬರ್ ನಲ್ಲಿ ನೂತನ ಪಕ್ಷದ ಸಮಾವೇಶ ನಡೆಸಲು ಸರ್ವ ಸಿದ್ಧತೆ ಆರಂಭಿಸಿ ಅನುಮಾನಗಳಿಗೆ ತೆರೆ ಎಳೆಯುವ ಪ್ರಯತ್ನವಂತೂ ನಡೆದಿದೆ. ನೊಂದಾಯಿತಗೊಂಡಿರುವ . ಕರ್ನಾಟಕ ಜನತಾಪಕ್ಷ(ಕೆಜೆಪಿ)ಕ್ಕೆ ಮಾಜಿ ಸಚಿವ ಧನುಂಜಯಕುಮಾರನ್ನು ಅಧ್ಯಕ್ಷನನ್ನಾಗಿ ನೇಮಿಸಲಾಗಿದೆ. ಆ ಪಕ್ಷಕ್ಕೆ ಮತ್ತು ಆ ಸಮಾವೇಶಕ್ಕೆ ಹೋದವರನ್ನು ಹೊರ ಹಾಕುವದಾಗಿ ಬಿಜೆಪಿ ಅಧ್ಯಕ್ಷ ಈಶ್ವರಪ್ಪ ಬೆದರಿಕೆ ಹಾಕುತ್ತಿದ್ದರೂ ಹಾಗೆ ಮಾಡಿ ಸರಕಾರ ಉರುಳಿಸಿಕೊಳ್ಳೋ ಧೈರ್ಯ ಇವರ್ಯಾರಿಗೂ ಇಲ್ಲ. ಕಾರಣ ಕೊನೆಯ ಕ್ಷಣದವರೆಗೂ ಅಧಿಕಾರವನ್ನು ಅನುಭವಿಸಬೇಕು, ಸಿಕ್ಕಿದಷ್ಟನ್ನು ಬಾಚಬೇಕು ಎಂಬ ದಾಹ ಎಲ್ಲರಲ್ಲೂ! ಹೀಗಿರುವಾಗಲೂ ಈ ಸರಕಾರವನ್ನು ಈ ಎಲ್ಲಾ ಗೊಂದಲ, ಕಿತ್ತಾಟಗಳ ನಡುವೆಯೂ ಮುಂದುವರಿಸುವುದೆಂದರೆ ಯಡಿಯೂರಪ್ಪ ಬಣ ಇಲ್ಲಿದ್ದೇ ಹಣದ ಸಂಪನ್ಮೂಲ ಕ್ರೋಢೀಕರಿಸಿಕೊಳ್ಳಲು ಆಸ್ಪದ ನೀಡಿದಂತೆಯೇ. ಅದಕ್ಕೆ ಅವಕಾಶ ನೀಡಬಾರದು ಎಂಬ ಒತ್ತಡವೂ ಹೆಚ್ಚಿದೆ. ಲಾಭ ನಷ್ಟಗಳ ಲೆಕ್ಕಾಚಾರದ ನಡುವೆ ಸರಕಾರ ದಿಗಳನ್ನು ಎಳೆಯುತ್ತಿದೆ. ಬರುವ ಫೆಬ್ರವರಿಯಲ್ಲಿ ಚುನಾವಣೆಗೆ ಹೋಗಬಹುದೇ ಎಂಬ ಊಹೆಗಳಿವೆ.

ಇವೆಲ್ಲವುಗಳ ನಡುವೆಯೂ ಆ ಸಮಾವೇಶದಲ್ಲಿ ಹತ್ತಾರು ಸಚಿವರು, ಶಾಸಕರು ಭಾಗವಹಿಸುವ ನಿರೀಕ್ಷೆಯಿದೆ. ಅದರೊಂದಿಗೆ ಮುಂದಿನ ತಿಂಗಳು ಸರಕಾರದ ಪತನ ನಿಶ್ಚಯವಾಗಲಿದೆ. ಸಮಾವೇಶದಲ್ಲಿ ಭಾಗವಹಿಸಿದರೆ ಶಿಸ್ತು ಕ್ರಮವೆಂಬ ಈಶ್ವರಪ್ಪನವರ ಗುಟುರಿಗೂ ಅಷ್ಟು ಬಲವಿಲ್ಲ. ಇದನ್ನೇ ಆಟದಾಳವಾಗಿ ಬಳಸಲು ಯಡಿಯೂರಪ್ಪ ಹಿಂದೆ ಬಿದ್ದಿಲ್ಲ.

ಹೀಗೆ ಶೆಟ್ಟರ್. ಸರ್ಕಾರ ವಿಶ್ವಾಸ ಕಳೆದುಕೊಂಡ ಸರ್ಕಾರ. ಕನಿಷ್ಟ ನೈತಿಕತೆಯಿದ್ದರೆ ಇಷ್ಟೊತ್ತಿಗೆ ರಾಜೀನಾಮೆ ಕೊಟ್ಟು ತೊಲಗಬೇಕಿತ್ತು. ಆದರೆ ಬಿಜೆಪಿ ಪಕ್ಷ ಭಂಡತನಕ್ಕೂ ಮೌಲ್ಯ ತಂದುಬಿಟ್ಟಿದೆ. ಮಾನ, ಮರ್ಯಾದೆ, ಸಂವೇದನೆಗಳನ್ನು ಬಿಜೆಪಿ ಬಿಟ್ಟು ದಶಕಗಳೇ ಆಗಿವೆ. ಇರುವಷ್ಟು ದಿನ ದೋಚುವ ಸಿದ್ಧಾಂತ ಅಪ್ಪಿಕೊಂಡಿರುವ ಇವರಲ್ಲಿ ನೈತಿಕತೆಗೆ ಎಲ್ಲಿದೆ ಬೆಲೆ?

ಇದೆಂಥಾ ಹವಣಿಕೆ

ಇಂತಹ ಸನ್ನಿವೇಶದಲ್ಲಿ ಅಧಿಕಾರವನ್ನು ಬಿಡದೇ, ಮುಂದಿನದ್ದನ್ನೂ ಕಾಯ್ದಿರಿಸುವ ಆತಂಕ ಇವರನ್ನು ಕಾಡುತ್ತಿದೆ. ತನ್ನ ಮಕ್ಕಳ ಕಿತ್ತಾಟದ ಈ ಎಲ್ಲಾ

ಪುಟ 4 ಕ್ಕೆ




ಹೋಳು ಹೋಳಾದ ಬಿಜೆಪಿ!

ಪುಟ 3 ರಿಂದ

ಬೆಳವಣಿಗೆಗಳಿಂದ ನಿಜಕ್ಕೂ ಆತಂಕಕ್ಕೆ ಒಳಗಾಗಿರುವುದು ಆರೆಸ್ಸೆಸ್. ಹೇಗಾದರೂ ಮುಂದೆಯೂ ಮತ್ತೆ ತನ್ನ ಸಂತತಿಯೇ ಅಧಿಕಾರಕ್ಕೇರಬೇಕಾದಲ್ಲಿ ಮಾಡಬೇಕಾದ ಸರ್ವ ಸಿದ್ಧತೆಯಲ್ಲಿ ಈ 'ಸಾಂಸ್ಕೃತಿಕ ಸಂಘಟನೆ' ತೊಡಗಿದೆ. ಕಡು ಭ್ರಷ್ಟ ಮತ್ತು ಜನದ್ರೋಹಿ ಸರಕಾರವನ್ನು ಕಿತ್ತೊಗೆಯುವ ಜನರ ಸಂಕಲ್ಪ ಮತ್ತು ಕ್ರಿಯಾತ್ಮಕ ಶಕ್ತಿಯನ್ನು ಒಡೆದು ಲಾಭ ಹೊಡೆಯಲು ಎಂದಿನಂತೆ ಅದರ ಕೋಮುವಾದೀ ವಿಭಜಕ ತಂತ್ರಕ್ಕೇ ಅದು ಮೊರೆ ಹೋಗಿದೆ.. ಆದ್ದರಿಂದಲೇ ಅದು ಕಾರ್ಯ ಪ್ರವೃತ್ತವಾಗಿದೆ. ಆಯ್ದ ವಿಧಾನಸಭಾ ಕ್ಷೇತ್ರಗಳಲ್ಲಿ ಕೋಮು ಗಲಭೆಗಳಾದಲ್ಲಿ ಮತೀಯ ವಿಭಜನೆಯ ಲಾಭ ಸುಲಭವಾಗಿ ದಕ್ಕುವುದು ಅವರಿಗೇ ಅಲ್ಲವೇ.

ಎಂಥ ವಿಪರ್ಯಾಸ ನೋಡಿ! ಬ್ರಿಟೀಶ್ ವಸಾಹತುಶಾಹಿಗಳ ವಿರುದ್ಧ ತಮ್ಮ ಪ್ರಾಣವನ್ನೇ ಪಣವಾಗಿಟ್ಟು ಹೋರಾಡಿ ಮಡಿದ ದೇಶಾಭಿಮಾನ ಕಲಿಗಳು ಟಿಪ್ಪು ಸುಲ್ತಾನ್ ಮತ್ತು ಸಂಗೊಳ್ಳಿ ರಾಯಣ್ಣ. ಆದರೆ ಟಿಪ್ಪು ಸುಲ್ತಾನ್‌ರ ಜನ್ಮದಿನಾಚರಣೆ ವೇಳೆ ಸಂಗೊಳ್ಳಿ ರಾಯಣ್ಣನ ಪ್ರತಿಮೆ ಕಟ್ಟೆಯನ್ನೇ ಬಳಸಿ ಚಿತ್ರದುರ್ಗದಲ್ಲಿ ಗಲಭೆ ಹುಟ್ಟಿಸಲಾಯಿತು ಮತ್ತು ಅದನ್ನು ಮತೀಯ ಕಲಹವನ್ನಾಗಿ ಹಬ್ಬಿಸಲೂ ಯತ್ನಿಸಲಾಯಿತು.



ಮೊನ್ನೆ ಬೆಳಗಾವಿಯಲ್ಲೂ ಟಿಪ್ಪು ಜನ್ಮ ದಿನಾಚರಣೆಯ ಮೆರವಣಿಗೆಯ ಮೇಲೆ 'ಕಿಡಿಗೇಡಿಗಳು' ಕಲ್ಲು ತೂರಿ ಗಲಭೆ ಎಬ್ಬಿಸಲು ಹವಣಿಸಿದ್ದಾರೆ. ಈ ಘರ್ಷಣೆಯ ಹಿಂದಿರುವ ಶಕ್ತಿಗಳ್ಯಾರು ಎಂಬುದು ಒಗಟ್ಟೇನಲ್ಲ. ಕೆಲ ಸಮಯದ ಹಿಂದೆ ಅರಸೀಕೆರೆಯಲ್ಲಿ ನಡೆದ ಗಲಭೆ ಈ ಉದ್ದೇಶದಿಂದ ಹೊರತೇನಲ್ಲ. ಕಳೆದ ತಿಂಗಳಲ್ಲಿ ಚಿಂತಾಮಣಿಯಲ್ಲಿ ಪೇದೆಯನ್ನು ಬಲಿ ತೆಗೆದುಕೊಂಡ ಪ್ರಕರಣ, ಅದೇ ವೇಳೆ ಹಲವು ಕಡೆ ನಡೆದ ಗಲಭೆಗಳು,ಚರ್ಚ್ ಮೇಲಿನ ಧಾಳಿಗಳು ರಾಜಕೀಯ ದುರ್ಲಾಭದ ಉದ್ದೇಶವನ್ನೆ ತೋರಿಸುತ್ತವೆ. ಈ ಪ್ರಯತ್ನಗಳು ಇಲ್ಲಿಗೇ ನಿಲ್ಲಲಾರವು ಎನಿಸುತ್ತದೆ. ಚುನಾವಣೆ ಹತ್ತಿರವಾದಷ್ಟೂ ಬಿಡಿ ಬಿಡಿಯಾಗಿ ನಡೆವ ಘಟನೆಗಳು ತೀವ್ರಗೊಂಡು ವಿಸ್ತರಿಸಬಹುದು. ಇದನ್ನು ಬರೀ ಘೋಷಿತ ಸಂಘಪರಿವಾರ ಮಾಡುತ್ತದೆ ಎಂದೇನಲ್ಲ. ಅದರಾಚೆಗಿದ್ದಾವೆಂಬ ಶಕ್ತಿಗಳೂ ತೊಡಗಬಹುದು. ಅವರಿಗೆ ತಮ್ಮ ಉದ್ದೇಶದ ಸಾಧನೆಯಾದರಷ್ಟೇ ಸಾಕಲ್ಲವೇ? ಅದಕ್ಕಾಗಿ ಅದು ದೊರೆತ ಯಾವ ಅವಕಾಶವನ್ನೂ ತಪ್ಪಿಸಿಕೊಳ್ಳುತ್ತಿಲ್ಲ. ಮುಂಬೈ ಭಯೋತ್ಪಾದಕ ದಾಳಿಯ ಹಂತಕ ಕಸಬ್‌ನನ್ನು ಗಲ್ಲಿಗೇರಿಸಿದ ಸಂದರ್ಭವನ್ನೂ ದೇಶಾದ್ಯಂತ ಸಿಹಿ ಹಂಚಿ ಅಬ್ಬರ ಮಾಡುವ ಮೂಲಕ ಅಲ್ಪ ಸಂಖ್ಯಾತರನ್ನು ಆರೋಪಿಸುವ, ಕೆಣಕುವ ದುರುದ್ದೇಶ ಇಲ್ಲದಿಲ್ಲ. ಇಂತಹದ್ದು ಒಬ್ಬ ಅಪ್ರಾಪ್ತ ಬಾಲಕಿಯನ್ನು ಅತ್ಯಾಚಾರ ಮಾಡಿ ಕೊಲೆಗೈದ ಕೊಲೆಪಾತಕಿಯನ್ನು , ಮಾಜಿ ಪ್ರಧಾನಿಗಳನ್ನು ಹತ್ಯೆ ಮಾಡಿದ ದ್ರೋಹಿಗಳನ್ನು ಗಲ್ಲಿಗೇರಿಸಿದಾಗ ಕಂಡು ಬರದಿರುವುದು ಅಂತಹ ಪ್ರಶ್ನೆಗಳನ್ನು ಎತ್ತುವಂತೆ ಮಾಡುತ್ತದೆ. ನಿಜ, ಆ ಹಂತಕನಗೆ ನಮ್ಮ ಕಾನೂನು ಕಠಿಣ ಶಿಕ್ಷೆ ವಿಧಿಸಿದೆ.ಸರಿ. ದಕ್ಷಿಣ ಕನ್ನಡದ ಒಬ್ಬ ಬೀಡಿ ಕಟ್ಟುವ ಮಹಿಳೆ ಇದನ್ನೇ ಕೇಳುತ್ತಿದ್ದಳು 'ನಿಜ ಆತನಿಗೆ ಕಾನೂನಿನಂತೆ ಶಿಕ್ಷೆ ಆಗಿದೆ ಸರಿ. ಆದರೆ ಆ ಸಾವನ್ನ ಹೀಗೆಲ್ಲಾ ಸಾರ್ವಜನಕವಾಗಿ ಸಂಭ್ರಮಿಸುವುದು ಅದೆಷ್ಟು ಸರಿ .ಎಂತಹ ಭಾವನೆ, ಪ್ರತಿಕ್ರಿಯೆಗಳನ್ನು ಇದು ಹುಟ್ಟಿಸುತ್ತದೆ.ನಾವು ಬಿತ್ತಬೇಕಾದ್ದು ದ್ವೇಷವನ್ನೋ ಅಥವಾ ಪ್ರೀತಿಯನ್ನೋ'? . ಚಿಂತಿಸುವ, ಉತ್ತರಿಸುವ ವ್ಯವಧಾನ ಅವರಿಗೆಲ್ಲಿದೆ ಹೇಳಿ?!

ಬಾಬಾಬುಡನ್ ಗಿರಿಯಲ್ಲಿ ಹಬ್ಬಿಸುತ್ತಿದ್ದಾರೆ ದಳ್ಳುರಿ

ಆರೆಸ್ಸೆಸ್ ನಂದ ಹೊರಗಿದ್ದಾನೆಂದು ಹೇಳಲಾಗುವ ಆದರೆ ಫ್ಯಾಸಿಸ್ಟ್ ಮಾದರಿಯ ಹಿಂದುತ್ವಕ್ಕೇ ಕಟಿ ಬದ್ಧವಾಗಿರುವ ಉಗ್ರವಾದಿ ಪ್ರಮೋದ ಮುತಾಲಿಕ ಮತ್ತೇ ಪ್ರಾಣ ಕೊಡುವುದಾಗಿ (ತೆಗೆಯುವುದಾಗಿ ಎಂದೂ ಓದಬಹುದು)ಹೇಳುತ್ತಿದ್ದಾನೆ. ಹಿಂದಿನಂತೆ ಎಂದು ಪರಂಪರೆಯಲ್ಲಿ ಇಲ್ಲದ ದತ್ತಮಾಲಾ ಆಭಿಯಾನ,ದತ್ತ ಜಯಂತಿ ಆಚರಣೆ ಮೂಲಕ ತ್ವೇಷ ಹುಟ್ಟು ಹಾಕುವ ಉದ್ದೇಶವಿದೆ. ಹಿಂದುಗಳಿಗೂ ಮುಸ್ಲಿಂರಿಗೂ, ಇತರೆ ಜಾತಿ ಜನಾಂಗಗಳಿಗೂ ಶ್ರದ್ಧಾ ಕೇಂದ್ರವಾಗಿರುವ ಬಾಬಾಬುಡನ್ ಗಿರಿಯ ದರ್ಗಾ–ಪೀಠದ ಪುರಾತನ ಗುಹೆಯು 2008ರಲ್ಲಿ ಕುಸಿದಿದ್ದರಿಂದ ದುರಸ್ತಿಗಾಗಿ ಅಲ್ಲಿದ್ದ ಪಾದುಕೆಗಳನ್ನು ಚಿಕ್ಕಮಗಳೂರು ಜಿಲ್ಲಾಡಳಿತ, ಏಕಪಕ್ಷೀಯವಾಗಿ ಮುಜರಾಯಿ ಇಲಾಖೆಯ ಸುಪರ್ದಿನಲ್ಲಿ ಇರಿಸಿತ್ತು. ಅವುಗಳನ್ನು ಈಗ ಪೂಜೆಗೆ ನೀಡಬೇಕೆಂದು ಆಗ್ರಹಿಸುತ್ತಿದ್ದಾನೆ ಮುತಾಲಿಕ! ಹೀಗೆ ಯಾರೊಬ್ಬರಿಗೆ ಪೂಜೆಗೆ ಕೊಡುವುದು ಅಲ್ಲಿನ ಸೂಫಿ ಪರಂಪರೆಗೆ, ನ್ಯಾಯಾಲಯದ ಆದೇಶಕ್ಕೂ ವಿರುದ್ಧವಾದುದು. ಮೊದಲನೆಯದಾಗಿ ಅಲ್ಲಿ ಪೂಜೆಯಂತಹ ಆಚರಣೆಯೇ ಇಲ್ಲ, ಹೀಗಿರುವಾಗ ಆಚರಣೆಗೆ ಕೇಳುವುದರಲ್ಲಿ ಏನರ್ಥವಿದೆ. ಇದನ್ನು ದಕ್ಷಿಣ ಭಾರತದ ಅಯೋಧ್ಯೆಯನ್ನಾಗಿಸುವ ಅಜೆಂಡಾದ ಭಾಗವಾಗಿದೆ ಅಲ್ಲವೇ?. ಎರಡನೆಯದಾಗಿ ಅವುಗಳನ್ನು ಪೂಜೆ ಮಾಡುವಂತಿದ್ದರೆ ಅದು ಕೇವಲ ಅಲ್ಲಿನ ಧರ್ಮಾದಿಕಾರಿಯಾದ ಮುಜಾವರ್–ಸಜ್ಜಾದ್ ಎ ನಿಶಾನ್ ರವರು ಮಾತ್ರ ಪೀಠ ಮತ್ತು ಪಾದುಕೆ ಇರುವ ಪ್ರದೇಶಕ್ಕೆ ಪ್ರವೇಶಿಸಬಹುದು ಹೊರತು ಬೇರಾರಿಗೂ ಹಕ್ಕಿಲ್ಲ. ಆದರೆ ಯಾವುದಾದರೂ ಪ್ರಮುಖ ಮಠಾಧೀಶರು ಬಯಸಿದಲ್ಲಿ ಮುಜಾವರರೊಂದಿಗೆ ಆ ಪ್ರದೇಶದಲ್ಲಿ ಪ್ರವೇಶಿಸಬಹುದು, ದರ್ಶನ ಪಡೆಯಬಹುದು. ಮೂರನೆಯದಾಗಿ ಅಲ್ಲಿ ಇವನ್ನು ಹೊರತು ಪಡಿಸಿ ಯಾವುದೇ ವಿಗ್ರಹವಾಗಲೀ ಭಾವಚಿತ್ರವಾಗಲೀ ಕೊಂಡೊಯ್ಯುವಂತಿಲ್ಲ . ಇಲ್ಲಿನ ಪರಂಪರಾಗತ ಆಚರಣೆಯನ್ನು ಸುಪ್ರೀಂಕೋರ್ಟ್ ಎತ್ತಿ ಹಿಡಿದಿದೆ. ದುರಸ್ತಿ ನಡೆಸುವಾಗಲೂ ಗುಹೆಯ ವಿನ್ಯಾಸವನ್ನೂ ಒಳಗೊಂಡು ಇದಕ್ಕೆ ಯಾವುದೇ ಚ್ಯುತಿ ಬರದಂತೆ ಯಥಾ ಸ್ಥಿತಿಯನ್ನು ಕಾಪಾಡಿಕೊಂಡು ಬರಬೇಕೆಂದು ನಿರ್ದೇಶಿಸಿದೆ. ಆದರೆ ಹಿಂದೆ ಸಂಘ ಪರಿವಾರ ದತ್ತ ಮೂರ್ತಿ ಇರಿಸುವ, ಹವನ ಹೋಮ ನಡೆಸುವ , ಶೋಭಾ ಯಾತ್ರೆ ಹೆಸರಿನಲ್ಲಿ ಕೋಮುದ್ವೇಶ ಹೆಚ್ಚಿಸುವ ಪ್ರಯತ್ನಗಳನ್ನು ನಡೆಸುತ್ತಾ ಬಂದಿದೆ. ಇಂತಹ ಉಲ್ಲಂಘನೆಗಳನ್ನು ನಿರ್ಬಂಧಿಸುವಲ್ಲಿ ವಿಫಲವಾಗಿ, ರಾಜಿ, ಚಂಚಲತೆ ಹಾಗೂ ಸಂದರ್ಭ ಸಾಧಕ ನೀತಿಗಳನ್ನು ಅನುಸರಿಸಿದ ಬಹುತೇಕ ಹಿಂದಿನ ಸರಕಾರಗಳು ಕೋಮುವಾದೀ ಶಕ್ತಿಗಳು ಬೆಳೆಯಲು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಕಾರಣವಾಗಿವೆ. ಆದೀಗ ಬಿಜೆಪಿಯ ಸರಕಾರ ಅಧಿಕಾರದಲ್ಲಿದೆ ಮತ್ತು ಇಂತಹ ಸಂವಿಧಾನ ವಿರೋದಿ ಕೃತ್ಯಗಳಲ್ಲಿ ತೊಡಗಿ ಕೋಮುವಾದದ ಬೆಳವಣಿಗೆಯಿಂದ ಲಾಭ ಹೊಡೆದ ಸಿ.ಟಿ.ರವಿ ಅಲ್ಲಿನ ಉಸ್ತುವಾರೀ ಸಚಿವರಾಗಿದ್ದಾರೆ. ಚುನಾವಣೆಗಳು ಹತ್ತಿರವಿರುವುದು ಗುಪ್ತ ಅಜೆಂಡಾಗಳನ್ನು ತರಲು ಇನ್ನಷ್ಟು ಕುಮ್ಮಕ್ಕು ನೀಡಿದರೆ ಆಶ್ಚರ್ಯವಿಲ್ಲ. ಬಿಜೆಪಿಯೊಳಗಿನ ಕಿತ್ತಾಟ ಆಡಳಿತವನ್ನೂ ಶಿಥಿಲಗೊಳಿಸಿದೆ. ಇಂತಹ ಸನ್ನಿವೇಶ ಸಂಘಪರಿವಾರದ ಕೃತ್ಯಗಳಿಗೆ ಯಥೇಚ್ಛ ಅವಕಾಶ ನೀಡಿದೆ. ಹೀಗಾಗಿ ಅಲ್ಲಿ ಸೌಹಾರ್ದತೆಯ ಸಂತ– ಸೂಫಿ ಪರಂಪರೆಯನ್ನು ನಾಶಗೊಳಿಸುವ ಅಪಾಯವಿದ್ದೇ ಇದೆ.

ಬಿಜೆಪಿ ಸರ್ಕಾರಕ್ಕೆ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅತ್ಯಂತ ಪ್ರಮುಖವಾದ ಸಂವಿಧಾನಬದ್ಧ ಕರ್ತವ್ಯಗಳಿವೆ ಎಂಬುದನ್ನು ಮರೆಯಬಾರದು .ಅದರಲ್ಲೂ ಅಧಿಕಾರದಲ್ಲಿರುವಾಗ ಇನ್ನಷ್ಟು ಹೆಚ್ಚಿನ ಹೊಣೆಗಾರಿಕೆ ಇದ್ದೇ ಇದೆ. ಈ ದೆಶೆಯಲ್ಲಿ ಹುಬ್ಬಳ್ಳಿಯ ಈದ್ಗಾ ಮೈದಾನದ ವಿವಾದದ ಹಿನ್ನೆಲೆಯಲ್ಲಿ ಮುನ್ನೆಲೆಗೆ ಬಂದ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಎಲ್ಲವನ್ನೂ ಗಂಭೀರವಾಗಿ ತನ್ನ ಮೇಲಿನ ಜವಾಬ್ದಾರಿಗಳನ್ನು ಪರಿಗಣಿಸಬೇಕು. ನಾಡಿನ ಜನತೆಯ ಪ್ರಾಣ, ಆಸ್ತಿ ಮತ್ತು ಸೌಹಾರ್ಧತೆ ಕಾಯುವ ದಿಕ್ಕಿನಲ್ಲಿ ಗಂಭೀರವಾಗಿ ಯೋಚಿಸಬೇಕು.ಕಾರ್ಯ ಪ್ರವೃತ್ತರಾಗಬೇಕು. ಆದ್ದರಿಂದ ಪರಿವಾರವೇ ಆಗಲೀ ಯಾರೇ ಆಗಲಿ ಕಾನೂನು ಉಲ್ಲಂಘಿಸುವ , ಶಾಂತಿ ಕದಡುವ ಶಕ್ತಿ–ವ್ಯಕ್ತಿಗಳ ಮೇಲೆ ನಿಷ್ಟುರವಾಗಿ,ಧೃಡ ಕ್ರಮಗಳನ್ನು ಕೈಗೊಳ್ಳಬೇಕು, ದಮನಸಬೇಕು. ನ್ಯಾಯಾಲಯದ ತೀರ್ಪಿನಂತೆ 1975ರ ಹಿಂದಿನ ಆಚರಣೆಗಳಿಗೆ ಮಾತ್ರ ಅವಕಾಶ ನೀಡಬೇಕು.

ಅಪಾಯವಿದ್ದೇ ಇದೆ

ಅದರೆ ಈಗಲೂ ಸರಕಾರದ ಆಡಳಿತ ಯಂತ್ರವನ್ನು ನಡೆಸುವಲ್ಲಿ ಚುನಾಯಿತ ಬಿಜೆಪಿ ಸರಕಾರದ ಬದಲು ಆರೆಸ್ಸೆಸ್ ನಾಯಕರೇ ಆಡಳಿತವನ್ನು ನಿರ್ದೇಶಿಸುತ್ತಿದ್ದಾರೆ, ನಿಯಂತ್ರಿಸುತ್ತಿದ್ದಾರೆ ಎಂದೇ ಕಾಣುತ್ತದೆ. ಮಂಗಳೂರಿನ ಹೋಂಸ್ಟೇ ಮೇಲಿನ ಸಂಘಪರಿವಾರದ ಗೂಂಡಾಗಳ ಧಾಳಿಯನ್ನು ಟಿ.ವಿ.ಚಾನೆಲ್ ನಲ್ಲಿ ವರದಿ ಮಾಡಿದ ನವೀನ್ ಸುರಿಂಜೆಯನ್ನು ದಮನಿಸಲು ದ.ಕನ್ನಡದ ಜಿಲ್ಲಾಡಳಿತ ಸುಳ್ಳು ಕೇಸ್ ಹಾಕಿ ಜೈಲಿಗೆ ತಳ್ಳಿದ್ದರಲ್ಲಿ ಕರಾವಳಿ ಆರೆಸ್ಸೆಸ್ ನಾಯಕರೇ ನಂತಿದ್ದಾರೆ. ಈ ಬಂಧನ ತಪ್ಪೆಂದು ರಾಜ್ಯದ ಉಚ್ಚ ನ್ಯಾಯಾಲಯ ಹೇಳಿ ಮಧ್ಯಂತರ ತಡೆಯಾಜ್ಞೆ ನೀಡಿದಾಗ್ಯೂ ನ್ಯಾಯಾಲಯಕ್ಕೆ ಕೈಕೋಳ ಹಾಕಿ ಕರೆದು ತಂದ ದುಷ್ಟತನಕ್ಕೆ ಏನೆನ್ನಬೇಕು? ಮಾಧ್ಯಮಗಳ ಕೊರಳು ಹಿಸುಕುವಲ್ಲಿ ಈ ಪ್ರಜಾಪ್ರಭುತ್ವ ಹಂತಕರು ಹಿಂದೆ ಬಿದ್ದಿಲ್ಲ,ಬೀಳುತ್ತಿಲ್ಲ. ಈಗಲೂ ಅದೇ ಅಪಾಯದ ಗಂಟೆ ಶಾಂತಿ, ಸೌಹಾರ್ಧತೆಯ ಕೇಂದ್ರ ಬಾಬಾಬುಡನ್ ಗಿರಿಯಲ್ಲೂ ಬಾರಿಸುತ್ತಲೇ ಇದೆ.

ಆದ್ದರಿಂದ ಪ್ರಜಾಪ್ರಭುತ್ವ, ಕೋಮುಸೌಹಾರ್ಧತೆ ರಕ್ಷಿಸಲು ಹೆಚ್ಚಿನ ಮುತುವರ್ಜಿ ಅಗತ್ಯ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಭ್ರಷ್ಟಚಾರ, ದುರಾಡಳಿತದ ವಿರುದ್ಧ

ಸಿಪಿಐ(ಎಂ) ಜನಜಾಗೃತಿ ಜಾಥಾ ಆರಂಭ

ದಿನ ಬೆಳಗಾದರೆ ಹಗಲು ದರೋಡೆಯಲ್ಲಿ ತೊಡಗಿರುವ, ದಿನದಿಂದ ದಿನಕ್ಕೆ ಬೆಲೆಗಳನ್ನು ಏರಿಸುತ್ತಿರುವ ಜನಸಾಮಾನ್ಯರ ಬದುಕು ಮೂಲೆ ಗುಂಪು ಮಾಡುತ್ತಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜನ ವಿರೋಧಿ ನೀತಿಯನ್ನು ಪ್ರತಿಭಟಿಸಿ ಸಿಪಿಐ(ಎಂ) ಹಮ್ಮಿಕೊಂಡಿರುವ ಪ್ರಚಾರಾಂದೋಲನ ಜಾಥಾವನ್ನು ನವೆಂಬರ್ 18 ರಂದು ರಾಮದುರ್ಗ ದುರಂತದಲ್ಲಿ ಮಡಿದಿರುವ ಹುತಾತ್ಮರಿಗೆ ವಂದಿಸುವುದರೊಂದಿಗೆ

ಬಡಜನರಿಗೆ ಮನೆ ಕೊಡಿ ಎಂದು ಕೇಳಿದರೆ ಭೂಮಿ ಇಲ್ಲ ಎನ್ನುವ ಸರ್ಕಾರಗಳು ಸಾವಿರ ಎಕರೆ ಗಟ್ಟಲೆ ಭೂಮಿಯನ್ನು ವಿದೇಶಿ ಕಂಪನಿಗಳಿಗೆ ನೀಡಿ ಬಡಜನರನ್ನು ಬೀದಿಗೆ ತಳ್ಳುವ ನೀತಿಯನ್ನು ಅನುಸರಿಸುತ್ತಿವೆ. ತಮ್ಮ ಕುರ್ಚಿಗಾಗಿ ಕಚ್ಚಾಡುತ್ತಿರುವ ಜನ ಒಂದೊಂದು ಹೊಸ ಪಕ್ಷ ಕಟ್ಟುವಲ್ಲಿ ನಿರತರಾಗಿದ್ದಾರೆ. ಒಂದು ಕೋಟಿ 76 ಲಕ್ಷ 2ಜಿ ಹಗರಣದಲ್ಲಿ ಭಾಗಿ ಆಗಿ. ಒಂದು ಕೋಟಿ 86 ಲಕ್ಷ ಕೋಟಿ ಕಲ್ಲಿದ್ದಲಲ್ಲಿ ದರೋಡೆ ಮಾಡಿ ಆ ಮುಲಕ ವಿದ್ಯುತ್ ಪುರೈಸುವಲ್ಲಿ ತೊಂದರೆ ಮಾಡುವ ಕೇಂದ್ರ ಕಾಂಗ್ರೆಸ್ ಸರ್ಕಾರದ ನೀತಿ ಖಂಡನೀಯ. ಎಲ್ಲಾ ಚುನಾಯಿತಿ ಪ್ರತಿನಿಧಿಗಳು ದರೋಡೆ ಮಾಡುವುದನ್ನು ಬಿಟ್ಟರೆ ನಮ್ಮ ಕೇಂದ್ರದ ಬಜೆಟ್ 50 ಲಕ್ಷ ಕೋಟಿ ಆಗಬಹುದು. ಅದೇ ರಿತಿಯಲ್ಲಿ ರಾಜ್ಯದ ಗಣಿ ಸಂಪತ್ತು, ಭೂ ಸಂಪತ್ತು ಲೂಟಿ ಮಾಡಿ ಜೈಲಿಗೆ ಹೋಗಿ ಬಂದ ಬಿಜೆಪಿಯವರು ಮತ್ತೆ ಅಧಿಕಾರ ಗಿಟ್ಟಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇವರೆಲ್ಲರಿಗೆ ಜನರೇ ತಕ್ಕ ಪಾಠ ಕಲಿಸಬೇಕೆಂದು ಜಾಥಾ ಉದ್ಘಾಟಿಸಿ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್. ನಾಗರಾಜ ಹೇಳಿದರು.

ಪ್ರಾದೇಶಿಕ ಪಕ್ಷಗಳನ್ನು ಕಟ್ಟಿ ರಾಜ್ಯದ ಉದ್ಧಾರ ಮಾಡುತ್ತೇವೆ ಎಂದು ಹೇಳಿ ಹೊಸ ಪಕ್ಷಗಳನ್ನು ಕಟ್ಟಿ ಮುಂದಿನ ಅವಧಿಯಲ್ಲಿಯೂ ದರೋಡೆ ಮಾಡಲು ಹೊಂಚು ಹಾಕುವ ಕುತಂತ್ರ ರಾಜಕಾರಣಿಗಳಿಗೆ ಜನರೇ ಉತ್ತರಿಸಬೇಕು. ಅಧಿಕಾರ ಇದ್ದಾಗ ಜನರ ಸಮಸ್ಯೆಗಳಿಗೆ ಸ್ಪಂದಿಸದೇ ಇರುವ ಯಡಿಯೂರಪ್ಪ, ಶ್ರೀ ರಾಮುಲುರವರು ಪ್ರಾದೇಶಿಕ ಪಕ್ಷ ಕಟ್ಟಿ ಜನರ ಉದ್ಧಾರ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಇವರನ್ನು ನಂಬುವುದು ಹೇಗೆ ಸಾಧ್ಯ ಎಂದು ಇನ್ನೊಬ್ಬ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ನಿತ್ಯಾನಂದ ಸ್ವಾಮಿ ಅವರು ಪ್ರಶ್ನಿಸಿದರು.

ಹಿಂದೆ ರಾಮದುರ್ಗ ಸಂಸ್ಥಾನ ರಾಜರ ವಿರುದ್ಧ ದೊಡ್ಡ ಪ್ರಮಾಣ ಚಳುವಳಿ ನಡೆದು ರಾಮದುರ್ಗ ದುರಂತ ಎಂದೇ ಇತಿಹಾಸವಿದೆ.



ಅದೇ ರೀತಿಯಲ್ಲಿ ಇವತ್ತಿನ ಭ್ರಷ್ಟ ರಾಜಕಾರಣಿಗಳ ವಿರುದ್ಧ ಚಳುವಳಿಯನ್ನು ಮಾಡಿ ಭ್ರಷ್ಟರನ್ನು ಓಡಿಸಿ ಹೊಸ ಭಾರತವನ್ನು ಕಟ್ಟಬೇಕಾಗಿದೆ ಎಂದು ಸಿಪಿಐ(ಎಂ) ಮುಖಂಡರಾದ ವಿ.ಪಿ. ಕುಲಕರ್ಣಿರವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಪಕ್ಷದ ತಾಲೂಕಾ ಕಾರ್ಯದರ್ಶಿ ಗೈಬು ಜೈನೆಖಾನ ಸ್ವಾಗತಿಸಿದರು. ಜಿಲ್ಲಾ ಕಾರ್ಯದರ್ಶಿ ಎಲ್.ಎಸ್. ನಾಯ್ಕ ರವರು ಕೊನೆಯಲ್ಲಿ ವಂದಿಸಿದರು. ಮುಖಂಡರಾದ ಎಸ್.ಬಿ. ಹಳ್ಳಿ, ನಾಗಪ್ಪ ಸಂಗೊಳ್ಳಿ ಮತ್ತು ಎಫ್.ಎಂ.ನದಾಫ್ ವೇದಿಕೆ ಮೇಲೆ ಉಪಸ್ಥಿತರಿದ್ದರು. 200 ಕ್ಕೂ ಹೆಚ್ಚು ಜನ ಸಭೆಯಲ್ಲಿ ಭಾಗವಹಿಸಿದ್ದರು.

ರಾಮದುರ್ಗದಿಂದ ಹೊರಟ ವಾಹನ ಜಾಥಾ ಕಡಗೋಳ, ಯರಗಟ್ಟಿ ಮಾರ್ಗವಾಗಿ ಸಂಜೆಯಾಗುತ್ತಿದ್ದಂತೆ ಬೆಳಗಾವಿ ನಗರವನ್ನು ಪ್ರವೇಶಿಸಿತು. ಪಕ್ಷದ ಸದಸ್ಯರು, ಹಿತೈಷಿಗಳು, ಸಿಐಟಿಯು ಕಾರ್ಮಿಕ ಸಂಘಗಳಿಗೆ ಸೇರಿದ ಕಾರ್ಮಿಕರು ಕನ್ನಡ ಸಾಹಿತ್ಯ ಪರಿಷತ್ ಭವನದ ಬಳಿ ಜಾಥಾವನ್ನು ಸ್ವಾಗತಿಸಿದರು. ಆನಂತರ ಹಿರಿಯ ಕಾರ್ಮಿಕ ದುರೀಣರಾದ ಕಾಮ್ರೆಡ್ ಸಿ.ಎ. ಖರಾಡೆ ಅವರು ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕಾಂ. ನಿತ್ಯಾನಂದ ಸ್ವಾಮಿ ಹಾಗೂ ಕಾಂ. ಜಿ.ಎನ್.ನಾಗರಾಜ ಮಾತನಾಡಿ ಕೇಂದ್ರದ ಕಾಂಗ್ರೆಸ್ ಸರ್ಕಾರ ಹಾಗೂ ರಾಜ್ಯದ ಬಿಜೆಪಿ ಸರ್ಕಾರದ ಧೋರಣೆಗಳು ಹೇಗೆ ಮಾಲಿಕರ ಪರವಾಗಿವೆ ಮತ್ತು ಕಾರ್ಮಿಕ ವಿರೋಧಿಯಾಗಿವೆ ಎಂದು ವಿವರಿಸಿದರು. ಕಳೆದ 30 ಕ್ಕೂ ಹೆಚ್ಚು ದಿನಗಳಿಂದ ಮುಷ್ಕರ ನಿರತವಾಗಿರುವ ಕೆ.ಎಲ್.ಇ. ಆಸ್ಪತ್ರೆಯ ನರ್ಸಿಂಗ್ ಸಿಬ್ಬಂದಿಯ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ. ಮಹಾಂತೇಶ್, ವಿಮಾ ನೌಕರರ ಮುಖಂಡರಾದ ಜಿ.ವಿ. ಕುಲಕರ್ಣಿ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಎಲ್.ಎಸ್. ನಾಯಕ್, ಇಂಡಾಲ್ ಕಾರ್ಮಿಕ ಸಂಘದ ಮುಖಂಡರಾದ ಎಸ್.ಎಸ್. ಕಾಂಬಳ, ವಿ.ಎಸ್. ಜುಮನಾಳ,

ಪುಟ 15ಕ್ಕೆ

ಕರಾವಳಿಗುಂಟ ಸಾಗಿದೆ ·ಜಾಥಾ

21ರಂದು ಜೋಯ್ಡಾ,ಕಾರವಾರ, 22ರಂದು ಅಂಕೋಲಾ,ಹೊನ್ನಾವರ ಕುಮುಟಾ, ಭಟ್ಕಳದ ಶಿರಾಲಿಯಲ್ಲಿ ಸಭೆಗಳಾದವು. ಅಂದು ವಿಶೇಷವಾಗಿ ಶಿರಾಲಿಯಲ್ಲಿ ನೂರಾರು ಜನತೆ–ದುಡಿಯುವ ಮಹಿಳೆಯರು ಅತ್ಯಂತ ಉತ್ಸಾಹದಲ್ಲಿ ಸಿಡಿಮದ್ದು ಸಿಡಿಸಿ, ಹೂ ಚೆಲ್ಲಿ ಆವೇಶಕರ ಘೋಷಣೆಗಳನ್ನು ಕೂಗಿ ಬರ ಮಾಡಿಕೊಂಡದ್ದು ಸ್ಮರಣೀಯ.ಹಾಗೆಯೇ ಅಲ್ಲಿ ನಡೆದ ಬಹಿರಂಗ ಸಭೆಯಲ್ಲಿಯೂ ನೂರಾರು ಸರ್ವಜನಕರೂ ಬಾಗವಹಿಸಿ. ಸಹಮತ, ಬೆಂಬಲ ಸೂಚಿಸಿದ್ದು ಸ್ಪೂರ್ತಿದಾಯಕವಾಗಿತ್ತು. ಅಲ್ಲದೇ ಹಾದಿಯಲ್ಲಿ ದೇವಗಾ ದಂತಹ ಗ್ರಾಮಗಳ ರೈತರು, ನಾಗರೀಕರು ಜಾತಾವನ್ನು ಸ್ವಯಂಪ್ರೇರಿತರಾಗಿ ಬರ ಮಾಡಿಕೊಂಡು ತಮ್ಮನ್ನು ಅಲ್ಲಿಂದ ಎತ್ತಂಗಡಿ ಮಡಿಸುತ್ತಿರುವ ಸ್ಥಿತಿಗತಿಗಳನ್ನು ವಿವರಿಸಿ ಬೆಂಬಲ ಕೋರಿದರು.

23ರಂದು ಭಟ್ಕಳದಿಂದ ಹೊರಟ ಜಾಥಾವನ್ನು ಉಡುಪಿ ಜಿಲ್ಲೆಯ ಸಂಗಾತಿಗಳು ಬೈಂದೂರಿನಲ್ಲಿ ಸ್ವಾಗತಿಸಿದರು. ಈಲ್ಲಾ ಕಾರ್ಯದರ್ಶಿ ಹಾಗೂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಶಂಕರ್ , ರಾಜ್ಯ ಸಮಿತಿ ಸದಸ್ಯರಾದ ಮಹಾಬಲ ಒಡೆರ ಹೋಬ್ಳಿ, ವೆಂಕಟೇಶ ಕೋಣಿ, ರಾಜು ಪಡುಕೋಣೆ ಮುಂತಾದವರು ಹೂ ಗಚ್ಛ ನೀಡಿ ಸ್ವಾಗತಿಸಿದರು. ಅಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಎಸ್.ವೈ ಗುರುಶಾಂತ್ ಮಾತನಾಡಿದರು. ನಂತರ ತಲ್ಲೂರು ನಲ್ಲಿ ನಡೆದ ಸಭೆಯನ್ನು ಉದ್ದೇಶಿಸಿ ಜಾಥಾ ತಂಡದ ನಾಯಕರಾದ ಜಿ.ಎನ್ ನಾಗರಾಜ್ ಮಾತನಾಡಿದರು. ಹೀಗೆ ಕರಾವಳಿ ತೀರದಲ್ಲಿ ತಾಥಾ ಸಾಗಿದೆ. ಮುಂದೆ ಕುಂದಾಪುರದಲ್ಲಿ ಬಹಿರಂಗ ಸಭೆ ನಡೆಡೆಯಲಿದೆ. ನಂತರ 24ರಂದು ಉಡುಪಿಯತ್ತ ಸಾಗಲಿದೆ.



ದಲಿತರ ಸೌಲಭ್ಯ ವಂಚನೆ ವಿರುದ್ಧ ಪಾಲಿಕೆ ಎದುರು ಪ್ರತಿಭಟನೆ

ಮಂಗಳೂರು ಮಹಾ ನಗರ ಪಾಲಿಕೆಯಲ್ಲಿ ಬಿಜೆಪಿ ಆಡಳಿತಕ್ಕೆ ಐದು ವರ್ಷ ಸಮೀಪಿಸುತ್ತಿದ್ದು, ಇಷ್ಟೂ ವರ್ಷಗಳಲ್ಲಿ ದಲಿತರ ಅಭಿವೃದ್ಧಿ ಕಡೆಗಣಿಸಿ, ವಿವಿಧ ಯೋಜನೆಗಳಲ್ಲಿ ಅನುದಾನವನ್ನು ಕಡಿತಗೊಳಿಸುವ ಮೂಲಕ ದಲಿತ ಸಮುದಾಯಕ್ಕೆ ಅನ್ಯಾಯ ಎಸಗಿದೆ ಎಂದು ಸಿಪಿಐ(ಎಂ) ದಲಿತ ಹಕ್ಕುಗಳ ರಾಜ್ಯ ಸಮಿತಿಯ ಮುಖಂಡರಲ್ಲೊಬ್ಬರಾದ ಕೃಷ್ಣಪ್ಪ ಕೊಂಚಾಡಿ ಆರೋಪಿಸಿದರು.

ವಂಚನೆ ಎದ್ದು ಕಂಡು ಬರುತ್ತದೆ ಎಂದು ಕೃಷ್ಣಪ್ಪ ಕೊಂಚಾಡಿ ವಿವರಿಸಿದರು.

ಸಿಪಿಐ(ಎಂ) ಮಂಗಳೂರು ನಗರ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿ, ಬಡ ದಲಿತ ಸಮುದಾಯದವರು ಹೆಚ್ಚು ಸಂಖ್ಯೆಯಲ್ಲಿ ವಾಸಿಸುವ ನಗರದ ತಣ್ಣೀರುಬಾವಿ, ಬೋಳೂರು, ಪಾಂಡೇಶ್ವರ, ಮುಳ್ಳಕಾಡು, ಕುದ್ರೋಳಿಗುಡ್ಡೆ ಮೊದಲಾದ ಕಡೆ ಬಿಜೆಪಿ ಆಡಳಿತ ಅವರಿಗೆ ಹಕ್ಕುಪತ್ರ ನೀಡದೆ



ನವಂಬರ್ 19 ರಂದು ಮಂಗಳೂರು ಮಹಾ ನಗರ ಪಾಲಿಕೆ ಎದುರು ಪಾಲಿಕೆಯ ದಲಿತ ವಿರೋಧಿ ಧೋರಣೆ ವಿರೋಧಿಸಿ ದಲಿತ ಹಕ್ಕುಗಳ ಮಂಗಳೂರು ನಗರ ಸಮಿತಿ ಮತ್ತು ಸಿಪಿಐ(ಎಂ) ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕಳೆದ ನಾಲ್ಕು ವರ್ಷಗಳಿಂದ ಸಮಿತಿಯು ಪದೇ ಪದೇ ಮನವಿ ಹಾಗೂ ಪ್ರತಿಭಟನೆಗಳನ್ನು ಪಾಲಿಕೆ ಹಾಗೂ ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಹಮ್ಮಿಕೊಂಡಿದ್ದರೂ ದಲಿತರಿಗೆ ನೀಡುವ ಸವಲತ್ತುಗಳ ವಿಷಯದಲ್ಲಿ ಪಾಲಿಕೆ ಯಾವ ಹೆಜ್ಜೆಯನ್ನೂ ಮಾಡದಿರುವ ಹಿನ್ನೆಲೆಯಲ್ಲಿ ಹತ್ತನೇ ಬಾರಿಗೆ ಪ್ರತಿಭಟನೆಯನ್ನು ನಡೆಸಲಾಗಿತ್ತು.

ಪಾಲಿಕೆ 2006–07ರ ವಾರ್ಷಿಕ ಬಜೆಟಿನಲ್ಲಿ ದಲಿತರ ಅಭಿವೃದ್ಧಿಗಾಗಿ 2.32 ಕೋಟಿ ರೂಪಾಯಿ ಮೀಸಲಿಟ್ಟರೆ, ಐದು ವರ್ಷಗಳ ಅನಂತರ 2012–13ನೇ ವರ್ಷದ ಬಜೆಟಿನಲ್ಲಿ ಕೇವಲ 1.15 ಕೋಟಿ ರೂಪಾಯಿ ಮೀಸಲಿಟ್ಟಿರುವುದು ದಲಿತ ಸಮುದಾಯಕ್ಕೆ ಮಾಡಿದ ವಂಚನೆಯಾಗಿದೆ. ಅದರಲ್ಲೂ ಈ ಅವಧಿಯಲ್ಲಿ ಪಾಲಿಕೆಯ ಆದಾಯ ಬಹಳಷ್ಟು ಹೆಚ್ಚಾಗಿದ್ದು ಮಾತ್ರವಲ್ಲದೆ, ಸರ್ಕಾರವು ದಲಿತ ನಿಧಿ ಮೀಸಲಾತಿಯನ್ನು ಬಜೆಟ್ಟಿನಲ್ಲಿ ಒಟ್ಟು 18% ದಿಂದ 22.75% ಹೆಚ್ಚಿಸಿರುವ ಹಿನ್ನೆಲೆಯಲ್ಲಿ ಈ

ಸತಾಯಿಸುತ್ತಿದೆ; ಇದರಿಂದ ಸರ್ಕಾರದ ಸೌಲಭ್ಯಗಳು ದೊರೆಯುತ್ತಿಲ್ಲ ಎಂದು ದೂರಿದರು. ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ವಸಂತ ಆಚಾರಿ ಮಾತನಾಡಿ ಇಷ್ಟೊಂದು ಬಾರಿ ಪಾಲಿಕೆ ಎದುರು ಮನವಿ, ಪ್ರತಿಭಟನೆ ನಡೆಸಿದರೂ ದಲಿತರ ಪ್ರಶ್ನೆಗೆ ಸ್ಪಂದಿಸದ ಆಡಳಿತ, ಇನ್ನೆರಡು ತಿಂಗಳೊಳಗೆ ತಮ್ಮ ಬೇಡಿಕೆಗಳಿಗೆ ಸ್ಪಂದಿಸದಿದ್ದಲ್ಲಿ ಪಾಲಿಕೆ ಕಚೇರಿ ನಿರ್ವಹಣೆಗೆ ತಡೆಯೊಡ್ಡುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕಾಗಬಹುದು ಎಂದು ಪಾಲಿಕೆ ಆಡಳಿತಕ್ಕೆ ಎಚ್ಚರಿಕೆ ನೀಡಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ದಲಿತ ಹಕ್ಕುಗಳ ನಗರ ಸಮಿತಿ ಕಾರ್ಯದರ್ಶಿ ಲಿಂಗಪ್ಪ ನಂತೂರು, ಉಳ್ಳಾಲ ವಲಯ ಸಮಿತಿ ಅಧ್ಯಕ್ಷ ನಾರಾಯಣ ತಲಪಾಡಿ, ಡಿವೈಎಫ್ಐ ದ.ಕ.ಜಿಲ್ಲಾ ಕಾರ್ಯದರ್ಶಿ ದಯಾನಂದ ಶೆಟ್ಟಿ, ಆದಿವಾಸಿ ಹಕ್ಕುಗಳ ಸಮಿತಿ ನಗರ ಕಾರ್ಯದರ್ಶಿ ಜಯಕುಮಾರ್ ಮಾತನಾಡಿದರು. ದಲಿತ ಹಕ್ಕುಗಳ ಸಮಿತಿಯ ನಗರ ಸಮಿತಿ ಕಾರ್ಯಕರ್ತರಾದ ತಿಮ್ಮಯ್ಯ ಕೆ, ಸರೋಜಮ್ಮ, ಯಮುನಾ ಪಚ್ಚನಾಡಿ, ಅಶೋಕ್, ಬೇಬಿ ತಣ್ಣೀರುಬಾವಿ, ವಿಠಲ, ಪ್ರಶಾಂತ್ ಎಂ.ಬಿ, ಕಿಶೋರ್ ಪೊರ್ಕೋಡಿ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಕಡಲತಡಿ

ವರದಿ: **ವಾ.ಉ.**

ಕುಂದಾಪುರದಲ್ಲಿ ಕಟ್ಟಡ ಕಾರ್ಮಿಕರ ಮುಷ್ಕರ:

ಅಖಿಲ ಭಾರತ ಕಟ್ಟಡ ಮತ್ತು ಇತರೇ ನಿರ್ಮಾಣ ಕಾರ್ಮಿಕರ ಸಂಘಟನೆಯ ವತಿಯಿಂದ ಕಟ್ಟಡ ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಒತ್ತಾಯಿಸಿ ನಡೆಯುತ್ತಿರುವ ಮುಷ್ಕರವನ್ನು ಬೆಂಬಲಿಸಿ ಕುಂದಾಪುರ ತಾಲೂಕಿನ ಸಿಐಟಿಯು ಬೆಂಬಲಿತ ಕಟ್ಟಡ ಕಾರ್ಮಿಕರ ಸಂಘಟನೆಯ ನೇತೃತ್ವದಲ್ಲಿ ಕಟ್ಟಡ ಕಾರ್ಮಿಕರು ನವಂಬರ್ 13 ರಂದು ಕುಂದಾಪುರ ತಾಲೂಕು ಕಚೇರಿ ಎದುರು ಮುಷ್ಕರ ನಡೆಸಿದರು.

1996ರ ಕಟ್ಟಡ ಕಾರ್ಮಿಕರ ಶಾಸನವನ್ನು ಎಲ್ಲಾ ರಾಜ್ಯಗಳಲ್ಲಿಯೂ ಅನುಷ್ಠಾನ ಗೊಳಿಸಬೇಕು; ಕಾರ್ಮಿಕ ಕಲ್ಯಾಣ ಮಂಡಳಿಗೆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಯನ್ನು ಶೀಘ್ರ ನೇಮಿಸಬೇಕು; ರೂ.10 ಸಾವಿರ ಕನಿಷ್ಠ ವೇತನ ನಗದಿ ಗೊಳಿಸಬೇಕು ಮೊದಲಾದ ಬೇಡಿಕೆ ಗಳಿಗಾಗಿ ಆಗ್ರಹಿಸಿ ಮುಷ್ಕರ ನಡೆಸಲಾಗಿತ್ತು.

ಕುಂದಾಪುರ ಸಿಐಟಿಯು ತಾಲೂಕು ಸಮಿತಿಯ ಕಾರ್ಯದರ್ಶಿ ಸುರೇಶ್ ಕಲ್ಲಾಗರ, ತಾಲೂಕು ಕಟ್ಟಡ ಕಾರ್ಮಿಕರ ಸಂಘಟನೆಯ ಅಧ್ಯಕ್ಷ ಯು.ದಾಸು ಭಂಡಾರಿ ಮುಷ್ಕರ ನಿರತರನ್ನು ಉದ್ದೇಶಿಸಿ ಮಾತನಾಡಿದರು. ಸಿಐಟಿಯು ತಾಲೂಕು ಅಧ್ಯಕ್ಷ ಎಚ್.ನರಸಿಂಹ, ಕೋಶಾಧಿಕಾರಿ ಜಗದೀಶ್ ಆಚಾರ್ ಹೆಮ್ಮಾಡಿ, ತಾಲೂಕು ಕೃಷಿ ಕೂಲಿಕಾರರ ಸಂಘಟನೆಯ ಅಧ್ಯಕ್ಷ ರಾಜೀವ ಪಡುಕೋಣೆ, ಕಾರ್ಯದರ್ಶಿ ವೆಂಕಟೇಶ್ ಕೋಣಿ ಮೊದಲಾದವರು ಪ್ರತಿಭಟನಾ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಬಳಿಕ ಸರ್ಕಾರಕ್ಕೆ ನೀಡುವ ಮನವಿಯನ್ನು ತಹಶೀಲ್ದಾರರಿಗೆ ಸಲ್ಲಿಸಲಾಯಿತು.

ಸರ್ಕಾರೀ ಬಸ್ ಆಗ್ರಹಿಸಿ ಎಸ್‌ಎಫ್‌ಐ ಡಿವೈಎಫ್‌ಐ ಪ್ರತ್ಯೇಕ ಪ್ರತಿಭಟನೆಗಳು:

ಉಳ್ಳಾಲ ಪ್ರದೇಶದ ಮೊಂಟೆಪದವು ಹಾಗೂ ಗ್ರಾಮೀಣ ಪ್ರದೇಶಗಳಿಗೆ ಸರಕಾರಿ ಬಸ್ಸುಗಳನ್ನು ಸಂಚಾರಕ್ಕೆ ಒದಗಿಸಬೇಕೆಂದು ಆಗ್ರಹಿಸಿ ಎಸ್‌ಎಫ್‌ಐ ಮತ್ತು ಡಿವೈಎಫ್‌ಐಗಳು ಪ್ರತ್ಯ ಪ್ರತ್ಯೇಕ ಪ್ರತಿಭಟನೆಗಳನ್ನು ನಡೆಸಿದವು.

ಮೊಂಟೆಪದವಿನಲ್ಲಿ ಪದವಿ ಪೂರ್ವ ಕಾಲೇಜು ಇದ್ದು, ಮಂಜನಾಡಿ, ನರಿಂಗಾನ ಊರುಗಳ ವಿದ್ಯಾರ್ಥಿಗಳು ಖಾಸಗಿ ಬಸ್ಸುಗಳನ್ನೇ ಆಶ್ರಯಿಸಿದ್ದಾರೆ. ಈ ಭಾಗದಲ್ಲಿ ಸಂಚರಿಸುವ ಖಾಸಗಿ ಬಸ್ಸುಗಳ ನಿರ್ವಾಹಕರಿಂದ ವಿದ್ಯಾರ್ಥಿಗಳಿಗೆ ಕಿರುಕುಳ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರಿ ಬಸ್ಸುಗಳನ್ನು ಸಂಚಾರಕ್ಕೆ ಒದಗಿಸಬೇಕು ಎಂದು ಎಸ್‌ಎಫ್‌ಐ ನೇತೃತ್ವದಲ್ಲಿ ನವಂಬರ್ 15 ರಂದು ನರಿಂಗಾನದ ತೌಡುಗೋಳಿ ಕ್ರಾಸ್ ಎಂಬಲ್ಲಿ ರಸ್ತೆ ತಡೆ ನಡೆಸಿ ಪ್ರತಿಭಟಿಸಲಾಯಿತು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಎಸ್‌ಎಫ್‌ಐ ರಾಜ್ಯ ಸಹ ಕಾರ್ಯದರ್ಶಿ ಜೀವನ್‌ರಾಜ್ ಕುತ್ತಾರ್, ಜಿಲ್ಲಾ ಸಮಿತಿ ಕಾರ್ಯದರ್ಶಿ ರಝಾಕ್ ಮೊಂಟೆಪದವು ಮಾತನಾಡಿದರು.

ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ನತಿನ್ ಕುತ್ತಾರ್, ಸ್ಥಳೀಯ ಎಸ್‌ಎಫ್‌ಐ ಘಟಕದ ಫಹಾದ್, ಹಾರಿಸ್, ಫಯಾಜ್ ಮಂಜನಾಡಿ, ಸಿರಾಜ್, ಡಿವೈಎಫ್‌ಐನ ರಫೀಕ್ ಹರೇಕಳ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಡಿವೈಎಫ್‌ಐ ಉಳ್ಳಾಲ ಸಮಿತಿ ವತಿಯಿಂದ ನವಂಬರ್ 16 ರಂದು ತೊಕ್ಕೊಟಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಒಮ್ಮೆ ಆರಂಭಿಸಿ ಸ್ಥಗಿತಗೊಳಿಸಿದ ಗ್ರಾಮೀಣ ಸರ್ಕಾರೀ ಬಸ್ ಸಂಚಾರವನ್ನು ಪುನರಾರಂಭಿಸಬೇಕೆಂದು ಒತ್ತಾಯಿಸಲಾಯಿತು. ಖಾಸಗಿ ಬಸ್ ಮಾಲಕರ ಒತ್ತಡಕ್ಕೆ ಒಳಗಾಗಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಆರಂಭಿಸಿ ಲಾಭದಾಯಕವಾಗಿಯೇ ನಡೆಯುತ್ತಿದ್ದ ಬಸ್ ಸಂಚಾರವನ್ನು ಏಕಾಏಕಿ ನಿಲ್ಲಿಸಲಾಗಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಸ್ಥಗಿತಗೊಳಿಸಿದ ಸರ್ಕಾರಿ ಬಸ್‌ಗಳನ್ನು ಪುನರಾರಂಭಿಸುವಂತೆ ಒತ್ತಾಯಿಸಿ ಮುಖಂಡರು ಮಾತನಾಡಿದರು.

ಪ್ರತಿಭಟನೆಯನ್ನುದ್ದೇಶಿಸಿ ಡಿವೈಎಫ್‌ಐ

ಪುಟ 10 ಕ್ಕೆ



ಜನಶಕ್ತಿ
ಕನ್ನಡ ವಾರಪತ್ರಿಕೆ

ಭೀಕರ ಬರಗಾಲ: "ವರ್ಷದ ಕೂಳಿ"ಗೆ ಸಂಚಕಾರ

ಹಮಾಲರಿಗೆ ವಿಶೇಷ ನೇರವು ಘೋಷಿಸಲು ಆಗ್ರಹಿಸಿ ರಾಜ್ಯಾದ್ಯಂತ ಹೋರಾಟ

ಸರಕಾರವೇ ಘೋಷಿಸಿದಂತೆ ರಾಜ್ಯದ 146 ತಾಲೂಕುಗಳಲ್ಲಿ ಭೀಕರ ಬರಗಾಲ ಬಂದಿದೆ. ಮುಂಗಾರು ಮಳೆ ಕೈಕೊಟ್ಟಿದ್ದರಿಂದ ಕೃಷಿ ಚಟುವಟಿಕೆಗಳು ಸ್ಥಗಿತವಾಗಿವೆ. ಹಿಂಗಾರಿ ಬೆಳೆ ಕೂಡ ಬರುವ ಸಾಧ್ಯತೆ ಇಲ್ಲ. ಹೀಗಾಗಿ ರೈತರು ಕೃಷಿಕೂಲಿಕಾರರು ಸಂಕಷ್ಟಕ್ಕೀಡಾಗಿದ್ದಾರೆ. ಪರಸ್ಥಿತಿ ಹೀಗಿರುವಾಗ ರೈತರ ಫಸಲು ಮಾರುಕಟ್ಟೆಗೆ ಬರಲು ಹೇಗೆ ಸಾಧ್ಯ ?. ಈಗ ರೈತರು ಫಸಲು ಮಾರಾಟಮಾಡಲು ಬರುವ ಸೀಜನ್. ಆದರೇ ರಾಜ್ಯದ ಬಹುತೇಕ ಕೃಷಿ ಮಾರುಕಟ್ಟೆಗಳು ರೈತರ ಕೃಷಿ ಉತ್ಪನ್ನಗಳು ಬರ್ದೇ ಇರುವದರಿಂದ ಬಿಕೋ ಎನ್ನುತ್ತಿವೆ. ಈ ವರ್ಷದಲ್ಲಿ ಸುಮಾರು 350 ಕೋಟಿ ರೂ. ಎಪಿಎಂಸಿ ಆದಾಯ ಕೊರತಾ ಆಗಲಿದೆ ಎಂದು ಸರ್ಕಾರದ ಅಧಿಕಾರಿಗಳೇ ಹೇಳಿಕೊಂಡಿದ್ದಾರೆ. ಇದರಿಂದ ತೀವ್ರ



ಸಂಕಷ್ಟಕ್ಕೀಡಾದವರು ಹಮಾಲಿ ಕಾರ್ಮಿಕರು. ಯಾವುದೇ ಸಮಾಜಿಕ ಭದ್ರತೆ ಇಲ್ಲದ ಕೇವಲ ವರ್ಷದ ಮೂರ್‍ನಾಲ್ಕು ತಿಂಗಳು ಸಿಗುವ ಕೂಲಿಯನ್ನೇ ನಂಬಿ ನಿತ್ಯ ತಮ್ಮ ಶ್ರಮವನ್ನೇ ಮಾರಿ ದುಡಿದು ಅದರಲ್ಲೇ "ವರ್ಷದ ಕೂಳು" ಸಂಪಾದಿಸುವ ಬಡ ಹಮಾಲಿ ಕಾರ್ಮಿಕರು ಈ ವರ್ಷ ನಿರುದ್ಯೋಗಿಗಳಾಗಿದ್ದು ಅವರಿಗೆ ದಿಕ್ಕುತೋಚದಂತಾಗಿದೆ.

ಹೀಗಾಗಿ ರೈತರ ಕೃಷಿ ಉತ್ಪನ್ನಗಳನ್ನೇ ನಂಬಿ ಬದುಕು ಕಟ್ಟಿಕೊಂಡ ಒಂದು ಲಕ್ಷಕ್ಕೂ ಹೆಚ್ಚಿರುವ ಎಪಿಎಂಸಿ ಹಮಾಲಿ ಕಾರ್ಮಿಕರು ಮತ್ತು ಇದರ ನೇರ ಪರಿಣಾಮ ಅನುಭವಿಸಲಿರುವ 3-4 ಲಕ್ಷದಷ್ಟಿರುವ ಮಿಲ್, ಗೋಡೌನ್, ವೇರಹೌಸ್, ಬಜಾರ ಹಾಗೂ ಗ್ರಾಮೀಣ ಹಮಾಲಿ ಕಾರ್ಮಿಕರ ಜೀವನ ನಿರ್ವಹಣೆಗಾಗಿ ಅವರ ನೇರವಿಗೆ ಬರಬೇಕಾಗಿರುವುದು ಸರಕಾರದ ಕರ್ತವ್ಯ.

ಈ ಹಿನ್ನಲೆಯಲ್ಲಿ ನಿರುದ್ಯೋಗಿಗಳಾದ ಹಮಾಲಿ ಕಾರ್ಮಿಕರ ಪ್ರತಿ ಕುಟುಂಬಗಳಿಗೆ ಸರ್ಕಾರವು ಬದುಕು ಸಾಗಿಸಲು ಅನುಕೂಲವಾಗುವಂತೆ ನೆರವು ನೀಡುವುದು ಅವಶ್ಯಕವಾಗಿದ್ದು ಅದಕ್ಕಾಗಿ ವಿಶೇಷ ಪ್ಯಾಕೇಜ್ ಮುಖಾಂತರ ಕನಿಷ್ಠ ರೂ. 25,000 ಪರಿಹಾರ ನೀಡಬೇಕು, ಜೀವನ ನಿರ್ವಹಣೆಗಾಗಿ ಬಡ್ಡಿ ರಹಿತ ಸಾಲದ ವ್ಯವಸ್ಥೆ ಮಾಡಬೇಕು. 2ರೂ ದರದಲ್ಲಿ 35 ಕೆಜಿ ಆಹಾರ ಧಾನ್ಯಗಳನ್ನು ಪಡಿತರ ಮುಖಾಂತರ ನೀಡಬೇಕು. ಉದ್ಯೋಗ ಖಾತ್ರಿ ಯೋಜನೆಯನ್ನು ನಗರ ಪ್ರದೇಶಕ್ಕೂ ವಿಸ್ತರಿಸಬೇಕು, ಮುಂಬರುವ ಬಜೆಟ್‌ನಲ್ಲಿ ಕಲ್ಯಾಣ ಸೌಲಭ್ಯಗಳ ಜಾರಿಗಾಗಿ ಹಣಕಾಸು ಸಂಪನ್ಮೂಲ ತೆಗೆದಿರಿಸಬೇಕು. ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ತಕ್ಷಣ ಸೌಲತ್ತುಗಳನ್ನು ಜಾರಿಮಾಡಬೇಕು ಹಾಗೂ ಕಾರ್ಮಿಕರು, ಸಣ್ಣ ವ್ಯಾಪಾರಸ್ಥರು ಹಾಗೂ ರೈತರನ್ನು ದಿವಾಳಿ ಮಾಡಲಿರುವ ಚಿಲ್ಲರೆ ಕ್ಷೇತ್ರದಲ್ಲಿ ಎಫ್‌ಡಿಐ ಗೆ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಕೇಂದ್ರ ಸರಕಾರ ಎಪಿಎಂಸಿ ಕಾನೂನಿಗೆ ತಿದ್ದುಪಡಿ ತರಲು ಮುಂದಾಗಿದ್ದು ಅದನ್ನು ರಾಜ್ಯ ಸರಕಾರ ತಿರಸ್ಕರಿಸಬೇಕೆಂಬ ಪ್ರಮುಖ ಬೇಡಿಕೆಗಳಿಗಾಗಿ ಆಗ್ರಹಿಸಿ ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಶನ್(ಸಿಐಟಿಯು) ಅಕ್ಟೋಬರ್-31 ರಂದು ರಾಜ್ಯದ್ಯಂತ ಪ್ರತಿಭಟನೆಗೆ ಕರೆ ನೀಡಿತ್ತು. ರಾಜ್ಯದ ಹಲವಾರು ಕೇಂದ್ರಗಳಲ್ಲಿ ಯಶಸ್ವಿ ಪ್ರತಿಭಟನೆಗಳು ನಡೆದಿವೆ.

ಮಹೇಶ ಪತ್ತಾರ

ಹುಬ್ಬಳ್ಳಿ: ನವಲಗುಂದ: ನಗರದ ಡಾ॥ ಅಂಬೇಡ್ಕರ ವೃತ್ತದಿಂದ ಮಿನಿ ವಿಧಾನ ಸೌಧದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ನೂರಾರು ಹಮಾಲಿ ಕಾರ್ಮಿಕರು ತಹಶೀಲ್ದಾರರ ಮುಖಾಂತರ ಸರಕಾರಕ್ಕೆ ಮನವಿ ಸಲ್ಲಿಸಿದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಹಮಾಲಿ ಫೆಡರೇಶನ್‌ನ ರಾಜ್ಯಾಧ್ಯಕ್ಷ ಮಹೇಶ ಪತ್ತಾರ "ಈ ಭೀಕರ ಬರಗಾಲದಿಂದ ಸಂಕಷ್ಟಕ್ಕೀಡಾದವರಲ್ಲಿ ಎಲ್ಲ ಜಾತಿಯವರು ಇದ್ದಾರೆ ಆದರೇ ಸರಕಾರ ಮಾತ್ರ ಜಾತಿ ಸಮಾವೇಶ, ಕೋಮುದ್ವೇಷ ಹುಟ್ಟುಹಾಕುವ ಶಕ್ತಿಗಳಿಗೆ ಕುಮ್ಮಕ್ಕು ನೀಡುತ್ತಾ ರಾಜಕೀಯ ಕಿತ್ತಾಟದಲ್ಲಿ ಮುಳುಗಿ ಜನರ ಸಂಕಷ್ಟವನ್ನೇ ಮರೆತಿದೆ. ಜನರ ಸಂಕಷ್ಟಗಳಿಗೆ ಧ್ವನಿಯಾಗಬೇಕಿದ್ದ ವಿರೋಧ ಪಕ್ಷಗಳು ಅದೇ ದಾರಿ ಹಿಡಿದಿವೇ. ಸರಕಾರ ನಿರುದ್ಯೋಗಕ್ಕೆ ಒಳಗಾಗಿರುವ ಹಮಾಲರ



ನೆರವಿಗೆ ಬರಬೇಕೆಂದು ಆಗ್ರಹಿಸಿದರಲ್ಲದೇ ದುಡಿಯುವ ಜನರ ಸಂಕಷ್ಟಗಳ ಕುರಿತು ಮುಂದಿನ ಅಧಿವೇಶನದಲ್ಲಿ ಚರ್ಚೆಯಾಗುವಂತೆ ಒತ್ತಡ ತರಲು ಹೋರಾಟವನ್ನು ರೂಪಿಸಲಾಗುವದು" ಎಂದರು. ರಾಜ್ಯ ಉಪಾಧ್ಯಕ್ಷ ದುರಗಪ್ಪ ಚಿಕ್ಕತುಂಬಳ, ಮುಖಂಡರಾದ ಹನಮಂತಪ್ಪ ಜಾಲಗಾರ, ಬಸವಣ್ಣೆಪ್ಪ ನೀರಲಗಿ, ಹಸೇನ ನದಾಫ್, ಖಿತಾಲಸಾಬ ಮುಲ್ಲಾ, ಮಂಜುನಾಥ ಹುಜರಾತಿ, ನಾಗಮ್ಮ ಹಿರೇಮನಿ ಮುಂತಾದವರು ನೇತೃತ್ವ ವಹಿಸಿದ್ದರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಿ.ಎಸ್.ಸೊಪ್ಪಿನ ಹೋರಾಟವನ್ನು ಬೆಂಬಲಿಸಿ ಮಾತನಾಡಿದರು. ನವಲಗುಂದದಲ್ಲಿ ನಾಗಲಿಂಗೇಶ್ವರ ಹಮಾಲಿ ಸಂಘದ ಅಧ್ಯಕ್ಷ ಸಂಗಪ್ಪ ಹುಬ್ಬಳ್ಳಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯಿತು.

ನರಗುಂದ: ಶಿರಹಟ್ಟಿ: ನರಗುಂದ ಬಾಬಾಸಾಹೇಬ ಹಮಾಲಿ ಸಂಘದ ನೂರರಷ್ಟು ಕಾರ್ಮಿಕರು ತಮ್ಮ ಯಕ್ಕಾಗಾಡಿಗಳೊಂದಿಗೆ ತಹಶೀಲ್ದಾರ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು. ಸಿಐಟಿಯು ಮುಖಂಡ ಮಹೇಶ ಹಿರೇಮಠ, ಮುಖಂಡರಾದ ಮಾಬೂಬ ದಫೇದಾರ, ಬಾಬು ಚಿಕ್ಕುಂಬಿ, ಮೆಹಬೂಬ ಕಮ್ಮಾರ, ಗಾಯಕವಾಡ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಶಿರಹಟ್ಟಿಯಲ್ಲಿ ಫಕ್ಕೀರೇಶ್ವರ ಬಜಾರ ಹಾಗೂ ಲಕ್ಷ್ಮೇಶ್ವರ ಎಪಿಎಂಸಿ ಲೈಸೆನ್ಸುದಾರ ಕೂಲಿ ಕಾರ್ಮಿಕರು ಪ್ರತಿಭಟನೆ ನಡೆಸಿದ್ದು ಸಿಐಟಿಯು ಜಿಲ್ಲಾ ಕಾರ್ಯದರ್ಶಿ ವಿಠ್ಠಲ ನಾಯಕ, ಹಮಾಲಿ ಫೆಡರೇಶನ್ ರಾಜ್ಯ ಉಪಾಧ್ಯಕ್ಷ ಗೋವಿಂದಪ್ಪ ಸರಸೂರೆ ನೇತೃತ್ವ ವಹಿಸಿದ್ದರು.

ಸವಣೂರ: ಹಾನಗಲ್: ಎರಡು ಕಡೆ ಎಪಿಎಂಸಿಯಿಂದ ತಹಶೀಲ್ದಾರ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ ಸರಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಸವಣೂರಿನಲ್ಲಿ ಅಧ್ಯಕ್ಷ ರಶೀಧ ಅಹ್ಮದ ಹವಾಲ್ದಾರ, ಕಾರ್ಯದರ್ಶಿ ರಾಜೇಸಾಬ ಕರಡಿ ಹಾಗೂ

ಪುಟ 10 ಕ್ಕೆ

ವಾಲ್ ಮಾರ್ಟ್ ಬೇಡ, ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ವಿದೇಶಿ ನೇರ ಹೂಡಿಕೆ ಬೇಡವೇ ಬೇಡ

ನಿತ್ಯಾನಂದಸ್ವಾಮಿ

ಅಷ್ಟರೊಳಗೆ ಪ್ರಧಾನಿ ಡಾ. ಮನಮೋಹನ್ ಸಿಂಗ್ ಡಾ. ಮೌನ ಮೋಹನ್ ಸಿಂಗ್ ಆಗಿಬಿಟ್ಟಿದ್ದರು. ತನ್ನ ಸಚಿಬ ಸಂಪುಟದ ಮಂತ್ರಿಗಳು ಒಬ್ಬರ ನಂತರ ಒಬ್ಬರಂತೆ ಹಗರಣಗಳ ಸರಣಿ ಸ್ಫೋಟಗಳಿಗೆ ಬಲಿಯಾಗುತ್ತಿದ್ದಂತೆ ಪ್ರಧಾನಿ ಮೌನವೃತಕ್ಕೆ ಜಾರಿದ್ದರು. ಕೊನೆಗೆ ತನ್ನನ್ನೇ ಹುಡುಕಿಕೊಂಡು ಬಂದ ಕಲ್ಲಿದ್ದಲು ಹಗರಣದಿಂದ ಮುಖಕ್ಕೆ ಮೆತ್ತೊಕೊಂಡ ಮಸಿಯನ್ನು ತೊಳೆದುಕೊಳ್ಳುವ ವಿಫಲ ಪ್ರಯತ್ನದಲ್ಲಿ ಅವರು ಸುಸ್ತಾಗಿದ್ದರು. ಆಗ ಬಾರಿಸಿತು ಗಂಟೆ ಅಮೆರಿಕದಿಂದ, ಖ್ಯಾತ ಟೈಮ್ ನಿಯತಕಾಲಿಕ ಮತ್ತು ಇತರ ಕಾರ್ಪೊರೇಟ್ ಮಾಧ್ಯಮಗಳು ಹಾಗೂ ಸಂಸ್ಥೆಗಳು ಯಾವುದೇ ಮುನ್ಸೂಚನೆ ಇಲ್ಲದೆ ಡಾ. ಮನಮೋಹನ್ ಸಿಂಗ್ ಅವರನ್ನು 'ಕೈಲಾಗದ ಪ್ರಧಾನಿ' ಎಂತಲೂ 'ವೈಫಲ್ಯದ ಸಂಕೇತ' ಎಂತಲೂ ಬಣ್ಣಿಸಿದವು. ಅನಿರೀಕ್ಷಿತ ವಲಯದಿಂದ ಬಂದ ಟೀಕೆಯನ್ನು ಮೊದಲು ತೀವ್ರವಾಗಿ ನೊಂದಂತೆ ಕಂಡರೂ ನಂತರ ಮೈಕೊಡವಿಕೆಯಿಂದ ವೀರಾವೇಶ ಪ್ರದರ್ಶಿಸಿದರು. ದೇಶದಲ್ಲಿ ಅವರ ವರ್ಚಸ್ಸು ಕುಸಿದಿದ್ದರೂ ವಿದೇಶಗಳಲ್ಲಿ ಅವರು ಸುಧಾರಣೆಗಳ 'ಶಿಲ್ಪಿಯೆಂದೇ ಖ್ಯಾತರಾಗಿರುವ ಸಿಂಗ್ ತಾವು ನಿರುಪಯುಕ್ತ ಪ್ರಧಾನಿ ಎಂಬ ಆರೋಪವನ್ನು ಸುಳ್ಳು ಮಾಡಿ ತೋರಿಸಲು ಹೊರಟೇ ಬಿಟ್ಟರು!

ಸೆಪ್ಟೆಂಬರ್ 14, 2012ರಂದು ನಡೆದ ಕೇಂದ್ರ ಸಂಪುಟ ಸಭೆಯಲ್ಲಿ ಬಹುಬ್ರಾಂಡ್ ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ಶೇ. 51 ರಷ್ಟು ವಿಮಾನಯಾನ ಕ್ಷೇತ್ರದಲ್ಲಿ ಶೇ. 49 ರಷ್ಟು, ಪ್ರಸಾರ ಕ್ಷೇತ್ರದಲ್ಲಿ ಶೇ. 74ರಷ್ಟು ಇಂಧನ ಕ್ಷೇತ್ರದಲ್ಲಿ ಶೇ. 49ರಷ್ಟು – ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅವಕಾಶ ನೀಡುವ ಪ್ರಸ್ತಾವಗಳಿಗೆ ಅನುಮೋದನೆ ನೀಡಲಾಯಿತು. ಇದರೊಂದಿಗೆ, ದೇಶದೊಳಗಿನ ವ್ಯಾಪಕ ವಿರೋಧವನ್ನು ಧಿಕ್ಕರಿಸಿದ ಪ್ರಧಾನಿ ಮನಮೋಹನಸಿಂಗ್, ತನ್ನ ಅಭುವಮಾನಿ ವಿದೇಶಿ ಹೂಡಿಕೆಗಾರರರನ್ನು ತೃಪ್ತಿಪಡಿಸಿದರು. ಭಾರತ ಸರ್ಕಾರದ ಈ ಕ್ರಮವನ್ನು ಅಮೇರಿಕದ ಉದ್ಯಮಿಗಳು ಹಾಗೂ ಮಾಧ್ಯಮಗಳು ಮುಕ್ತಕಂಠದಿಂದ ಸ್ವಾಗತಿಸಿದವು.

ಬಹುಬ್ರಾಂಡ್ ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ಶೇ. 51ರಷ್ಟು ಎಫ್‌ಡಿಐಗೆ 2011ರ ನವೆಂಬರ್‌ನಲ್ಲೇ ಸರ್ಕಾರ ಅನುಮೋದನೆ ನೀಡಿತ್ತು. ಆದರೆ ಸಂಸತ್ತಿನಲ್ಲಿ ವ್ಯಕ್ತವಾದ ತೀವ್ರ ವಿರೋಧದ ಕಾರಣದಿಂದ ಅದನ್ನು ತಡೆಹಿಡಿಯಲಾಗಿತ್ತು. ಈ ಕುರಿತು ತೀರ್ಮಾನ ಕೈಗೊಳ್ಳುವ ಪೂರ್ವದಲ್ಲಿ ಎಲ್ಲ ಪಕ್ಷಗಳ ಅಭಿಪ್ರಾಯ ಪಡೆಯುದಾಗಿ ಅಂದಿನ ಹಣಕಾಸು ಮಂತ್ರಿ ಪ್ರಣವ್ ಮುಖರ್ಜಿ ಭರವಸೆ ನೀಡಿದ್ದರು. ಆದರೆ ಸರ್ಕಾರ ಏಕಪಕ್ಷೀಯ ತೀರ್ಮಾನ ಕೈಗೊಂಡಿದ್ದನ್ನು ಪ್ರತಿಭಟಿಸಿ ಸೆಪ್ಟೆಂಬರ್ 20, 2012ರಂದು ಧೇಶವ್ಯಾಪಿ ಹರತಾಳ ನಡೆಸಲಾಗಿತ್ತು. ನವೆಂಬರ್ 22, 2012ರಂದು ಸಂಸತ್ತಿನ ಚಳಿಗಾಲ ಅಧಿವೇಶನದ ಮೊದಲ ದಿನ ಉಭಯ ಸದನಗಳಲ್ಲಿ ಚಿಲ್ಲರೆ ಕ್ಷೇತ್ರದಲ್ಲಿ ಎಫ್.ಡಿ.ಐಗೆ ತೀವ್ರ ವಿರೋಧ ವ್ಯಕ್ತವಾಯಿತು. ಟಿಎಂಸಿಯ ಅವಿಶ್ವಾದ ಗೊತ್ತುವಳಿ ಮಂಡನೆ ವಿಫಲವಾಯಿತು. ಆದರೆ ಬಿಜೆಪಿ ಹಾಗೂ ಎಡಪಕ್ಷಗಳು ಪ್ರತ್ಯೇಕವಾಗಿ ಮತದಾನಕ್ಕೆ ಅವಕಾಶ ಇರುವ ನಿಯಮ 184ರ ಅಡಿಯಲ್ಲಿ ಎಫ್.ಡಿ.ಐ ಕುರಿತಾದ ಚರ್ಚೆಗೆ ಪಟ್ಟು ಹಿಡಿದಿವೆ.

ಆದರೆ ಪ್ರಧಾನಿ ಡಾ. ಮನಮೋಹನ್ ಸಿಂಗ್ ಹಾಗೂ ಕಾಂಗ್ರೆಸ್ ಪಕ್ಷದ ವಕ್ತಾರರು ಸಕಾರದ ಕ್ರಮವನ್ನು ಸಮರ್ಥಿಸುತ್ತಿದ್ದಾರೆ.



ಕೃಷಿ ರಂಗ : ಚಿಲ್ಲರೆ ವ್ಯಾಪರ ಕ್ಷೇತ್ರದಲ್ಲಿ ಎಫ್.ಡಿ.ಐ ಗೆ ಅವಕಾಶ ಕಲ್ಪಿಸಿದರೆ ಕೃಷಿ ರಂಗಕ್ಕೆ ವರದಾನವಾಗಲಿದೆ ಎಂದು ಹೇಳಲಾಗುತ್ತದೆ. ಬಹುರಾಷ್ಟ್ರೀಯ ಕಂಪೆನಿಗಳು ನೇರವಾಗಿ ರೈತರಿಂದ ಖರೀದಿ ಮಾಡುವಿದರಿಂದ ಮಧ್ಯವರ್ತಿಗಳು ಇಲ್ಲದಂತಾಗಿ ರೈತರಿಗೆ ಒಳ್ಳೆಯ ಬೆಲೆ ಸಿಗುತ್ತದೆ ಎಂಬುದು ಒಂದು ವಾದ. ಆದರೆ ಈಗಾಗಲೇ ಎಪಿಎಂಸಿ ಕಾಯ್ದೆ ತಿದ್ದುಪಡಿ ಆಗಿರುವುದರಿಂದ ರೈತರಿಂದ ನೇರವಾಗಿ ಖರೀದಿಸುವ ವ್ಯವಸ್ಥೆ ಜಾರಿಗೆ ಬಂದಿದೆ. ರಿಲಯನ್ಸ್ ಮೊದಲಾದ ದೇಶೀಯ ಕಂಪೆನಿಗಳು ರೈತರಿಂದ ನೇರವಾಗಿ ಖರೀದಿಸುತ್ತಿದ್ದಾರೆ. ಆದರೆ ರೈತರಿಗೆ ಆದರಿಂದ ಲಾಭ ಆಗುತ್ತಿರುವುದು ಕಾಣುತ್ತಿಲ್ಲ. ಇದಲ್ಲದೆ, ನೇರ ಹೂಡಿಕೆಯ ಅವಕಾಶದಿಮದ ಬರುವ ಬಹುರಾಷ್ಟ್ರೀಯ ಕಂಪೆನಿಗಳು ತಮ್ಮೊಂದಿಗೆ ಕ್ವಾಲಿಟಿ ಕಂಟ್ರೋಲರ್ಸ್, ವರ್ಗೀಕರಣ ಮಾಡುವವರು, ದೃಢೀಕರಿಸುವವರು, ಸಂಸ್ಕರಣಕಾರರು, ಪ್ಯಾಕರುಗಳು ಮೊದಲಾದ ಮಧ್ಯವರ್ತಿಗಳ ಸೈನ್ಯವನ್ನೇ ತರುತ್ತಾರೆ. ಇವರೆಲ್ಲರೂ ತಮ್ಮ ಪಾಲನ್ನು ಕಿತ್ತೊಕೊಂಡ ನಂತರ ರೈತನಿಗೆ ಏನು ಉಳಿಯುತ್ತದೆ?

ಹೌದು, ಈಗ ಇರುವ ಮಾರುಕಟ್ಟೆಗಳನ್ನು ಆಧುನಿಕರಿಸುವುದು, ಹೆಚ್ಚು ರೈತ ಸ್ನೇಹಿ ಆಗುವಂತೆ ಮಾಡುವುದು ಅಗತ್ಯವಿದೆ. ಆದರೆ ದೈತ್ಯ ಬಹುರಾಷ್ಟ್ರೀಯ ಕಂಪೆನಿಗಳು ಕೃಷಿ ಮಾರುಕಟ್ಟೆಯನ್ನು ಪ್ರವೇಶಿಸಿದರೆ, ರೈತರು ತಮ್ಮ ಉತ್ಪನ್ನಗಳನ್ನು ಒಂದು ಬ್ಲಾಡ್ಯ ಕಂಪೆನಿಗೇ ಅನಿವಾರ್ಯವಾಗಿ ಮಾರಾಟ ಮಾಡಬೇಕಾಗುವುದು. ಈಗ ಇರುವಂತೆ ಅನೇಕ ವರ್ತಕರ ನಡುವಿನ ಸ್ಪರ್ಧೆಯ ಲಾಭ ರೈತರಿಗೆ ಸಿಗಲಾರದು. ಈ ಕಂಪೆನಿಗಳು ಆರಂಭದಲ್ಲಿ ಒಳ್ಳೆಯ ಬೆಲೆ ಕೊಡಬಹುದು. ಆದರೆ ಕ್ರಮೇಣ ಅವರು ನಿರ್ಧರಿಸಯುವ ಬೆಲೆಗಳಿಗೆ ರೈತರು ತಮ್ಮ ಉತ್ಪನ್ನಗಳನ್ನು ಅವರಿಗೆ ಬೇರೆ ದಾರಿ ಇಲ್ಲದೆ ಮಾರಲೇ ಬೇಕಾಗುವುದು.

ಚಿಲ್ಲರೆ ಕ್ಷೇತ್ರದಲ್ಲಿ ವಿದೇಶಿ ಹೂಡಿಕೆಗೆ ಅವಕಾಶ ನಿಡುವುದರಿಂದ ಬಹುರಾಷ್ಟ್ರೀಯ ಕಂಪೆನಿಗಳಿಂದ ವೈಜ್ಞಾನಿಕವಾದ ಶೀತಲೀಕರಣ ಘಟಕಗಳು, ವ್ಯವಸ್ಥಿತವಾದ ಉಗ್ರಾಣಗಳು ದೊರೆಯಲಿದ್ದು ಕೃಷಿ ಉತ್ಪನ್ನಗಳನ್ನು ಹೆಚ್ಚು ಹೇಳುತ್ತಾರೆ. ವಿಶ್ವದಲ್ಲಿ ಎಲ್ಲಿಯೂ ಇಂತಹ ಕಂಪೆನಿಗಳು ರೈತರಿಗೆ ಈ ಸೌಕರ್ಯವನ್ನು ಒದಗಿಸಿದ್ದು ಉಗ್ರಾಣ ವ್ಯವಸ್ಥೆಯಲ್ಲಿ ಎಫ್.ಡಿ.ಐ ಗೆ ಅವಕಾಶ ನೀಡಲಾಗಿದೆ. ಆದರೆ ಈ ಕ್ಷೇತ್ರಕ್ಕೆ ಬಂಡವಾಳ ನಿರೀಕ್ಷೆಯಂತೆ ಹರಿದು ಬಂದಿಲ್ಲ. ಇಷ್ಟಕ್ಕಾಗಿ ಕೃಷಿ ಮಾರುಕಟ್ಟೆಗೆ ವಿದೇಶಿ ಹೂಡಿಕೆಯ ಅಗತ್ಯವೇನಿಲ್ಲ. ಕೇವಲ 5000 ಕೋಟಿ ಧೇಶೀಯವಾಗಿ ತೊಡಗಿಸಿದರೆ ದೇಶದ ಉದ್ದಗಲಕ್ಕೂ ಸುಸಜ್ಜಿತವಾದ ಕೋಲ್ಡ್ ಸ್ಟೋರೇಜ್‌ಗಳನ್ನು ಸ್ಥಾಪಿಸಬಹುದು.

ಉದ್ಯೋಗ ರಂಗ : ಚಿಲ್ಲರೆ ವ್ಯಾಪರದಲ್ಲಿ ಎಫ್.ಡಿ.ಐ ಮೂರು ವರ್ಷಗಳಲ್ಲಿ 1ಕೋಟಿ ಉದ್ಯೋಗಗಳನ್ನು ಸೃಷ್ಟಿಸುತ್ತದೆ ಎನ್ನಲಾಗಿದೆ. ಅದರಲ್ಲಿ 40 ಲಕ್ಷ ನೇರ ಉದ್ಯೋಗಗಳು, ಉಳಿದವು ಪರೀಕ್ಷ ಉದ್ಯೋಗಗಳು. ಭಾತರದಲ್ಲಿ 3 ವರ್ಷಗಳಲ್ಲಿ 40 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಲು, ಅತಿ ಹೆಚ್ಚು ನೌಕರರನ್ನು ಹೊಂದಿರುವ ವಾಲ್ ಮಾರ್ಟ್ ಭಾರತದಲ್ಲಿ 18,600 ಸೂಪರ್ ಮಾರ್ಕೆಟ್ ಅಂಗಡಿಗಳನ್ನು ತೆರೆಯಬೇಕಾಗುತ್ತದೆ.

ಸೂಪರ್ ಮಾರ್ಕೆಟ್‌ನಲ್ಲಿ ಸೃಷ್ಟಿಯಾಗುವ ಪ್ರತಿಯೊಂದು ಉದ್ಯೋಗ ಭಾರತದ ಅಸಂಘಟಿತ ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ 17 ಉದ್ಯೋಗಗಳನ್ನು ಕಡಿತಮಾಡುತ್ತದೆ. ಮುಂದಿನ 3ವರ್ಷಗಳಲ್ಲಿ ಈ ಸೂಪರ್ ಮಾರ್ಕೆಟ್‌ಗಳಲ್ಲಿ 40 ಲಕ್ಷ ಉದ್ಯೋಗಗಳು ನಿಜವಾಗಿಯೂ ಸೃಷದಟಿಯಾದರೆ, ಸುಮಾರು 4ಕೋಟಿಗೂ ಹೆಚ್ಚು ಮಂದಿಗೆ ಉದ್ಯೋಗ ಕಲ್ಪಿಸಿರುವ ದೇಶೀ ಚಿಲ್ಲರೆ ವ್ಯಾಪಾರ ಕ್ಷೇತ್ರವೇ ಇಡಿಯಾಗಿ ಹೇಳಹೆಸರಿಲ್ಲದಂತಾಗುತ್ತದೆ.

ಭಾರತದ ಚಿಲ್ಲರೆ. ಕ್ಷೇತ್ರ ಕೃಷಿಯ ನಂತರ ಅತಿ ಹೆಚ್ಚು ಉದ್ಯೋಗಗಳನ್ನು ಒದಗಿಸುವ ಕ್ಷೇತ್ರ. 4 ಕೋಟಿಗಿಂತಲೂ ಹೆಚ್ಚು ಮಂದಿ ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರೆಲ್ಲರು ಸಣ್ಣ, ಸ್ವಉದ್ಯೋಗಿ ಚಿಲ್ಲರೆ ಮಾರಾಟಗಾರರು ಇವರು ಹೆಚ್ಚು ಬಂಡವಾಳ ತೊಡಗಿಸಲು ಆಗದವರು. ತುಸು ದೊಡ್ಡ ಪ್ರಮಾಣದಲ್ಲಿ ಬೆಳೆದರೆ ಇವರು ಇತರರಿಗೂ ಉದ್ಯೋಗ ಒದಗಿಸುತ್ತಾರೆ. ಆದರೆ ಲಕ್ಷಾಣಮತರ ಕೋಟಿ ರೂ.ಗಳ ಬಂಡವಾಳ ಹೂಡುವ ಸಾಮರ್ಥ್ಯ ಇರುವ ಬಹುರಾಷ್ಟ್ರೀಯ ಕಂಪೆನಿಗಳ ಎದುರು ಇವರು ಸ್ಪರ್ಧಿಸಲಾರರು. ಇದರಿಂದಾಗಿ ಅವರ ಅವಲಂಭಿತರೂ. ನುಗ್ಗಲು ಹವಣಿಸುತ್ತಿರುವ ವಿಧೇಶಿ ಕಂಪೆನಿಗಲು ಇಲ್ಲಿ ಸಮಾಜಸೇವೆಗಾಗಿ ಬರುವವರಲ್ಲ. ಲಾಭಕ್ಕಾಗಿ, ಸೂಪರ್ ಲಾಭಕ್ಕಾಗಿ ಬರುವ ಈ ದೈತ್ಯ ಕಂಪೆನಿಗಳು ಇಲ್ಲಿನ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುತ್ತವೆ ಎಂದು ಯಾರೂ ಹೇಳಿದರೂ ಅದನ್ನು ನಂಬುವವರು ಪೆದ್ದರಷ್ಟೇ..

ಜನಶಕ್ತಿ
ಕನ್ನಡ ವಾರಪತ್ರಿಕೆ

ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ: ಸಂಸತ್ತು ನಿರ್ಧರಿಸಲಿ

ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಎಲ್ಲ ರಾಜಕೀಯ ವಲಯಗಳಿಂದ ವ್ಯಾಪಕ ಪ್ರತಿಭಟನೆಗಳು ವ್ಯಕ್ತಗೊಂಡಿವೆ. ಸಂಸತ್ತಿನ ಎರಡೂ ಸದನಗಳಲ್ಲಿ ಈ ಎಲ್ಲ ರಾಜಕೀಯ ಪಕ್ಷಗಳ ಸಂಖ್ಯಾಬಲ ಬಹುಮತ ಪಡೆದಿದೆ. ದೇಶದ ಕನಿಷ್ಟ ಐದನೇ ಒಂದು ಭಾಗ ಜನಸಂಖ್ಯೆಯ ಬದುಕನ್ನು ತಟ್ಟುವ ಒಂದು ಪ್ರಶ್ನೆಯ ಮೇಲೆ ಸಂಸತ್ತು ಮತದಾನವಿರುವ ನಿಯಮದ ಅಡಿಯಲ್ಲಿ ಚರ್ಚೆ ನಡೆಸದಂತೆ ತಡೆಯಲು ಕಾಂಗ್ರೆಸ್ ಸುಳ್ಳುಗಳ ಮೊರೆ ಹೋಗುವಂತಿಲ್ಲ. ಸಂಸತ್ತು ಈ ವಿಚಾರದಲ್ಲಿ ನಿರ್ಧರಿಸಲು ಬಿಡಬೇಕು. ನಮ್ಮ ಸಂವಿಧಾನದ ಕಾರ್ಯಪ್ರಣಾಳಿಯ ಪವಿತ್ರತೆಯನ್ನು ಬುಡಮೇಲು ಮಾಡಲು ಬಿಡಲಾಗದು

ಹೆಚ್ಚೆಚ್ಚು ರಾಜಕೀಯ ಅಸ್ಥಿರತೆಯ ಹಿನ್ನೆಲೆಯಲ್ಲಿ ಸಂಸತ್ತಿನ ಚಳಿಗಾಲದ ಅಧಿವೇಶನ ಆರಂಭವಾಗಿದೆ. ಭಾರೀ ಪ್ರಚಾರದೊಂದಿಗೆ ನಡೆಸಿದ ಯುಪಿಎ–2 ಸಂಪುಟ ಪುನರ್ರಚನೆ ಜನಗಳ ಬದುಕಿನ ಸಮಸ್ಯೆಗಳಿಗೆ ಪರಿಹಾರದ ವಿಶ್ವಾಸವನ್ನೇನೂ ತುಂಬಿಲ್ಲ. ಭ್ರಷ್ಟಾಚಾರದ ಆಪಾದನೆಗಳು ಕಾಂಗ್ರೆಸ್ ಪಕ್ಷವನ್ನು ಅಲುಗಾಡಿಸುತ್ತಲೇ ಇವೆ. ಅದರ ಮೈತ್ರಿಕೂಟವೇ ಮುಂದೇನು ಎಂಬ ಪರಿಸ್ಥಿತಿಯಲ್ಲಿದೆ, ಬಂಗಾಲದ ಮಿತ್ರಪಕ್ಷ ಕೈಕೊಟ್ಟಿದೆ, ದಕ್ಷಿಣದ ಮಿತ್ರಪಕ್ಷ ಸುಸ್ತಾಗಿದೆ, ಸಂಪುಟ ಪುನರ್ರಚನೆಯಲ್ಲಿ ಭಾಗವಹಿಸಲು ನಿರಾಕರಿಸಿದೆ.

ಲೋಕಸಭೆಯಲ್ಲಿ ಅದರ ಬಹುಮತ ಸಮಾಜವಾದಿ ಪಕ್ಷ ಮತ್ತು ಬಿಎಸ್‌ಪಿಯ ಹೊರಗಣ ಬೆಂಬಲದ ಮೇಲೆ ನಿಂತಿದೆ. ಇನ್ನೊಂದೆಡೆ ಪ್ರಧಾನ ಪ್ರತಿಪಕ್ಷ ಸ್ವತಃ ಅಸ್ತವ್ಯಸ್ತಗೊಂಡಿದೆ, ಭ್ರಷ್ಟಾಚಾರದ ಆಪಾದನೆ ಹೊತ್ತ ಅದರ ಅಧ್ಯಕ್ಷರು [illegible] ಸಂದೇಹಾಸ್ಪದವಾಗಿದೆ. ಈ ಎಲ್ಲ ಅಸ್ಥಿರತೆಗಳು ಹೇಗೆ ಅನಾವರಣಗೊಳ್ಳಲಿವೆ ಎಂಬುದು ಈ ಸಂಸದ್ ಅಧಿವೇಶನ ಯುಪಿಎ ಸರಕಾರ ತನ್ನ ಕೃತ್ಯಗಳಿಗೆ ಉತ್ತರ ಕೊಡುವಂತೆ, ಜನತೆಗೆ ಪರಿಹಾರಗಳನ್ನು ಒದಗಿಸುವ ಕ್ರಮಗಳನ್ನು ಕೈಗೊಳ್ಳುವಂತೆ ಮಾಡಬಲ್ಲುದೇ ಎಂಬುದನ್ನು ನಿರ್ಧರಿಸಲಿದೆ.

ಕಲಾಪಗಳಿಲ್ಲದ ಕಳೆದ ಮಳೆಗಾಲದ ಅಧಿವೇಶನದ ನಂತರ ಸರಕಾರ ಬಹುಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಅವಕಾಶ ನೀಡಲು ನಿರ್ಧರಿಸಿತು. ಇದಕ್ಕೆ ವ್ಯಾಪಕ ಪ್ರತಿಭಟನೆಗಳು ವ್ಯಕ್ತವಾದವು. ಆದರೂ, ಈ ಹಿಂದೆ ಬಜೆಟ್ ಅಧಿವೇಶನದಲ್ಲಿ ಈಗ ರಾಷ್ಟ್ರಪತಿಗಳಾಗಿರುವ ಆಗಿನ ಹಣಕಾಸು ಮಂತ್ರಿಗಳು ನೀಡಿದ್ದ ವಚನವನ್ನು ಮುರಿದು ಈ ನಿರ್ಧಾರದ ಜಾರಿಗೆ ಮುಂದಾಗಿದೆ.

ಮತದಾನವಿರುವ ಠರಾವು

ಇದಕ್ಕೂ ಎಲ್ಲ ರಾಜಕೀಯ ವಲಯಗಳಿಂದ ವ್ಯಾಪಕ ಪ್ರತಿಭಟನೆಗಳು ವ್ಯಕ್ತಗೊಂಡವು. ಎಡಪಕ್ಷಗಳು, ಸಮಾಜವಾದಿ ಪಕ್ಷ, ತೆಲುಗುದೇಶಂ, ಜನತಾದಳ(ಎಸ್) ಮತ್ತು ಬಿಜು ಜನತಾ ದಳ ನೀಡಿದ 'ರಾಷ್ಟ್ರೀಯ ಹರತಾಳ'ದ ಕರೆಗೆ ದೇಶಾದ್ಯಂತ ಉತ್ಸಾಹಪೂರ್ಣ ಸ್ಪಂದನೆ ದೊರೆಯಿತು. ದಿಲ್ಲಿಯಲ್ಲಿ ಈ ಎಲ್ಲಾ ಪಕ್ಷಗಳ ಮುಖಂಡರು ಬಂಧನಕ್ಕೊಳಗಾದರು. ಅದೇ ದಿನ ಚಿಲ್ಲರೆ ಮಾರಾಟಗಾರರ ಅಖಿಲ ಭಾರತ ಒಕ್ಕೂಟ 'ಭಾರತ ಬಂದ್'ಗೆ ಕರೆ ನೀಡಿತು. ದಕ್ಷಿಣದ ಯುಪಿಎ ಮಿತ್ರಪಕ್ಷ ಡಿಎಂಕೆ ಕೂಡ ಬಹಿರಂಗ ಬೆಂಬಲ ಪ್ರಕಟಿಸಿತು, ಎಐಎಡಿಎಂಕೆ ಕೂಡ ಬೆಂಬಲ ಸೂಚಿಸಿತು. ಸಂಸತ್ತಿನ ಎರಡೂ ಸದನಗಳಲ್ಲಿ ಈ ಎಲ್ಲ ಪಕ್ಷಗಳ ಸಂಖ್ಯಾಬಲ ಬಹುಮತ ಪಡೆದಿದೆ.

ಸಂಸತ್ತಿನ ಎರಡೂ ಸದನಗಳಲ್ಲಿ ಸಿಪಿಐ(ಎಂ)ನ ಮುಖಂಡರು ಸರಕಾರದ ಈ ನಿರ್ಧಾರಕ್ಕೆ ಅಸಮ್ಮತಿ ಸೂಚಿಸುವ ಠರಾವನ್ನು, ಮತದಾನದ ಅವಕಾಶ ಇರುವ ನಿಯಮದ ಅಡಿಯಲ್ಲಿ ಮಂಡಿಸುವ ಸೂಚನೆ ನೀಡಿದ್ದು ಈ ಸಂದರ್ಭದಲ್ಲಿ. ಎಫ್‌ಡಿಐ ಮೂಲಕ ನಮ್ಮ ಮಾರುಕಟ್ಟೆ ಮತ್ತು ಸಂಪನ್ಮೂಲಗಳಿಗೆ ಕೈಹಾಕಿ



ಲಾಭ ಸೂರೆ ಮಾಡಲು ಅವಕಾಶ ಕಲ್ಪಿಸುವ ಸರಕಾರದ ಪ್ರಯತ್ನಗಳನ್ನು ವಿಫಲಗೊಳಿಸುವ ಕಾರ್ಯತಂತ್ರವಿದು.

ಕಾಂಗ್ರೆಸಿನ 'ಬಿ' ತಂಡ!

ಇದಕ್ಕೆ ವಿರುದ್ಧವಾಗಿ ಕೆಲವು ರಾಜಕೀಯ ಪಕ್ಷಗಳು, ಮುಖ್ಯವಾಗಿ ಯುಪಿಎ–2ರ ಮಾಜೀ ಮಿತ್ರಪಕ್ಷ ತೃಣಮೂಲ ಕಾಂಗ್ರೆಸ್ ಸರಕಾರದ ವಿರುದ್ಧ ಅವಿಶ್ವಾಸ ಠರಾವು ತರುವ ವಿಚಾರವನ್ನು ತೇಲಿ ಬಿಟ್ಟವು. ಸಾಮಾನ್ಯವಾಗಿ ಲೋಕಸಭೆಯಲ್ಲಿ ವಿಭಿನ್ನ ಪಕ್ಷಗಳ ಸಾಕಷ್ಟು ಸದಸ್ಯರುಗಳ ಬೆಂಬಲವಿದ್ದಾಗ ಮಾತ್ರ ಹೀಗೆ ಮಾಡಲು ಸಾಧ್ಯ. ಒಂದು ವೇಳೆ ಈ ಠರಾವು ಪಾಸಾಗದಿದ್ದರೆ, ಸರಕಾರ ಪಾರಾಗುತ್ತದೆ ಮಾತ್ರವಲ್ಲ, ಇದು ತನ್ನ ಎಲ್ಲ ಧೋರಣೆಗಳಿಗೆ ದೊರೆತಿರುವ ಅನುಮೋದನೆ ಎಂದೂ ಹೇಳಿಕೊಳ್ಳಲು ಅವಕಾಶವಾಗುತ್ತದೆ. ಅಂದರೆ ಸರಕಾರ ತನ್ನ ಜನ–ವಿರೋಧಿ ಕ್ರಮಗಳನ್ನು ಮುಂದುವರೆಸದಂತೆ ತಡೆಯುವ ಬದಲು ಇನ್ನಷ್ಟು ಇಂತಹ ಕ್ರಮಗಳನ್ನು ಅನುಸರಿಸಲು ತನಗೆ ಲೋಕಸಭೆಯ ಅನುಮೋದನೆ ಇದೆ ಎಂದು ಹೇಳಿಕೊಳ್ಳಲು ಅವಕಾಶವಾಗುತ್ತದೆ.

ಎಸ್‌ಪಿ ಮತ್ತು ಬಿಎಸ್‌ಪಿ ಸರಕಾರಕ್ಕೆ ಹೊರಗಿನಿಂದ ಬೆಂಬಲವನ್ನು ಮುಂದೆವರೆಸುವ ಸದ್ಯದ ಸಂದರ್ಭದಲ್ಲಿ ತೃಣಮೂಲ ಕಾಂಗ್ರೆಸಿನ ಇಂತಹ ಕಾರ್ಯತಂತ್ರ ಈ ಸರಕಾರವನ್ನು ಉಳಿಸುವುದಷ್ಟೇ ಅಲ್ಲ, ಅದು ಇದೇ ನವ–ಉದಾರವಾದಿ ಸುಧಾರಣೆಗಳ ದಾರಿಯಲ್ಲಿ ಜನ–ವಿರೋಧಿ ಕ್ರಮಗಳನ್ನು ಮುಂದುವರೆಯಲು ಅವಕಾಶ ಮಾಡಿಕೊಡುವಂತದ್ದು. ಈ ಮೂಲಕ ಕಾಂಗ್ರೆಸ್ ಪಕ್ಷದ 'ಬಿ' ತಂಡವಾಗಿ ತೃಣಮೂಲ ಕಾಂಗ್ರೆಸ್ ಕೆಲಸ ಮಾಡಿದಂತಾಗುತ್ತದೆ.

ಕಾಂಗ್ರೆಸಿನ ಕುತರ್ಕ

ಅತ್ತ ಕಾಂಗ್ರೆಸ್ ಪಕ್ಷ ಮತದಾನ ಇರುವ ನಿಯಮಗಳ ಅಡಿಯಲ್ಲಿ ಯಾವುದೇ ಚರ್ಚೆ ನಡೆಯದಂತೆ ತಡೆಯುವ ಪ್ರಯತ್ನದಲ್ಲಿದೆ. ಸರಕಾರದ ಕಾರ್ಯಕಾರಿ ನಿರ್ಣಯಗಳನ್ನೆಂದೂ ಮತದಾನ ಇರುವ ನಿಯಮಗಳ ಅಡಿಯಲ್ಲಿ ಸಂಸದೀಯ ಚರ್ಚೆಗಳಿಗೆ ಒಳಪಡಿಸಲಾಗಿಲ್ಲ ಎಂದು ಕೇಂದ್ರ ವಾಣಿಜ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಆದರೆ ವಾಜಪೇಯಿ ನೇತೃತ್ವದ ಎನ್‌ಡಿಎ ಸರಕಾರ ಬಾಲ್ಕೊ ಕಂಪನಿಯ ಶೇರು ವಿಕ್ರಯದ ನಿರ್ಣಯ ಕೈಗೊಂಡಾಗ ಅದಕ್ಕೆ ಅಸಮ್ಮತಿ ಸೂಚಿಸುವ ಠರಾವನ್ನು ಇಂತಹುದೇ ನಿಯಮದಡಿಯಲ್ಲಿ ಮಂಡಿಸಲಾಗಿತ್ತು. ಮಾರ್ಚ್ 1, 2001ರಂದು ಸಿಪಿಐ(ಎಂ) ಸದಸ್ಯ ರೂಪ್‌ಚಂದ್ ಪಾಲ್ ಇದನ್ನು ಮಂಡಿಸಿದಾಗ ಕಾಂಗ್ರೆಸ್ ಕೂಡ ಅದನ್ನು ಬೆಂಬಲಿಸಿತ್ತು. ಆದರೆ ಅದು ಕೇಂದ್ರ ಸಂಪುಟದ ಧೋರಣೆಯ ಪ್ರಶ್ನೆಯಾಗಿರಲಿಲ್ಲ, ಶೇರು ವಿಕ್ರಯದ ಒಂದು 'ಪ್ರತ್ಯೇಕ' ಪ್ರಶ್ನೆ ಎಂದು ಯುಪಿಎ ಸಂಸದೀಯ ವ್ಯವಹಾರಗಳ ಮಂತ್ರಿಗಳ ತರ್ಕ.

ಇದೊಂದು ವಿಚಿತ್ರ ತರ್ಕವೇ ಸರಿ. ಏಕೆಂದರೆ, ಈ ಠರಾವಿನ ಪರವಾಗಿ ಮಾತಾಡಿದ್ದ ಕಾಂಗ್ರೆಸಿನ ಪ್ರಿಯರಂಜನ್ ದಾಸಮುನ್ಶಿ "ಖಾಸಗಿಯವರಿಗೆ 51ಶೇ. ಪಾಲು ಕೊಟ್ಟರೆ, ಅದು ಶೇರು ವಿಕ್ರಯವಲ್ಲ, ಸಾರಾಸಗಟು ಖಾಸಗೀಕರಣ" ಎಂದಿದ್ದರು. ಆ ಠರಾವು 239–154 ಮತಗಳಿಂದ ಬಿದ್ದು ಹೋಯಿತು. ಆದರೆ ಆಗ ಕಾಂಗ್ರೆಸಿನ ಪ್ರತಿನಿಧಿ ಎನ್‌ಡಿಎ ಸರಕಾರದ ಖಾಸಗೀಕರಣದ ಧೋರಣೆಯ ಬಗ್ಗೆ ಮಾತಾಡಿದ್ದರು, ಒಂದು 'ಪ್ರತ್ಯೇಕ' ಶೇರು ವಿಕ್ರಯದ ಬಗ್ಗೆ ಅಲ್ಲ! ದೇಶದ ಕನಿಷ್ಟ ಐದನೇ ಒಂದು ಭಾಗ ಜನಸಂಖ್ಯೆಯ ಬದುಕನ್ನು ತಟ್ಟುವ ಒಂದು ಪ್ರಶ್ನೆಯ ಮೇಲೆ ಸಂಸತ್ತು ಮತದಾನವಿರುವ ನಿಯಮದ ಅಡಿಯಲ್ಲಿ ಚರ್ಚೆ ನಡೆಸದಂತೆ ತಡೆಯಲು ಕಾಂಗ್ರೆಸ್ ಇಂತಹ ಸುಳ್ಳುಗಳ ಮೊರೆ ಹೋಗುವಂತಿಲ್ಲ.

ಜನತೆಯ ಸಾರ್ವಭೌಮತೆಯ ಪ್ರಶ್ನೆ

ಇಷ್ಟೇ ಅಲ್ಲ, ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಪ್ರಶ್ನೆಯ ಮೇಲೆ ಸುಪ್ರಿಂ ಕೋರ್ಟಿನಲ್ಲಿ ಒಂದು ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನು ಸಲ್ಲಿಸಲಾಗಿತ್ತು. ಸರ್ವೋಚ್ಚ ನ್ಯಾಯಾಲಯದ ಮಧ್ಯಪ್ರವೇಶದ ನಂತರವೇ ರಿಝರ್ವ್ ಬ್ಯಾಂಕ್ ಬಹುಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಅನುಮತಿಯ ನಿಯಮಾವಳಿಗಳನ್ನು ತಿದ್ದುಪಡಿಗೊಳಿಸುವ ಒಂದು ಅಧಿಸೂಚನೆಯನ್ನು ಹೊರಡಿಸಿತು. ಇದನ್ನು ಅಕ್ಟೋಬರ್ 30ರಂದು ಸರಕಾರದ ಗೆಝೆಟ್‌ನಲ್ಲಿ ಪ್ರಕಟಿಸಲಾಗಿದೆ. ಈ ತಿದ್ದುಪಡಿಗಳನ್ನು ಸರಕಾರ ಸಂಸತ್ತಿನಲ್ಲಿ ಮಂಡಿಸುವುದಿಲ್ಲ ಎಂಬ ಸಂದೇಹಕ್ಕೆ ಕಾರಣವಿಲ್ಲ ಎಂದು ಅಭಿಪ್ರಾಯ ಪಟ್ಟ ಸುಪ್ರಿಂ ಕೋರ್ಟ್ ಸಂಸತ್ತಿನ ಅಧಿವೇಶನ ಆರಂಭವಾಗಲಿರುವುದರಿಂದ ಈ ಅರ್ಜಿ ಅದರ ನಿರ್ಧಾರಕ್ಕೆ ಕಾಯಬೇಕು ಎಂದಿದೆ. ಇದೇ ರೀತಿ

ಪುಟ 10 ಕ್ಕೆ

ಹಮಾಲರಿಗೆ ವಿಶೇಷ ನೆರವು ಘೋಷಿಸಲು ಆಗ್ರಹ......

ಪುಟ 7 ರಿಂದ

ಹಾನಗಲ್‌ನಲ್ಲಿ ಹಮಾಲಿ ಫೆಡರೇಶನ್‌ನ ರಾಜ್ಯ ಸಹಕಾರ್ಯದರ್ಶಿ ನೂರಹಮ್ಮದ ಖೇಣಿ ನೇತೃತ್ವವಹಿಸಿದ್ದರು.

ಲಿಂಗಸೂರ: ಸಿಂಧನೂರ: ಲಿಂಗಸೂರನಲ್ಲಿ ಎಪಿಎಂಸಿಯಿಂದ ತಹಶೀಲ್ದಾರ ಕಚೇರಿ ವರೆಗೆ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಯಿತು. ನಂತರ ಮನವಿ ನೀಡಲಾಯಿತು. ಸಂಘದ ಅಧ್ಯಕ್ಷ ಪರಸಪ್ಪ, ಕಾರ್ಯದರ್ಶಿ ಮಲ್ಲೇಶಿ, ರೈತ ಸಂಘದ ಮುಖಂಡ ಮಲ್ಲಯ್ಯ ಜಾಲಹಳ್ಳಿ, ಸಿಐಟಿಯು ಮುಖಂಡ ಶಿವಾನಂದ ನೇತೃತ್ವ ವಹಿಸಿದ್ದರು. ಸಿಂಧನೂರಿನಲ್ಲಿ ನರಸಪ್ಪ, ಯಂಕಪ್ಪ, ವೆಂಕಟೇಶ, ಹುಸೇನಪ್ಪ ನೇತೃತ್ವ ವಹಿಸಿದ್ದರು.

ಸಿರಗುಪ್ಪ: ಕುರಗೋಡು: ಹೊಸಪೇಟ: ಸಿರಗುಪ್ಪದಲ್ಲಿ ಮಿಲ್, ಗ್ರಾಮೀಣ ಹಾಗೂ ಎಪಿಎಂಸಿ ಹಮಾಲರ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಿ ತಹಶೀಲ್ದಾರರಿಗೆ ಮನವಿ ನೀಡಲಾಯಿತು. ಹಮಾಲಿ ಫೆಡರೇಶನ್ ರಾಜ್ಯ ಮುಖಂಡರಾ ಎಚ್.ತಿಪ್ಪಯ್ಯ, ಕೆ. ಸುರೇಶ, ಓಬಳೇಶಪ್ಪ, ಬೆಲ್ಲದ ಈರಣ್ಣ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ಕುರಗೋಡಿನಲ್ಲಿ ಮುಖಂಡರಾದ ಸೋಮಪ್ಪ, ಗಾಳಿ ಬಸವರಾಜ ನೇತೃತ್ವದಲ್ಲಿ ಮನವಿ ಸಲ್ಲಿಸಲಾಗಿದೆ. ಹೊಸಪೇಟನಲ್ಲಿ ತಹಶೀಲ್ದಾರ ಕಚೇರಿ ಎದುರು ಧರಣಿ ನಡೆಸಲಾಯಿತು. ಬಾಸ್ಕರರೆಡ್ಡಿ, ನಾಗರಾಜ, ಎಸ್.ರಾಮ ಮುಂತಾದವರು ಪಾಲ್ಗೊಂಡಿದ್ದರು.

ಸಿರಸಿ: ಸಿದ್ದಾಪೂರ: ಶಿರಸಿ ಅಡಿಕೆ ಮಾರುಕಟ್ಟೆಯ ಹಮಾಲಿ ಕಾರ್ಮಿಕ ಮುಖಂಡರು ತಹಶೀಲ್ದಾರ ಕಚೇರಿ ಎದುರು ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದರು. ನಾಗಪ್ಪ ನಾಯಕ, ಅನ್ನಪ್ಪ, ವೆಂಕಟೇಶ ನಾಯಕ ಉಪಸ್ಥಿತರಿದ್ದರು. ಸಿದ್ದಾಪೂರದಲ್ಲಿ ಪ್ರತಿಭಟನಾ ಮೇರವಣಿಗೆ ನಡೆಸಲಾಗಿದೆ. ಅಂಗನವಾಡಿ ನೌಕರರ ಮುಖಂಡರಾದ ಶಾಂತಿ ಶೇಠ, ಹಮಾಲಿ ಸಂಘದ ಮುಖಂಡ ಕೃಷ್ಣಾ ಅಂಬಿಗಾರ ಬೇಡಿಕೆಗಳನ್ನು ಈಡೇರಿಸುವಂತೆ ಸರಕಾರವನ್ನು ಒತ್ತಾಯಿಸಿದರು.

ದಲಿತರ ಸೌಲಭ್ಯ ವಂಚನೆ ವಿರುದ್ಧ ....

ಪುಟ 3 ರಿಂದ

ದ.ಕ.ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ, ಸಿಪಿಐ(ಎಂ) ಉಳ್ಳಲ ವಲಯ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್ ಮಾತನಾಡಿದರು. ಡಿವೈಎಫ್ಐ ಉಳ್ಳಾಲ ವಲಯ ಸಮಿತಿ ಅಧ್ಯಕ್ಷ ಅಶೋಕ್ ಶೆಟ್ಟಿ, ಕಾರ್ಯದರ್ಶಿ ಮಹಾಬಲ ದೆಪ್ಪೆಲಿಮಾರ್, ರಫೀಕ್ ಹರೇಕಳ, ರೋಹಿದಾಸ್, ಎಸ್ಎಫ್ಐ ರಾಜ್ಯ ಸಮಿತಿಯ ಜೀವನ್‌ರಾಜ್ ಕುತ್ತಾರ್, ಕಾರ್ಮಿಕ ಮುಖಂಡ ಜಯಂತ್ ನಾಯಕ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಡ್ರೈನೇಜ್ ಸೋರಿಕೆ ಖಂಡಿಸಿ ಡಿವೈಎಫ್ಐ ಪ್ರತಿಭಟನೆ:

ಮಂಗಳೂರು ನಗರದ ಸ್ಟೇಟ್‌ಬ್ಯಾಂಕ್ ಸಮೀಪದ ಮೀನು ಮಾರ್ಕೆಟ್ ಬಳಿಯ ಸುಲಭ್ ಶೌಚಾಲಯದಲ್ಲಿ ಡ್ರೈನೇಜ್ ಸೋರಿಕೆಯಾಗುತ್ತಿರುವುದನ್ನು ಖಂಡಿಸಿ ಡಿವೈಎಫ್ಐ ಮಂಗಳೂರು ನಗರ ಸಮಿತಿ ನವಂಬರ್ 16 ರಂದು ದಢೀರ್ ಪ್ರತಿಭಟನೆಯನ್ನು ನಡೆಸಿತು.

ಪ್ರತಿಭಟನೆಯನ್ನು ಉದ್ದೇಶಿಸಿ ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್ ಮಾತನಾಡಿದರು. ನಗರ ಸಮಿತಿಯ ಕಾರ್ಯಕರ್ತರಾದ ಯೋಗೀಶ್ ಜಪ್ಪಿನಮೊಗರು, ಸಂತೋಷ್ ಬಜ್ಪಾಲ, ಮುಸ್ತಾಫ ಕಲ್ಲಕಟ್ಟೆ, ಮಾಲಿಕ್ ಕೃಷ್ಣಾಪುರ, ಹಸನ್, ಜಯ ಕುಮಾರ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ವಿದೇಶಿ ನೇರ ಹೂಡಿಕೆ ವಿರೋಧಿಸಿ ಉಡುಪಿಯಲ್ಲಿ ಸಿಪಿಐ(ಎಂ) ಸಮಾವೇಶ:

ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯಿಂದ ಒಂದು ಉದ್ಯೋಗ ಸೃಷ್ಟಿಯಾದರೆ 17 ಉದ್ಯೋಗಿಗಳು ಕೆಲಸ ಕಳೆದುಕೊಳ್ಳಬೇಕಾದ ಸ್ಥಿತಿ ನಿರ್ಮಾಣವಾಗಲಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಬಿ.ಮಾಧವ ಆತಂಕ ವ್ಯಕ್ತಪಡಿಸಿದರು.

ಚಿಲ್ಲರೆ ವ್ಯಾಪಾರದಲ್ಲಿ ವಿದೇಶೀ ನೇರ ಬಂಡವಾಳ ಹೂಡಿಕೆಯನ್ನು ವಿರೋಧಿಸಿ ಸಿಪಿಐ(ಎಂ) ಉಡುಪಿ ತಾಲೂಕು ಸಮಿತಿ ನವಂಬರ್ 20 ರಂದು ಆಯೋಜಿಸಿದ್ದ ಉಡುಪಿ ತಾಲೂಕು ಮಟ್ಟದ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಶಂಕರ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಸಮಿತಿ ಸದಸ್ಯ ಬಾಲಕೃಷ್ಣ ಶೆಟ್ಟಿ, ಉಡುಪಿ ತಾಲೂಕು ಸಿಪಿಐ(ಎಂ) ಕಾರ್ಯದರ್ಶಿ ಪಿ.ವಿಶ್ವನಾಥ ರೈ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ......

ಪುಟ 9 ರಿಂದ

ಬಾಲ್ಕೊ ಶೇರು ವಿಕ್ರಯದ ವೇಳೆಯೂ ದಿಲ್ಲಿ ಹೈಕೋರ್ಟ್ ಕೂಡಾ ಆ ಕುರಿತ ಅರ್ಜಿಯ ವಿಚಾರಣೆ ನಡೆಸುವಾಗ ಸಂಸತ್ತಿನ ಮೇಲೆ ವಿಶ್ವಾಸ ಇಟ್ಟಿತ್ತು.

ಇದಕ್ಕೆ ಸಂಬಂಧಪಟ್ಟಂತೆ ಪ್ರಿಯರಂಜನ್ ದಾಸಮುನ್ಶಿ ಹೇಳಿದ್ದ ಮಾತುಗಳನ್ನು ಕಾಂಗ್ರೆಸ್‌ನ ನೆನಪಿಗೆ ತರಬೇಕಾಗಿದೆ-"ಇಬ್ಬರೂ ನ್ಯಾಯಾಧೀಶರು ಸಂಸತ್ತಿನಲ್ಲಿ ವಿಶ್ವಾಸ ಇಟ್ಟಿದ್ದಾರೆ. ಸಂಸತ್ತಿನಲ್ಲಿ ಈ ಸಂಗತಿ ಇರುವುದರಿಂದ ಈ ಅಧಿವೇಶನ ಪೂರ್ಣಗೊಳ್ಳಲಿ, ಆ ಮೇಲೆ ಪ್ರತಿಕ್ರಿಯಿಸುತ್ತೇವೆ ಎಂದಿದ್ದಾರೆ. ಇದು ನ್ಯಾಯಾಂಗ ಸಂಸತ್ತಿಗೆ ತೋರಿರುವ ಗೌರವ. ಸಂಸತ್ತು ಹೇಗೆ ಪ್ರತಿಕ್ರಿಯಿಸಬೇಕು? ನಾವು ನಿಯಮ 184 ಮತ್ತು 193ರ ಅಡಿಯಲ್ಲಿ ಚರ್ಚಿಸುವ ಬಗ್ಗೆ ಕಿತ್ತಾಡಬೇಕೇ? ಬಾಲ್ಕೊ ವ್ಯವಹಾರವನ್ನು ಜಾಗತಿಕ ಆರ್ಥಿಕದೊಂದಿಗೆ, ಎಲ್ಲ ರೋಗಗ್ರಸ್ತ ಘಟಕಗಳ ಪುನರುಜ್ಜೀವನದೊಂದಿಗೆ ಬೆಸೆಯುವ ಅರುಣ್ ಜೇಟ್ಲಿಯವರ ಕಸರತ್ತಿನಿಂದ ವಿಚಲಿತರಾಗ ಬೇಕೇ? ಸಂಸತ್ತು ತನ್ನ ಪಾರಂಪರಿಕ ನೈತಿಕತೆಗೆ ಅನುಗುಣವಾಗಿ ನಿಂತು ಈ ವ್ಯವಹಾರವನ್ನು ತಿರಸ್ಕರಿಸುತ್ತೇವೆ, ಒಂದು ಜಂಟಿ ಸಂಸದೀಯ ಸಮಿತಿ ಬೇಕೆನ್ನಬೇಕು ಎಂದು ನನ್ನ ಭಾವನೆ. ಇದು ಕಾಂಗ್ರೆಸ್ ಮತ್ತು ಎನ್‌ಡಿಎ ನಡುವಿನ ರಾಜಕೀಯದ, ಸಿಪಿಐ(ಎಂ) ಮತ್ತು ಎನ್‌ಡಿಎ ನಡುವಿನ ರಾಜಕೀಯದ ಸಂಗತಿ ಅಲ್ಲ. ಇದು ಎನ್‌ಡಿಎ ಪಾಲುದಾರರೊಂದಿಗೆ ಮೇಲಾಟದ ಸಂಗತಿ ಅಲ್ಲ. ಇದು ದೇಶದ ಎದುರು ಸಂಸತ್ತಿನ ಸ್ವಂತ ಬುದ್ಧಿಮತ್ತೆಯ ಪ್ರಶ್ನೆ. ಈ ಸನ್ನಿವೇಶಕ್ಕೆ ನಾವು ಹೇಗೆ ಪ್ರತಿಕ್ರಿಯಿಸಬೇಕು?"

ಸರಕಾರ ಈಗ ಇದೇ ಭಾವನೆಯೊಂದಿಗೆ ಮತದಾನ ಇರುವ ನಿಯಮದ ಅಡಿಯಲ್ಲಿ ಚರ್ಚೆಗೆ ಒಪ್ಪಬೇಕು, ಸಂಸತ್ತು ಈ ವಿಚಾರದಲ್ಲಿ ನಿರ್ಧರಿಸಲು ಬಿಡಬೇಕು. ಅಂತಿಮವಾಗಿ, ನಮ್ಮ ಸಂವಿಧಾನದ ಅಡಿಯಲ್ಲಿ ಜನತೆಯೇ ಸಾರ್ವಭೌಮರು. ಅವರ ಸಾರ್ವಭೌಮತೆಯನ್ನು ಸಂಸತ್ತಿನಲ್ಲಿ ಅವರ ಚುನಾಯಿತ ಪ್ರತಿನಿಧಿಗಳು ಚಲಾಯಿಸುತ್ತಾರೆ. ನಮ್ಮ ಸಂವಿಧಾನದ ಕಾರ್ಯಪ್ರಣಾಳಿಯ ಪವಿತ್ರತೆಯನ್ನು ಬುಡಮೇಲು ಮಾಡಲು ಬಿಡಲಾಗದು.

(ಪೀಪಲ್ಸ್ ಡೆಮಾಕ್ರಸಿ ಸಂಪಾದಕೀಯದಿಂದ)

ಉದ್ಯೋಗ ಕೊಡಿ ಇಲ್ಲವೇ ನಿರುದ್ಯೋಗ ಭತ್ಯೆ ಕೊಡಿ

ನಿರುದ್ಯೋಗಿಗಳಿಂದ ಅರ್ಜಿ ಸಲ್ಲಿಕೆ

ನವೆಂಬರ್ 28 ರಂದು ರಾಜ್ಯಾದ್ಯಂತ ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನಾ ಧರಣಿ

ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ ಕಛೇರಿ ಎದುರು ಅಟೋ ರಿಕ್ಷಾಕ್ಕಾಗಿ ಕಾಯುತ್ತಿದ್ದೆ. ತಕ್ಷಣದಲ್ಲೇ ಎದುರು 20 ವರ್ಷ ಮೀರದ ಸುಂದರ ಯುವಕ ಅಟೋವನ್ನು ಪಕ್ಕಕ್ಕೆ ನಿಲ್ಲಿಸಿ 'ಎಲ್ಲಿಗೆ ಸಾರ್' ಎಂದ. ನಾನು ತಕ್ಷಣ ಜೆ.ಪಿ.ನಗರಕ್ಕೆ ಎಂದೆ. 'ದಯವಿಟ್ಟು ಕ್ಷಮಿಸಿ, ನಾನು ಜಯನಗರ ನಾಲ್ಕನೇ ಬ್ಲಾಕ್ ಹತ್ತಿರ ವಿಜಯ ಕಾಲೇಜುವರೆಗೆ ಬಿಡುತ್ತೀನೆ ಎಂದ ಆ ತರುಣ. ಆಯಿತಪ್ಪ ಅಲ್ಲಿಗೆ ಬಿಡು ಎಂದು ಅಟೋ ವೊಳಗೆ ಕುಳಿತೆ. ನಂತರದಲ್ಲಿ ಏನಪ್ಪ ನಿನ್ನ ಹೆಸರು? ಯಾಕೆ ಜೆ.ಪಿ.ನಗರಕ್ಕೆ ಬರಲ್ಲ ಎಂದೆ. ನನ್ನ ಹೆಸರು ಇಕ್ಬಾಲ್ ಹುಸೇನ್ ಅಂತ ಸಾರ್. ಅರ್ಜೆಂಟ್ ವಿಜಯ ಕಾಲೇಜಿಗೆ ಹೋಗಬೇಕು. ನನ್ನ ಪ್ರೆಂಡ್ಸ್ ಹಾಲ್ ಟಿಕೆಟ್ ತೆಗೆದುಕೊಂಡು ಬಿಟ್ಟರಂತೆ ನಾನು ತಗೊಬೇಕು. ನಾನು ಇವತ್ತು ರಜೆ ಅಂತ ಕನ್‌ಪ್ಯೂಸ್ ಮಾಡಿಕೊಂಡು ಬಿಟ್ಟೆ'. ಅಂದ್ರೆ ಏನು ಓದುತ್ತಾ ಇದಿಯಾ? ಬಿಬಿಎಂ ಸಾರ್, ಹೌದಾ ಮತ್ಯಾಕೆ ಆಟೋ ಓಡುಸ್ತಾ ಇದ್ದಿಯಾ?. ಹೊಟ್ಟೆ ಪಾಡಿಗೆ ಸಾರ್'. ನಮ್ಮಕ್ಕ ಎಂ. ಎ, ಎಂ.ಎಡ್ ಮಾಡಿ ನಾಲ್ಕು ವರ್ಷ ಆಯಿತು ಕೆಲಸ ವಿಲ್ಲ. ಪ್ರವೈಟ್ ಶಾಲ್ಗೆ ಹೋಗುತ್ತಿದ್ರು, ಎಲ್ಲಾ ಕೆಲಸ ಇವರ ಕೈಯಲ್ಲೇ ಮಾಡಿಸಿ ತಿಂಗಳಿಗೆ ಮೂರು ಸಾವಿರ ಕೊಡುತ್ತಿದ್ರು, ಅದ್ಕೆ ಬಿಟ್ಟು ಬಿಟ್ಟಳು. ನಮ್ಮ ಅಮ್ಮ ಮನೆ ಕೆಲಸಕ್ಕೆ ಹೋಗುತ್ತಾರೆ. ನಮ್ಮ್ ತಂದೆಗೆ ಕ್ಯಾನ್ಸರ್ ಇದೆ, ತಿಂಗಳಿಗೆ 50–60 ಸಾವಿರ ಕಾಸು ಬೇಕು. ನಮ್ಮಪ್ಪನ್ನ ನಮಕ್ಕನೇ ನೋಡುಕೊಳ್ಳುತ್ತಾಳೆ. ನಾನು ಬರೀ ಕಾಲೇಜಿಗೆ ಹೋದ್ರೆ ಆಗಲ್ಲ ಅಂತ ತರಗತಿ ನಡೆಯುವಾಗ ಬಿಟ್ಟು ಉಳಿದಂಗೆ ಅಟೋ ತುಳಿತ್ತೀನ ಸಾರ್ ಎಂದು ತನ್ನ ಒಡಲಾಳದ ನೋವಿನ ಕತೆಯನ್ನು ಹೇಳುತ್ತಾ ಬೆಂದಕಾಳೂರಿನ ಟ್ರಾಫಿಕ್‌ಅನ್ನ ನುಸುಳಿಸಿಕೊಂಡು ವಿಜಯ ಕಾಲೇಜಿನತ್ತ ನನ್ನನ್ನು ಬಿಟ್ಟು ಕಾಲೇಜಿಗೆ ಓಡೋಗುವ ತವಕದಲ್ಲಿದ್ದ. ಅವನಿಗೆ ಬಾಡಿಗೆ ಕೊಟ್ಟು ನನ್ನ ವಿಸಿಟಿಂಗ್ ಕಾರ್ಡ್ ಅವನ ಕೈಗಿತ್ತು ಜಯನಗರದ 1ನೇ ಮುಖ್ಯ ರಸ್ತೆಯ ಮುಖೇನಾ ಜೆ.ಪಿ.ನಗರಕ್ಕೆ ನಡೆಯುತೊಡಗಿದೆ. ಅಷ್ಟರಲ್ಲಿ ಮತ್ತೊಮ್ಮೆ ಟ್ರಾಫಿಕ್ ಸಿಗ್ನಲ್ ನಡೆಯುವುದನ್ನು ತಡೆಯೊಡಿತ್ತು. ನಿಂತು ಟ್ರಾಫಿಕ್ ಕಡೆ ನೋಡು ನೋಡುತ್ತಿದ್ದಂತೆ ಹೂವಿನ ಸಣ್ಣ ಸಣ್ಣ ಬುಟ್ಟಿಗಳನ್ನು ಹಿಡಿದು, ಹದಿಂಟು ದಾಟದ ಆ ಹೆಣ್ಣು ಮಕ್ಕಳು ಮತ್ತೆ ಬೇಗ ಟ್ರಾಫಿಕ್ ನಿಲ್ಲಲಿ. ಬೇಗ ಹೂ ಮಾರುವ ಕಾತರದಲ್ಲಿ ಟ್ರಾಫಿಕ್ ನ ಸಿಗ್ನಲ್ ಅನ್ನೇ ನೋಡುತ್ತಿದ್ದರು. ನಾಲ್ಕೈದು ನಿಮಿಷ ಕಳೆದು ಹೋಯಿತು. ಆ ಎಳೆಯ ತರುಣಿಯರು ಅಂಕಲ್ ಒಂದು ಮಳ ತಗೊಳ್ಳಿ ತಗೊಳ್ಳಿ ಎಂದು ಲವಲವಿಕೆಯಿಂದ ಮಾತಿನ ಮುತ್ತು ಸುರಿಸುತ್ತಿದ್ದರು. ಟ್ರಾಫಿಕ್ ಜಂಜಾಟದಲ್ಲಿ ಯಾರು ಕಿವಿಕೊಡಲಿಲ್ಲ. ಮತ್ತೆ ಟ್ರಾಫಿಕ್. ಮತ್ತೆದೇ ಸ್ಥಳಕ್ಕೆ ಬಂದು ನಿಂತರು. ನಾನು ಅವರನ್ನು ನೊಡಿ ಒಮ್ಮೆ ನಗುಮೊರೆ ತೋರಿ ಏನಮ್ಮ ನೀವೂ ಓದಲು ಹೋಗಲ್ವ? ಎಂದೆ. ಅದರಲ್ಲೊಬ್ಬಳು ಇವನ್ಯಾರ್ವ ನಮ್ಮ ಹುಷಾಬರಿಗೆ ಬರೋನೋ ಎಂಬ ಕೊಂಕ್ಕು ಕಣ್ಣಿಂದಲೇ ಮುಖ ತಿರುಗಿಸಿ ನಿಂತಳು. ಮತ್ತೊಬ್ಬಳು ಹೋಗ್ತೀವಿ. ಪ್ರತಿ ಸಂಜೆ ಹೂ ಮಾರುತ್ತೀವಿ ಎಂದಳು. ನಿನ್ನ ಹೆಸರು ಏನು?, ಮಲ್ಲಿಗೆ ಎನ್ನುತ್ತಾ ಮಲ್ಲಿಗೆಯಷ್ಟೇ ಬಿಳುಪಾಗಿರುವ ತನ್ನ ದಂತಗಳನ್ನು ತೋರಿಸುತ್ತಾ ನಗುನಾಚುತ್ತಾ ಹೇಳಿದಳು. ನಿಜವಾಗಲೂ.. 'ಹೌದು ಯಾಕೆ' ಎನ್ನುವಷ್ಟರಲ್ಲಿ ಟ್ರಾಫಿಕ್ ವಾಹನಗಳನ್ನು ನಿಲ್ಲಿಸಿತು. ಅವಳು ತಕ್ಷಣದಲ್ಲೇ 'ಹೂ ಬೇಕಾ ತಗೊಳ್ಳಿ ಅಂಕಲ್, ಪ್ಲೀಸ್ ಅಂಟಿ ಎನ್ನುತ್ತಾ ಬ್ರೆಕ್ ಹಿಡಿದು ನಿಂತ ವಾಹನ ಸವಾರರ ಹತ್ತಿರಕ್ಕೆ ಸರ್ರನೆ ನಡೆದಳು. ಹೀಗೆ ಟ್ರಾಫಿಕ್‌ನ ಜಾಮ್ ನಲ್ಲಿ ನಂತು ಕೆಟ್ಟ ಗಾಳಿಯನ್ನು ಕುಡಿಯುತ್ತಾ ನೂರಾರು ಕನ್ನಡದೆಣ್ಣು ಮಕ್ಕಳನ್ನು ಬೆಂದಕಾಳೂರಿನಲ್ಲಿ ಕಾಣಬಹುದು.

ಈ ರೀತಿಯಲ್ಲಿ ದೇಶಾದ್ಯಂತ ಕೋಟ್ಯಂತರ ಯುವಜನತೆ ಒಂದಲ್ಲಾ ಒಂದು ರೀತಿಯಲ್ಲಿ, ಓದುವುದನ್ನು ಬಿಟ್ಟು ಯುವ ವಯಸ್ಸಿನಲ್ಲಿ ಯಂತ್ರಗಳಂತೆ ದುಡಿಯುತ್ತಿದ್ದಾರೆ. ನಮ್ಮ ಯುವ ಅದಮ್ಯ ಚೈತನ್ಯ ಸರ್ವ ನಾಶ ವಾಗುತ್ತಿದೆ. ಇದಕ್ಕೆ ಮುಖ್ಯ ಕಾರಣ ತಮ್ಮ ತಂದೆ ತಾಯಿಯಂದಿರ ಮತ್ತು ಪೋಷಕರ ಸಂಪಾದನೆ ಜೀವನ ನಿರ್ವಹಣೆಗೆ ಸಾಲದೆ ಇರುವುದು. ಅಂದರೆ ದುಡಿಯಲು ಭದ್ರತೆಯ ಕೆಲಸ ವಿಲ್ಲ. ಇದ್ದರೂ ದುಡಿಮೆಗೆ ತಕ್ಕ ಕನಷ್ಟ ವೇತನ ವಿಲ್ಲ. ಹೀಗಾಗಿಯೇ ಬಡವರ ಮನೆ ಮಂದಿಯಲ್ಲಾ ಹಗಲಿರುಳು ದುಡಿಯುವುದು. ಇಂತಹ ನರುದ್ಯೋಗ ಸಮಸ್ಯೆ ದಿನೇ ದಿನೇ ಭೀಕರಗೊಳ್ಳುತ್ತಿದೆ. ಯುವಜನತೆ ಹತಾಶಗೊಳ್ಳುತ್ತಿದ್ದಾರೆ. ವಿದ್ಯಾವಂತ ಮತ್ತು ಅರೆ ವಿದ್ಯಾವಂತ ಮತ್ತು ಅನಕ್ಷರಸ್ಥರು ಸೇರಿದಂತೆ ರಾಜ್ಯದಲ್ಲಿ 2 ಕೋಟಿ 80 ಲಕ್ಷ ನರುದ್ಯೋಗಿಗಳಿದ್ದಾರೆ. ಅಭಿವೃದ್ಧಿಯೇ ನಮ್ಮ ಮೂಲ ಮಂತ್ರ ಮತ್ತು ಉದ್ಯೋಗ ಸೃಷ್ಟಿಯೇ ನಮ್ಮ ಜಪ ಎಂದಿದ್ದ ಬಿಜೆಪಿ ರಾಜ್ಯ ಸರ್ಕಾರ ಉದ್ಯೋಗಕ್ಕೆ ಸಂಬಂಧಪಟ್ಟಂತೆ ಏನೇನೂ ಗಮನ ಕೊಡಲಿಲ್ಲ. ಪ್ರಾಥಮಿಕ ಶಿಕ್ಷಣ ಇಲಾಖೆಯಲ್ಲಿ 38000 ಸಾವಿರ ಶಿಕ್ಷಕರ ಹುದ್ದೆಗಳು, ಅನುದಾನಿತ ಶಾಲೆಗಳಲ್ಲಿ 8000, ಪದವಿ ಪೂರ್ವ ಕಾಲೇಜುಗಳಲ್ಲಿ 14000 ಹಾಗೂ ಸಮಾಜ ಕಲ್ಯಾಣ ಇಲಾಖೆಯಲ್ಲಿ 5000 ಹುದ್ದೆಗಳು ಖಾಲಿ ಇವೆ. ಅಲ್ಲದೆ ಸರ್ಕಾರದ ಅಂಕಿ ಅಂಶಗಳ ಪ್ರಕಾರವೇ (ಸಾರ್ವಜನಿಕ ಉದ್ದಿಮೆಗಳ ಹುದ್ದೆಗಳನ್ನು ಹೊರತು ಪಡಿಸಿ) 1,80,000 ಸರ್ಕಾರಿ ಹುದ್ದೆಗಳು ಖಾಲಿ ಇವೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹುದ್ದೆಗಳು ಖಾಲಿ ಇದ್ದರೂ ನೇಮಕಾತಿ ಮಾಡಿಕೊಳ್ಳದೆ ಸರ್ಕಾರವೇ ಮುಂದೆ ನಿಂತು, ಭ್ರಷ್ಟಾಚಾರ ಎಸಗುವ ಖಾಸಗಿ ಕಂಪನಗಳಿಗೆ ಹೊರಗುತ್ತಿಗೆ ನೀಡುತ್ತಿದೆ. ಶಿಕ್ಷಣ ಇಲಾಖೆಯಲ್ಲಿ ASTRIC ಎಂಬ ಖಾಸಗಿ ಕಂಪನಿಗೆ 10000 ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲು ಸರ್ಕಾರ ಮುಂದಾಗಿದೆ. ಅಲ್ಲದೆ ನೇಮಕಾತಿಗಳಲ್ಲಿ ನವೃತ್ತಿ ಹೊಂದಿದವರನ್ನು ನೇಮಿಸಿಕೊಳ್ಳಲಾಗುತ್ತಿದೆ. ನಿವೃತ್ತಿ ವಯೋಮಿತಿಯನ್ನು ಹೆಚ್ಚಿಸಲಾಗುತ್ತಿದೆ.



[illegible] ನೀತಿಗಳನ್ನು ವಿರೋಧಿಸಿ "ಉದ್ಯೋಗ ಕೊಡಿ ಇಲ್ಲವೇ ನಿರುದ್ಯೋಗ ಭತ್ಯೆ ಕೊಡಿ" [illegible] ಬೇಡಿಕೆಯಡಿ ಡಿ.ವೈ.ಎಫ್.ಐ ಯುವಜನ ಸಂಘಟನೆ ನಿರುದ್ಯೋಗಿಗಳಿಂದ ಅರ್ಜಿ ಸಲ್ಲಿಸುವುದರ ಜೊತೆಗೆ ರಾಜ್ಯಾದ್ಯಂತ ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನಾ ಧರಣಿ 28 ನವೆಂಬರ್ 2012 ರಂದು ಹಮ್ಮಿಕೊಂಡಿದೆ.

ಕೇಂದ್ರ ಸರ್ಕಾರದಡಿಯ ಇಲಾಖೆಗಳಲ್ಲಿ 15 ಲಕ್ಷಕ್ಕೂ ಮೀರಿ ಹುದ್ದೆಗಳು ಖಾಲಿ ಇವೆ. ರೈಲ್ವೆ ಇಲಾಖೆಯೊಂದರಲ್ಲೇ 3ಲಕ್ಷ ಹುದ್ದೆಗಳು ಖಾಲಿ ಇವೆ. ಇನ್ನು ಉದ್ಯೋಗ ಸೃಷ್ಟಿಗೆ ಪೂರಕ ಸಾರ್ವಜನಕ ಉದ್ಯಮಗಳನ್ನು ಪ್ರಾರಂಬಿಸದೇ ಸ್ಥಳೀಯವಾಗಿ ಸ್ವಯಂ ಉದ್ಯೋಗದ ಸೃಷ್ಟಿ ಸಾಧ್ಯವೇ ಇಲ್ಲ. ಸ್ವಯಂ ಉದ್ಯೋಗಗಳಿಗೆ ಸರ್ಕಾರಗಳಿಂದ ಯಾವುದೇ ಪ್ರೋತ್ಸಾಹಗಳಿಲ್ಲ. ಜೊತೆಗೆ ಸೇವಾ ವಲಯ ಮತ್ತು ಡಿ. ದರ್ಜೆ ನೌಕರರನ್ನು ಸಂಪೂರ್ಣವಾಗಿ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳುತ್ತಿರುವುದು ಆಳುವ ಸರ್ಕಾರಗಳ ಯುವಜನ ವಿರೋಧಿ ನೀತಿಯನ್ನು ಎತ್ತಿತೋರಿಸುತ್ತದೆ. ಇನ್ನೂ ಉನ್ನತ ವಿದ್ಯಾವಂತ ಯುವಜನರನ್ನು ಅರೆ ಉದ್ಯೋಗದಲ್ಲಿಟ್ಟು ಅವಮಾನವೀಯವಾಗಿ ಸರ್ಕಾರಗಳು ನಡೆಸಿಕೊಳ್ಳತ್ತವೆ. ಉದಾ : ಸರ್ಕಾರಿ ಕಾಲೇಜುಗಳಲ್ಲಿ ಅಥಿತಿ ಉಪನ್ಯಾಸಕರಿಗೆ 10 ತಿಂಗಳಿಗೊಮ್ಮೆ ಸಂಬಳ ನೀಡುತ್ತಿರುವುದು.

ಈ ಹಿಂದೆ ಯುವರನ್ನು ಸೆಳೆಯಲು ಕಾಂಗ್ರೇಸ್–ಬಿಜೆಪಿ ಗಳೆರಡು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಅಧಿಕಾರಕ್ಕೆ ಬಂದ ತಕ್ಷಣ ನಿರುದ್ಯೋಗ ಭತ್ಯೆಯನ್ನು ನೀಡುವುದಾಗಿ ಹೇಳಿದ ಭರವಸೆಗಳು ಸುಳ್ಳಾಗಿವೆ

ನಿರುದ್ಯೋಗಿಗಳಿಂದಲೇ ಹಣ ವಸೂಲಿ :

ನೇಮಕಾತಿ ಹೆಸರಿನಲ್ಲಿ ಅರ್ಜಿ ಹಾಕಲು ನಿರುದ್ಯೋಗಿಗಳಿಂದ 100 ರಿಂದ 500 ರೂವರೆಗೆ ಡಿ.ಡಿ. ಅಥವಾ ಪೋಸ್ಟಲ್ ಆರ್ಡರ್ ಪಾರಂ ಹೆಸರಿನಲ್ಲಿ ಕೋಟಿಗಟ್ಟಲೇ ಹಣವನ್ನು ಸರ್ಕಾರಗಳು ವಸೂಲಿ ಮಾಡುತ್ತಿವೆ. ಉದಾ: ಅರೋಗ್ಯ ಇಲಾಖೆ 2000 ಖಾಲಿ ಇರುವ ಡಿ. ಗ್ರೂಪ್ ನೌಕರನ್ನು ಭರ್ತಿಮಾಡಿಕೊಳ್ಳಲು ಅರ್ಜಿ ಅಹ್ವಾನಿಸಿತ್ತು. ಉದ್ಯೋಗಕ್ಕಾಗಿ ಎರಡು ಲಕ್ಷ ಯುವಜನರು ಅರ್ಜಿ ಹಾಕಿದ್ದಾರೆ. ಸಾಮಾನ್ಯ ಯುವಜನರು ಅರ್ಜಿಗೆ ತಲಾ ರೂ.300 ರಂತೆ ಹಾಗೂ ಪ.ಜಾ. ಮತ್ತು ಪ.ವರ್ಗದ ಯುವಜನರಿಂದ ತಲಾ ರೂ. 100 ರಂತೆ ಸರ್ಕಾರ ನಿರುದ್ಯೋಗಿಗಳಿಂದ ಒಂದೇ ಬಾರಿಗೆ ಕೋಟ್ಯಂತರ ಹಣ ವಸೂಲಿ ಮಾಡಿದೆ. ಇದೇ ರೀತಿಯಲ್ಲಿ ಕೆ.ಪಿ.ಎಸ್.ಸಿ. ಮತ್ತು ಎಲ್ಲಾ ಇಲಾಖೆಗಳಿಂದಲೂ ನಿರುದ್ಯೋಗಿಗಳಿಂದ ಪ್ರತಿ ಬಾರಿ ಹಣವನ್ನು ಸುಲಿಗೆ ಮಾಡಲಾಗುತ್ತಿದೆ. ಈ ರೀತಿಯಲ್ಲಿ ಯುವಜನರನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಂಚಿಸುತ್ತಿವೆ. ಇನ್ನೂ

ಪುಟ 12 ಕ್ಕೆ

ಹಗರಿಬೊಮ್ಮನಹಳ್ಳಿ; ಭೂಮಿಗಾಗಿ ಹೋರಾಟ ಭೂಮಿ ಕೇಳಿದ ರೈತರನ್ನು ಜೈಲಿಗಟ್ಟಿದ ಸರ್ಕಾರ

ನ್ಯಾಯ ಕೇಳಿದ್ರೆ.......ಜೈಲು, ಭೂಮಿ ಕೇಳಿದ್ರೆ.......ಜೈಲು. ನಮ್ಮನ್ನಾಳುವ ಸರ್ಕಾರ ಇದನ್ನಲ್ಲದೆ ಏನು ಕೊಡಲಿಕ್ಕೆ ಸಾಧ್ಯ!?. ಭೂಮಿ ಕೊಡ್ರಿ ಅಂತ ತಾಲೂಕ್ ಆಫೀಸಿಗೆ ಅರ್ಜಿ ಹಾಕಿದ್ವಿ, ಡಿಸಿ ಕಛೇರಿಗೆ ಅರ್ಜಿ ಹಾಕಿದ್ವಿ, ಬೆಂಗಳೂರಾಗ ಹೋರಾಟ ಮಾಡಿದ್ವಿ, ಮಂತ್ರಿ ಮಹೋದಯರು ಭರವಸೆ ಮಾತ್ರ ಕೊಟ್ರೆ ವಿನಃ ಭೂಮಿ ಮಾತ್ರ ಕೊಡಲಿಲ್ಲ..!!

ಕಂಪನಿಯವರು ಕೇಳೋದೇ ಬೇಡಾ.....ಕರ್ರು, ಕರ್ರು, ರತ್ನಗಂಬಳಿ ಹಾಸಿ, ಕೊಳ್ಳಾಗ ಹೂವಿನ ಹಾರ ಹಾಕಿ ಸಾವಿರಾರು ಎಕರೆ ಭೂಮಿ ಕೊಡ್ತಾರೆ. ಅದು ರೈತರ ಎಡೆ ಮುರಗಿ ಕಟ್ಟಿ, ರಕ್ತ ಬಸಿದು ಬೆವರಿಳಿಸಿ ಫಲವತ್ತಾದ ಭೂಮಿ.!

ಅಯ್ಯಾ.....ನೀವು ಭೂಮಿ ಹುಡುಕೋದು ಬೇಡ, ನಾವೇ ಭೂಮಿ ಹುಡ್ಕಂಡಿದ್ವಿ, ಗಿಡಗಂಟಿ ಕಡಿದಿದ್ವಿ, ಜಾಲಿಬೇಲಿ ಜಾಲಾಡಿದ್ವಿ, ಒಂದು, ಎರಡು ವರ್ಷ ಅಲ್ಲ.....ಹತ್ತಾರು ವರ್ಷ ಹೆಂಡತಿ, ಮಕ್ಕಳು ಈ ಭೂಮಿಗೆ ಬೆವರಿಳಿಸಿ ರಕ್ತ ಸುರಿಸಿದ್ವಿ, ಫಲವತ್ತಾದ ಭೂಮಿ ಮಾಡಿ, ದೇಶಕ್ಕೆ ಅನ್ನ ಬೆಳೆದು ಅಭಿವೃದ್ದಿ ಪಥಕ್ಕೆ ನಮ್ದೂ ಒಂದು ಕಾಣಿಕೆ ಕೊಟ್ಟಿದ್ದೀವಿ.

ಸುಮಾರು 30-40 ವರ್ಷಗಳಿಂದ ಸರ್ಕಾರಿ, ಅರಣ್ಯ ಭೂಮಿಯನ್ನು ಸಾಗು ಮಾಡಿದ ಲಕ್ಷಗಟ್ಟಲೆ ರೈತ ಕುಟುಂಬಗಳು ರಾಜ್ಯದಲ್ಲಿವೆ. ಅದೇ ರೀತಿಯಾಗಿ ಲಕ್ಷಗಟ್ಟಲೆ ದಲಿತ ಕುಟುಂಬಗಳಿಗೆ ಇಲ್ಲಿಯವರಿಗೆ ಭೂಮಿಯೇ ಸಿಕ್ಕಿಲ್ಲ. ಈ ಸರ್ಕಾರಿ, ಅರಣ್ಯ ಭೂಮಿಯನ್ನು ಬಹುತೇಕ ಸಾಗು ಮಾಡಿದವರು ದಲಿತರೇ ಆಗಿದ್ದಾರೆ ಎಂಬುದು ಗಮನಿಸಬೇಕಾದ ಅಂಶ. ಇದರ ಅರಿವು ಕನಿಷ್ಟ ಕಾಳಜಿ ಸರ್ಕಾರಕ್ಕಿಲ್ಲ.

ಹಗರಿಬೊಮ್ಮನಹಳ್ಳಿಗೆ ತಾಲೂಕಿನಲ್ಲಿ ಸಾಗು ಮಾಡಿದ ಬಡವರ ಸಾವಿರಾರು ಅರ್ಜಿಗಳು ತಿರಸ್ಕೃತಗೊಂಡಿವೆ. ಹಾಗೆಯೇ ಇನ್ನೂ ಸಾವಿರಕ್ಕೂ ಹೆಚ್ಚು ಕುಟುಂಬಗಳು ಅರ್ಜಿ ಹಾಕಿರಲಾರದೇ ಸರ್ಕಾರ ಅರ್ಜಿ ಕರೆಯುವುದನ್ನೇ ಜಾತಕ ಪಕ್ಷಿಯಂತೆ ಎದುರು ನೋಡುತ್ತಿದ್ದಾರೆ. ಇದರ ಜೊತೆಯಲ್ಲಿ ದಲಿತರಾದ ದೇವದಾಸಿ ಮಹಿಳೆಯರಿಗೆ ಎರಡು ಎಕರೆ ಭೂಮಿ ಕೊಡಬೇಕೆಂದು ಸರ್ಕಾರದ ನಿಯಮಾವಳಿ ಇದ್ದರೂ ಈ ಮಹಿಳಾ ಕುಟುಂಬಕ್ಕೆ ಭೂಮಿ ನೀಡಲು ಸಾಧ್ಯವಾಗಿಲ್ಲ. ಜೊತೆಗೆ ನಿವೇಶನದ ಪ್ರಶ್ನೆ ಹಲವು ಪಂಚಾಯ್ತಿಗಳಲ್ಲಿ ಹಾಗು ಪಟ್ಟಣದಲ್ಲಿ ಬಹು ಗಂಭೀರ ಪ್ರಶ್ನೆಯಾಗಿದೆ.

ಅರ್ಜಿ ತಿರಸ್ಕರಿಸಲು ಸಣ್ಣ ಕಾರಣ, ಪಹಣಿಯೊಳಗೆ ಹಳ್ಳ, ಈಚಲವನ, ಸವಳುಭೂಮಿ......ಇತ್ಯಾದಿ ಎಂದು ಆಗಿರುವುದೇ ಆಗಿದೆ. ಆದರೆ ಈ ಭೂಮಿ ಕೃಷಿ ಯೋಗ್ಯ ಭೂಮಿಯಾಗಿ ಹಲವು ದಶಕಗಳು ಆಗಿವೆ. ಸರ್ಕಾರ ಇದನ್ನು ಸರ್ವೆ ಇಲಾಖೆಯಿಂದ ಸರ್ವೆ ಮಾಡಿಸಿ ಕೃಷಿ ಯೋಗ್ಯ ಜಮೀನಾಗಿದೆಯೇ ಎಂದು ಪರಿಶೀಲಿಸಿ, ಪರಿವರ್ತಿಸಿ ಹಕ್ಕು ಪತ್ರ ನೀಡಿದರಾಯಿತು. ಇಷ್ಟು ಕೆಲಸ ಮಾಡಲು ನಮ್ಮನ್ನಾಳುವ ಸರ್ಕಾರಕ್ಕೆ ಪುರುಸೊತ್ತಿಲ್ಲದೆ.

ಪ್ರಾಂತ ರೈತ ಸಂಘ ಮತ್ತು ಪ್ರಾಂತ ಕೃಷಿ ಕೂಲಿಕಾರರ ಸಂಘಗಳ ರಾಜ್ಯ ಸಮಿತಿಗಳು ಕರೆ ನೀಡಿದ ಹೋರಾಟಗಳಲ್ಲಿ ತಾಲೂಕಿನ ಜನ ಭಾಗವಹಿಸಿದ್ದಾರೆ. ನವಂಬರ್-05 ಬಂದನಕ್ಕೊಳಗಾಗುವ ಚಳುವಳಿಯನ್ನು ತಾಲೂಕಿನಲ್ಲಿ ಸಂಪೂರ್ಣವಾಗಿ ಯಶಸ್ವಿಗೊಳಿಸಿದ್ದಾರೆ. ಕರ್ನಾಟಕ ಪ್ರಾಂತ ರೈತ ಸಂಘ ಹಗರಿಬೊಮ್ಮನಹಳ್ಳಿ ತಾಲೂಕ ಸಮಿತಿ ಹದಿನೈದು ದಿನಗಳ ಕಾಲ ಹಳ್ಳಿ-ಹಳ್ಳಿಯಲ್ಲೂ ಬೈಟಕ್ ಸಭೆಗಳನ್ನು ನಡೆಸಿತ್ತು. ಕೊನೆಯ ಎರಡು ದಿನಗಳ ಕಾಲ ಹಳ್ಳಿ-ಹಳ್ಳಿಗೂ ಜೀಪ್ ಜಾಥ ನಡೆಸಲಾಗಿತ್ತು.

ನವಂಬರ್-05 ರಂದು ತಾಲೂಕಿನ ಕನಿಷ್ಟ 700 ಜನರು ತಾಲೂಕು ಕಛೇರಿ ಪಿಕೆಟಿಂಗ್ ಹೋರಾಟದಲ್ಲಿ ಭಾಗವಹಿಸಿದ್ದರು. ಮಹಿಳೆಯರೇ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ ಈ ಹೋರಾಟ ಅಂತ್ಯಂತ ಯಶಸ್ವಿಯಾಗಿ ನೆಡೆಯಿತು.

ಕನಿಷ್ಟ ಹಕ್ಕು ಪತ್ರ ಕೊಡಲು ಲಾಯಕ್ಕಿಲ್ಲದ ಈ ಸರ್ಕಾರ 47 ಜನರನ್ನು ಬಂಧಿಸಿ ಜೈಲಿಗಟ್ಟಿತು. 23 ಜನ ಪುರುಷರನ್ನು ಹಡಗಲಿ ಜೈಲಿನಲ್ಲಿರಿಸಿದರೆ, 24 ಜನ ಮಹಿಳೆಯರನ್ನು ಬಳ್ಳಾರಿ ಜೈಲಿನಲ್ಲಿರಿಸಲಾಯಿತು. 5 ದಿನಗಳ ನಂತರ ಬೇಲ್ ಪಡೆದು ಹೋರಾಟ ಮಾಡಿದ ಕಾರ್ಯಕರ್ತರನ್ನು ಬಿಡುಗಡೆಗೊಳಿಸಲಾಯಿತು. ಜೈಲಿನಲ್ಲಿದ್ದ 24 ಜನ ಮಹಿಳೆಯರು ಭೂಮಿಯಿಲ್ಲದ ಕಟ್ಟ ಕಡೆಯ ದಲಿತ ದೇವದಾಸಿ ಮಹಿಳೆಯರೇ ಆಗಿದ್ದಾರೆ.

ಕುರುಡು ಸರ್ಕಾರಕ್ಕೆ ಕಣ್ಣಿದೆಯೇ......!?

ಹೋರಾಟದ ನಾಯಕತ್ವವನ್ನು ರೈತ ಸಂಘದ ಬಳ್ಳಾರಿ ಜಿಲ್ಲಾ ಸಮಿತಿ ಸಹ ಕಾರ್ಯದರ್ಶಿ ರಂಗಪ್ಪ ದಾಸರ, ತಾಲೂಕ ಅಧ್ಯಕ್ಷರಾದ ಕೊಟಗಿ ಮಲ್ಲಿಕಾರ್ಜುನ, ಉಪಾಧ್ಯಕ್ಷರಾದ ಸಿ.ಹನುಮಂತ, ಬೆಂಗಳೂರು ವೀರೇಶ, ಅಂಗವಿಕಲ ಸಂಘದ ಮುಖಂಡರಾದ ಹೆಚ್.ಉಸ್ಮಾನಭಾಷ.

ಮಹಿಳಾ ಚಳುವಳಿಯ ನಾಯಕತ್ವವನ್ನು ದೇವದಾಸಿ ಮಹಿಳಾ ವಿಮೋಚನಾ ರಾಜ್ಯ ಅದ್ಯಕ್ಷರಾದ ಬಿ,ಮಾಳಮ್ಮ ತಾಲೂಕ ಕಾರ್ಯದರ್ಶಿ ಪಿ. ಚಾಂದಬೀ ಅಧ್ಯಕ್ಷ
ಹೆಚ್.ಮೈಲಮ್ಮ, ಜನವಾದಿ ಕಾರ್ಯದ
ಜಿ.ಸರೋಜ. ಒಟ್ಟಾರೆ ಈ ಹೋರಾ
ಸಂಪೂರ್ಣವಾಗಿ ತೊಡಗಿ ಕೊಂಡ
ಸಿಐಟಿಯು ತಾಲೂಕ ಕಾರ್ಯದ
ಎಸ್.ಜಗನ್ನಾಥ. ಡಿವೈಎಫ್ಐ ತಾಲ
ಕಾರ್ಯದರ್ಶಿ ಒ.ತಿಮ್ಮಪ್ಪ.

ಜಿಲ್ಲೆಯಲ್ಲಿ ಜಿಲ್ಲೆಯಲ್ಲಿ ಭೂಮಿಗಾ
ಹೋರಾಟದ ಚಳುವಳಿ ಯಶಸ್ವಿಯಾ
ಜಿಲ್ಲೆಯ ಹಗರಿಬೊಮ್ಮನಹಳ್ಳಿ, ಶಿರು
ಬಳ್ಳಾರಿ, ಕುರುಗೋಡು, ಹೊಸಪೇ
ಸಂಡೂರು, ಕೂಡ್ಲಿಗಿಯಲ್ಲಿ ಹೋ
ನಡೆಸಲಾಗಿದೆ. ಶಿರುಗುಪ್ಪದಲ್ಲಿ 570 ಭಾಗವ
570 ಜನರು ಬಂಧನಕ್ಕೊಳಗಾಗಿದ್ದಾ
ಕುರುಗೋಡಿನಲ್ಲಿ 350 ಜನರು ಭಾಗವ
221 ಜನರು ಬಂಧನಕ್ಕೊಳಗಾಗಿದ್ದಾ
ಬಳ್ಳಾರಿಯಲ್ಲಿ 150 ಜನರು ಭಾಗವಹಿಸಿ 11
ಜನರು ಬಂಧನಕ್ಕೊಳಗಾಗಿದ್ದಾ
ಹೊಸಪೇಟೆಯಲ್ಲಿ 400 ಜನರು ಸಂಡೂರು
300 ಜನರು ಕೂಡ್ಲಿಗಿಯಲ್ಲಿ 250 ಜನ
ಹೋರಾಟದಲ್ಲಿ ಭಾಗವಹಿಸಿದ್ದಾ
ಹಗರಿಬೊಮ್ಮನಹಳ್ಳಿಯಲ್ಲಿ 700 ಜನ
ಭಾಗವಹಿಸಿ 47 ಜನರು 5 ದಿನಗಳ ಕಾ
ಜೈಲಿನಲ್ಲಿದ್ದಾರೆ. ಒಟ್ಟಾರೆ ಜಿಲ್ಲೆಯಲ್ಲಿ 2
ಜನರು ಹೋರಾಟದಲ್ಲಿ ಭಾಗವಹಿಸಿ
ಜನರು ಬಂಧನಕ್ಕೊಳಗಾಗಿದ್ದಾರೆ. ಕೂಡ್ಲಿ
ಸಂಡೂರು, ಹೊಸಪೇಟೆಯಲ್ಲಿ ಕರ್ನಾಟಕ ರಾ
ದೇವದಾಸಿ ಮಹಿಳಾ ವಿಮೋಚನಾ ಸಂಘದ
ಪ್ರತ್ಯೇಕವಾಗಿ ಹೋರಾಟ ನಡೆದ
ವಿಶೇಷವಾಗಿತ್ತು. ಇತರೆ ತಾಲೂಕಿನಲ್ಲಿ
ದೇವದಾಸಿ ಮಹಿಳಾ ವಿಮೋಚ
ಸಂಘಟನೆಯೂ ರೈತ ಸಂಘದೊಂ
ಜಂಟಿಯಾಗಿ ಭಾಗವಹಿಸಿತ್ತು.

ವರದಿ: ರಂಗಪ್ಪ ದಾಸರ, ಬ

ಉದ್ಯೋಗ ಕೊಡಿ ಇಲ್ಲವೇ ನಿರುದ್ಯೋಗ ಭತ್ಯೆ ಕೊಡಿ.....

ಪುಟ 11 ರಿಂದ

ವ್ಯಾಪಕ ಅವ್ಯವಹಾರಗಳ ಮುಖಾಂತರ ಬೆರಳೆಣಿಕೆಯಷ್ಟು ಉದ್ಯೋಗಗಳನ್ನು ವರ್ಷಗಟ್ಟಲೇ ವಿಳಂಬ ಮಾಡಿ ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಇಂತಹ ಯುವಜನ ವಿರೋಧಿ ನೀತಿಗಳನ್ನು ವಿರೋಧಿಸಿ, ದೇಶದ ಸಾಮಾಜಿಕ ಮತ್ತು ಆರ್ಥಿಕ ಮುನ್ನಡೆಗೆ ಉದ್ಯೋಗ ಆಧಾರಿತ ಅಭಿವೃದ್ಧಿಯೇ ಮೂಲವೆಂಬ ವೈಜ್ಞಾನಿಕ ಸತ್ಯವನ್ನು ನಂಬಿರುವ ಡಿ.ವೈ.ಎಫ್.ಐ ನಂಬಿರುವ ನಿರುದ್ಯೋಗ ಸಮಸ್ಯೆಗಳ ವಿರುದ್ಧ ಚಳುವಳಿಗೆ ಇಳಿಯಲು ಯುವಜನತೆಯನ್ನು ಮನವಿ ಮಾಡುತ್ತದೆ. ಈ ಹಿನ್ನೆಯಲ್ಲಿ ಡಿ.ವೈ.ಎಫ್.ಐ ಹಂತ ಹಂತವಾಗಿ ಬೃಹತ್ ಪ್ರಮಾಣದಲ್ಲಿ ಯುವಜನರನ್ನು ಹೋರಾಟಕ್ಕೆ ಇಳಿಸಲಿದೆ. ಇದರ ಮೊದಲ ಹೆಜ್ಜೆಯಾಗಿ ನವೆಂಬರ್ 28 ರಂದು ರಾಜ್ಯಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ "ಉದ್ಯೋಗ ಕೊಡಿ ಇಲ್ಲವೇ ನಿರುದ್ಯೋಗ ಭತ್ಯೆ ಕೊಡಿ" ಎಂಬ ಬೇಡಿಕೆಯಡಿಯಲ್ಲಿ ಕೇಂದ್ರ-ರಾಜ್ಯ ಸರ್ಕಾರಗಳನ್ನು ಒತ್ತಾಯಿಸಿ ಜಿಲ್ಲಾಧಿಕಾರಿಗೆ ನಿರುದ್ಯೋಗಿಗಳಿಂದ ಅರ್ಜಿ ಹಾಕಿಸುವ ಮುಖಾಂತರ ಪ್ರತಿಭಟನಾ ಧರಣಿಯನ್ನು ನಡೆಸಲಾಗುವುದು. ಈ ಯುವಜನ ಪರ ಹೋರಾಟದಲ್ಲಿ ಎಲ್ಲಾ ಯುವಜನತೆ ಸೇರಿದಂತೆ ಜನ ಸಾಮಾನ್ಯರೆಲ್ಲರೂ ಭಾಗವಹಿಸಬೇಕೆಂದು ಡಿ.ವೈ.ಎಫ್.ಐ ಮನವಿ ಮಾಡುತ್ತದೆ.

ನಿರುದ್ಯೋಗ ನಿವಾಹರಣೆಗೆ ನವೆಂಬರ್ 28ರ ಹೋರಾಟದಲ್ಲಿ ಡಿ.ವೈ.ಎಫ್.ಐ ಈ ಕೆಳಕಂಡ ಬೇಡಿಕೆಗಳನ್ನು ಮುಂದಿಟ್ಟು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಕಛೇರಿ ಎದುರು ಪ್ರತಿಭಟನ ಧರಣಿ ಮುಖಾಂತರ ಹೋರಾಟಕ್ಕಿಳಿಯುತ್ತಿದೆ.

- 1,80,000 ಖಾಲಿ ಇರುವ ಸರ್ಕಾರಿ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಿ.
- ಸರ್ಕಾರಿ ಇಲಾಖೆಗಳಲ್ಲಿ ದುಡಿಯುತ್ತಿರುವ ಗುತ್ತಿಗೆ, ಅರೆಕಾಲಿಕ ಉದ್ಯೋಗಿಗಳನ್ನು ಖಾಯಂಗೊಳಿಸಿ.
- ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿಮಾಡಿ. ಖಾಸಗಿ ರಂಗದಲ್ಲಿ ಮೀಸಲಾತಿ ಜಾರಿಗೆ ತನ್ನಿ.
- ಉದ್ಯೋಗ ನೇಮಕಾತಿ ಮೇಲಿನ ನಿರ್ಬಂಧ ಹಿಂತೆಗೆಯಬೇಕು.
- ಸರ್ಕಾರಿ/ಖಾಸಗೀ ವಲಯದಲ್ಲಿ ಹೊರ ಗುತ್ತಿಗೆ ರದ್ದಾಗಬೇಕು.
- ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಯುವಜನರಿಗೆ ಗ್ರಾಮಾಂತರದಲ್ಲಿ ರೂ, 10,000 ಬೆಂಗಳೂರಿನಲ್ಲಿ ರೂ, 15,00
ಕನಿಷ್ಟ ವೇತನ ನಿಗದಿಗೊಳಿಸಬೇಕು
- ಸರ್ಕಾರಿ/ಖಾಸಗೀ ವಲಯದಲ್ಲಿ ನಿ
ನೇಮಕಾತಿ ನಿಲ್ಲಬೇಕು.
- ಸರ್ಕಾರಿ ಸೇವಾ ವಲಯಗಳ
ವಿಸ್ತರಿಸಬೇಕು.
- ಗ್ರಾಮೀಣ ಉದ್ಯೋಗ ಖಾ
ಯೋಜನೆಗಳಲ್ಲಿ ಭ್ರಷ್ಟಾಚಾರ ತಡೆಗ
ಸಮರ್ಪಕವಾಗಿ ಜಾರಿಗೆ ತರಬೇಕು
- "ನಗರ ಉದ್ಯೋಗ ಖಾತ್ರಿ" ಯೋ
ಜಾರಿಗೆ ತನ್ನಿ.
- ಸ್ಥಳೀಯ ಸಂಪನ್ಮೂಲಗಳನ್ನು ಆಧ
ಸಾರ್ವಜನಿಕ ಉದ್ದಿಮೆಗಳನ್ನು ಸ್ಥಾ
- ಸ್ವಯಂ ಉದ್ಯೋಗಕ್ಕಾಗಿ ಸಬ್ಸಿಡಿ ಸ
ಜಾಮೀನು ರಹಿತ ಸಾಲ ನೀಡಬೇ
- ನಿರುದ್ಯೋಗಿಗಳಿಗೆ ಉದ್ಯೋ
ನೀಡುವವರೆಗೂ ಮಾಸಿಕ
ಕೊಡಬೇಕು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಅಂಬಾನಿ ಕಂಪನಿಗೆ ದಾಖಲೆ ಒದಗಿಸಲು ನಿರ್ದೇಶನ ಕೊಡಿ: ಸಿಎಜಿ ಪತ್ರ

–ಗೋದಾವರಿ ಕಣಿವೆಯಲ್ಲಿ ಅನಿಲ ಶೋಧನೆಯ ಕಾಂಟ್ರಾಕ್ಟ್ ಡೆದಿರುವ ಮುಕೇಶ್ ಅಂಬಾನಿ ಕಂಪನಿ ಆರ್‌ಐಎಲ್ ಮತ್ತು ನ್ನಾ–ಮುಕ್ತ–ತಪತಿಯಲ್ಲಿ ಇಂತಹ ಕಾಂಟ್ರಾಕ್ಟ್ ಪಡೆದಿರುವ ಬ್ರಿಟಿಶ್ ್ಯಸ್ ಕಂಪನಿಯ ಶೋಧನಾ ಪ್ರಾಜೆಕ್ಟುಗಳಿಗೆ ಮಂಜೂರಾತಿ ಡಬಾರದು ಎಂದು ದೇಶದ ಮಹಾ ಲೆಕ್ಕ ಪರಿಶೋಧಕರ ಚೇರಿ(ಸಿಎಜಿ) ಯುಪಿಎ–2 ಸರಕಾರಕ್ಕೆ ಹೇಳಿದೆ. ಇವೆರಡೂ ವುಗಳ ಲೆಕ್ಕ ಪರಿಶೋಧನೆಗೆ ಸಿಎಜಿ ಕೇಳಿರುವ ದಾಖಲೆಗಳನ್ನು ದಗಿಸಲು ನಿರಾಕರಿಸುತ್ತಿರುವುದೇ ಇದಕ್ಕೆ ಕಾರಣ.

ಇತ್ತೀಚಿನ ಸಂಪುಟ ಪುನರ್ರಚನೆಯ ಎರಡೇ ದಿನಗಳ ನಂತರ ಎಜಿ ಮತ್ತು ಆರ್‌ಐಎಲ್ ನಡುವೆ ಆಡಿಟ್ ಕುರಿತಂತೆ ಡೆಯಬೇಕಿದ್ದ ಮಾತುಕತೆಗಳನ್ನು ಮುಂದೂಡಲಾಯಿತು, ಸಿಎಜಿ ಮತ್ತು ಆರ್‌ಐಎಲ್ ನಡುವಿನ ವಿವಾದಗಳು ಗೆಹರಿಯಬೇಕಾದ್ದರಿಂದ ಮುಂದೂಡಲಾಗಿದೆ ಎಂದು ಟ್ರೋಲಿಯಂ ಮಂತ್ರಾಲಯ ಹೇಳಿತ್ತು. ಆದರೆ ಇದು ರ್ಪೊರೇಟು–ಹಿತೈಷಿ ಪುನರ್ರಚನೆಯ ಒಂದು ಫಲಶ್ರುತಿ ಎಂಬ ಂದೇಹ ಈಗ-ಬಲವಾಗುತ್ತಿದೆ.

ಆರ್‌ಐಎಲ್ ಅಗತ್ಯ ದಾಖಲೆಗಳನ್ನು ಒದಗಿಸಲು ವಿಳಂಬ ಾಡುತ್ತಲೇ ಇದೆ. ಆಡಿಟ್ ಕೆಲಸ ಸುರಳೀತವಾಗಿ ನಡೆಯದಂತೆ ಂದಾದ ಮೇಲೊಂದರಂತೆ ಅಡ್ಡಿ–ಆತಂಕಗಳನ್ನು ಒಡ್ಡಲಾಗುತ್ತಿದೆ, ಎಜಿ ಬಗ್ಗೆ ನಿರ್ಲಕ್ಷ್ಯದ ವರ್ತನೆ ತೋರುತ್ತಿದೆ, ಇದರಿಂದ ಡಿಟ್ ಕೆಲಸ ಸ್ಥಗಿತಗೊಂಡಿದೆ, ಆದ್ದರಿಂದ ಕೆಜಿಡಿ6 ಬ್ಲಾಕಿನ ಕ್ಕಪತ್ರ ದಾಖಲೆಗಳನ್ನು ಕೂಡಲೇ ಸಲ್ಲಿಸುವಂತೆ ಮಂತ್ರಾಲಯ ರ್‌ಐಎಲ್ ಗೆ ನಿರ್ದೇಶನ ನೀಡಬೇಕು, ಏಕೆಂದರೆ ಈ ಕಂಪನಿಯ ಂಡವಾಳ ಖರ್ಚಿನಲ್ಲಿ ಯಾವುದೇ ಏರಿಕೆ ಸರಕಾರದ ಹಿತಗಳ ೕಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಸಿಎಜಿ ೕಳಿದೆ. ಸಿಎಜಿ ತನ್ನ ಲೆಕ್ಕಪರಿಶೋಧನೆಯನ್ನು "ಲೆಕ್ಕಪತ್ರಗಳು ಮತ್ತು ದಾಖಲೆಗಳಿ"ಗೇ ಸೀಮಿತಗೊಳಿಸಬೇಕು, ಹಿಂದಿನ ರ್ಷಗಳ ಪರಿಶೋಧನೆಯನ್ನು ತನ್ನ ಒಪ್ಪಿಗೆಯಿಂದಷ್ಟೇ ಾಡಬೇಕು, ಆಡಿಟ್ ವರದಿಯನ್ನು ಪೆಟ್ರೋಲಿಯಂ ಮಂತ್ರಾಲಯಕ್ಕೆ ಮಾತ್ರ ನೀಡಬೇಕು, ಸಂಸತ್ತಿಗೆ ನೀಡಬಾರದು, ಡಿಟ್ ಕಾಂಟ್ರಾಕ್ಟಿನ ಗುಪ್ತತೆಗೆ ಒಳಪಟ್ಟಿರಬೇಕು, ಈ ಆಡಿಟ್‌ನಲ್ಲಿ ಳಿಸಿದ ಮಾಹಿತಿಯನ್ನು ಸಿಎಜಿ ಬೇರೆಡೆ ಬಳಸಬಾರದು–ಇವೆಲ್ಲ ರ್‌ಐಎಲ್ ಹಾಕಿರುವ ಶರತ್ತುಗಳು.

ಇಂತಹ ಶರತ್ತುಗಳಿಗೆ ಒಪ್ಪಲು ಸಾಧ್ಯವಿಲ್ಲ ಎಂದು ಸಿಎಜಿ ಟ್ರೋಲಿಯಂ ಇಲಾಖೆಗೆ ಸ್ಪಷ್ಟವಾಗಿ ಹೇಳಿದೆ ಎಂದು ರದಿಯಾಗಿದೆ. ಈ ಎಲ್ಲ ಶರತ್ತುಗಳು ಈ ಅಂಬಾನಿ ಕಂಪನಿ ದುವರೆಗೆ, ಯುಪಿಎ–2 ಸರಕಾರದಿಂದ ಪಡೆದಿರುವ ಜಾತಿಥ್ಯದಿಂದ ಬೆಳೆಸಿಕೊಂಡ ಕೊಬ್ಬಿನ ಫಲ ಎಂದು ಬೇರೆ ೕಳಬೇಕಾಗಿಲ್ಲ. ಪೆಟ್ರೋಲಿಯಂ ಇಲಾಖೆಯ ಹೊಸ ಮಂತ್ರಿಗಳು ಅಂಬಾನಿ ಕಂಪನಿಗೆ ಇಂತಹ ನಿರ್ದೇಶನ ನೀಡಬಲ್ಲರೇ ಂದು ಕಾದು ನೋಡಬೇಕು.

ಈ ನಡುವೆ ನವ–ಉದಾರೀಕರಣದ ಫಲಗಳಲ್ಲಿ ಒಂದಾದ ರ್‌ಐಎಲ್, ಬ್ರಿಟಿಶ್ ಗ್ಯಾಸ್ ಮುಂತಾದ ಕಂಪನಿಗಳೊಂದಿಗೆ ನಿಲ ನಿಕ್ಷೇಪಗಳ ಶೋಧನೆಯ 'ಉತ್ಪಾದನಾ ಪಾಲುದಾರಿಕೆ ಂಟ್ರಾಕ್ಟು'(ಪಿಎಸ್‌ಸಿ)ಗಳಲ್ಲಿಯೇ ಕಾಂಟ್ರಾಕ್ಟುದಾರರಿಗೆ ತಮ್ಮ ರ್ಚುಗಳನ್ನು ಹಿಗ್ಗಿಸಿ ತೋರಿಸಲು ಪ್ರೋತ್ಸಾಹ ನೀಡುವ ಂಶಗಳಿವೆ ಎಂದು ಸಿಎಜಿ ಹೇಳಿದೆ. ಇನ್ನು ಮುಂದೆ ಇಂತಹ ಂಟ್ರಾಕ್ಟುಗಳು ಕಾಂಟ್ರಾಕ್ಟುದಾರರ ಪುಸ್ತಕಗಳು, ಲೆಕ್ಕಪತ್ರಗಳು, ಾಖಲೆಗಳು, ದಸ್ತಾವೇಜುಗಳು ಮತ್ತು ಹಣಕಾಸು ಹೇಳಿಕೆಗಳನ್ನು ರಿಶೋಧಿಸುವ ಅಧಿಕಾರ ಸಿಎಜಿಗೆ ಇದೆ ಎಂದು ನಿರ್ದಿಷ್ಟವಾಗಿ ಳಗೊಳ್ಳಬೇಕು ಎಂದು ಅದು ಸೂಚಿಸಿದೆ.

ಇನ್ನೊಂದು ಅಂಬಾನಿ ಕಂಪನಿಗೂ ಸರಕಾರದ ವಿನಾಯ್ತಿ?

ರಿಲಯನ್ಸ್ ಇನ್ಫೊಕಾಂ ಎರಡು ವರ್ಷಗಳ ವರೆಗೆ ಂತರ್ರಾಷ್ಟ್ರೀಯ ಕರೆಗಳಿಗೆ ಸ್ಥಳೀಯ ಕರೆಗಳ ಮುಖವಾಡ ೊಡಿಸಿ ಸರಕಾರಕ್ಕೆ ಮೋಸ ಮಾಡಿತ್ತು ಎಂಬ ಆಪಾದನೆಯ ತನಿಖೆ ನಡೆಸುತ್ತಿರುವ ಸಿಬಿಐ ತೋರಿಕೆಯ ತನಿಖೆ ನಡೆಸುತ್ತಿದೆಯಷ್ಟೇ, ಸಣ್ಣ ವ್ಯಕ್ತಿಗಳ ಸಣ್ಣ–ಪುಟ್ಟ ತಪ್ಪುಗಳನ್ನಷ್ಟೇ ಪಟ್ಟಿ ಮಾಡುತ್ತಿದೆ, ದೊಡ್ಡ ವ್ಯಕ್ತಿಗಳ ದೊಡ್ಡ ಅಪರಾಧಗಳನ್ನು ಗಮನಿಸುತ್ತಲೇ ಇಲ್ಲ, ಕಳೆದ ಹಲವು ವರ್ಷಗಳಿಂದ ಅಂಬಾನಿ ಸೋದರರನ್ನು ಹೆಸರಿಸಿಯೂ ಇಲ್ಲ, ಇದಕ್ಕೆ ಕಾರಣಗಳೇನು ಎಂದು ಸಂಬಂಧಪಟ್ಟ ಸಿಬಿಐ ಅಧಿಕಾರಿಯನ್ನು ಮತ್ತು ಸಿಬ್ಬಂದಿ–ತರಬೇತಿ ಮಂತ್ರಿಯ ಪಾಟೀಸವಾಲಿಗೆ ಅವಕಾಶ ಕಲ್ಪಿಸಬೇಕು ಎಂಬ ಒಬ್ಬ ವಕೀಲ ಮತ್ತು ಮಾಹಿತಿ ಹಕ್ಕು ಕಾರ್ಯಕರ್ತರ ಅರ್ಜಿಯನ್ನು ಪರಿಶೀಲಿಸಿರುವ ದಿಲ್ಲಿ ಹೈಕೋರ್ಟ್ ಈ ಕುರಿತು ಸಿಬಿಐಗೆ ನೋಟೀಸು ಜಾರಿ ಮಾಡಿದೆ.

★



ಕಬ್ಬಿಗೆ ನ್ಯಾಯ ಬೆಲೆ ಕೇಳಿದ್ದಕ್ಕೆ ರೈತರ ಮೇಲೆ ಗೋಳೀಬಾರ್

ಇದು ಯುಪಿಎ–2 ಅಂಗಪಕ್ಷಗಳಾದ ಕಾಂಗ್ರೆಸ್–ಎನ್‌ಸಿಪಿ ಮಹಾರಾಷ್ಟ್ರ ಸರಕಾರದ ದರ್ಬಾರಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳು. ಈ ರಾಜ್ಯದಲ್ಲಿ ಕಳೆದ ಒಂದು ತಿಂಗಳಿಂದ ಕಬ್ಬು ಬೆಳೆಗಾರರು, ಕಟಾವಿನವರು ಹಾಗೂ ಸಕ್ಕರೆ ಕಾರ್ಮಿಕರು ಕಬ್ಬಿಗೆ ಫಲದಾಯಕ ಬೆಲೆ ಆಗ್ರಹಿಸಿ ಚಳುವಳಿ ನಡೆಸುತ್ತಿದ್ದಾರೆ. ಇದರ ಅಂಗವಾಗಿ ಸಾಂಗ್ಲಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ ರೈತರ ಮೇಲೆ ಪೋಲೀಸರು ನಡೆಸಿದ ಗೋಲೀಬಾರಿಗೆ ಒಬ್ಬ ರೈತ ಬಲಿಯಾಗಿದ್ದಾನೆ, ಇನ್ನೊಬ್ಬನ ಮೇಲೆ ಟ್ರಕ್ ಹರಿದು ಪ್ರಾಣಹರಣವಾಗಿದೆ. ಆದರೆ ಸರಕಾರಕ್ಕೆ ಇದರ ಬಗ್ಗೆ ಪರಿವೆಯೇ ಇದ್ದಂತಿಲ್ಲ. ಇದು ಯುಪಿಎ–2 ಸರಕಾರದ ಸಕ್ಕರೆ ಉದ್ದಿಮೆಯನ್ನು ಅನಿಯಂತ್ರಿತಗೊಳಿಸುವ ಧೋರಣೆಗೆ ಅನುಗುಣವಾಗಿಯೇ ಇದೆ. ಈ ಕುರಿತ ರಂಗರಾಜನ್ ಸಮಿತಿಯ ಶಿಫಾರಸುಗಳಿಗೆ ಸಂಸತ್ತಿನ ಮಂಜೂರಾತಿ ದೊರೆಯುವ ಮೊದಲೇ ಸರಕಾರ ಕಬ್ಬು ಬೆಲೆ ನಿರ್ಧಾರದಲ್ಲಿ ಮಧ್ಯಪ್ರವೇಶಿಸದಿರಲು ನಿರ್ಧರಿಸಿದಂತಿದೆ. ಕಬ್ಬು ಬೆಳೆಗಾರರು ಟನ್ನಿಗೆ 3,000 ರೂ. ಕೇಳುತ್ತಿದ್ದರೆ ಖಾಸಗೀ ಮಿಲ್ಲುಗಳು ಮತ್ತು ಸಹಕಾರಿಗಳು ರೂ2100–2300 ಮಾತ್ರ ಕೊಡುವುದಾಗಿ ಹೇಳುತ್ತಿದ್ದಾರೆ. ಸರಕಾರ ರೈತರ ನೆರವಿಗೆ ಬರುತ್ತಿಲ್ಲವಷ್ಟೇ ಅಲ್ಲ, ಸಕ್ಕರೆ ಕಾರ್ಖಾನೆಗಳ ಮಾಲಕರ ಪರವಾಗಿ ಪೋಲೀಸರನ್ನು ಕಳಿಸುತ್ತಿದೆ.

ದೇಶದ ವಿವಿಧ ಭಾಗಗಳಲ್ಲಿ ಖಾಸಗಿ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ 10,500 ಕೋಟಿ ರೂ.ಗಳಿಗೂ ಹೆಚ್ಚು ಬಾಕಿ ತೆರಬೇಕಾಗಿದೆ. ಆದರೆ ಆಳುವವರು ಇದನ್ನು ವಸೂಲಿ ಮಾಡಿ ರೈತರಿಗೆ ಕೊಡಿಸುವ ಯಾವ ಪ್ರಯತ್ನವನ್ನೂ ಮಾಡುತ್ತಿಲ್ಲ. ಮಹಾರಾಷ್ಟ್ರದಲ್ಲಂತೂ ಹಲವು ಸಕ್ಕರೆ ಕಾರ್ಖಾನೆಗಳು, ಸಹಕಾರಿಗಳು ಕಾಂಗ್ರೆಸ್–ಎನ್‌ಸಿಪಿ ಕೂಟದ ಇಲ್ಲವೇ ಬಿಜೆಪಿ–ಶಿವಸೇನೆ ಕೂಟದ ಹತೋಟಿಯಲ್ಲಿವೆ. ಆದ್ದರಿಂದ ಇವರಾರಿಗೂ ಕಬ್ಬುರೈತರಿಗೆ ನ್ಯಾಯಬೆಲೆ ಕೊಡಿಸುವ ಆಸಕ್ತಿಯೇ ಇಲ್ಲ.

★



ವೇದರಾಜ ಎನ್.ಕೆ.

ಶಿವಸೇನೆಯ ಬಂದನ್ನು ಪ್ರಶ್ನಿಸಿದ್ದಕ್ಕೆ ಯುವತಿಯರ ಬಂಧನ

ಮತ್ತೊಮ್ಮೆ ಮಾಹಿತಿ ತಂತ್ರಜ್ಞಾನ ಕಾನೂನನ್ನು ದುರುಪಯೋಗ ಪಡಿಸಿಕೊಂಡು ಇವೇ ಯುಪಿಎ ಪಕ್ಷಗಳ ಸರಕಾರ ಇಬ್ಬರು ಮಹಿಳೆಯರನ್ನು ಬಂಧಿಸಿದೆ. ಶಿವಸೇನೆಯ ಮುಖ್ಯಸ್ಥ ಬಾಳ ಠಾಕ್ರೆಯ ನಿಧನಕ್ಕಾಗಿ ನಡೆಸಿದ ಬಂದ್ ಸರಿಯಲ್ಲ ಎಂದು ಫೇಸ್‌ಬುಕ್‌ನಲ್ಲಿ ಹೇಳಿಕೊಂಡದ್ದಕ್ಕಾಗಿ ಮಹಾರಾಷ್ಟ್ರದ ಪಾಲ್ಘರ್‌ನ ಇಬ್ಬರು ಯವತಿಯರನ್ನು ಬಂಧಿಸಿದೆ. ಆದರೆ ಅವರಲ್ಲೊಬ್ಬ ಯುವತಿಯ ಸಂಬಂಧಿಯ ಕ್ಲಿನಿಕ್‌ನ ಮೇಲೆ ದಾಳಿ ಮಾಡಿದ ಶಿವಸೇನೆಯ ಗೂಂಡಾಗಳ ಮೇಲೆ ಯಾವ ಕ್ರಮವೂ ಇಲ್ಲ!

ಈ ಯುವತಿಯರು ಫೇಸ್‌ಬುಕ್‌ನಲ್ಲಿ ಹಾಕಿದ ಸಂದೇಶಗಳಲ್ಲಿ ಧಾರ್ಮಿಕ ಭಾವನೆಗಳನ್ನು ನೋಯಿಸುವಂತದ್ದೇನೂ ಇರಲಿಲ್ಲ, ಆದರೂ ಮಾಹಿತಿ ತಂತ್ರಜ್ಞಾನ ಕಾನೂನನ್ನು ಪ್ರಯೋಗಿಸಲಾಯಿತು! ಇಂತಹ ಬೇಕಾಬಿಟ್ಟಿ ದುರುಪಯೋಗಕ್ಕೆ ಅವಕಾಶ ಕೊಡುವ ಈ ಕಾನೂನಿನ ಅಂಶಗಳ ಪರಾಮರ್ಶೆ ಆಗಬೇಕಾಗಿದೆ ಎಂಬ ಬೇಡಿಕೆಗೆ ಈ ಘಟನೆಯಿಂದ ಮತ್ತಷ್ಟು ಬಲಬಂದಿದೆ.

ಯೋಜನೆ ಇದೆ, ವಸತಿ ಇಲ್ಲ

ಯುಪಿಎ ಸರಕಾರದ ವಸತಿ ಮತ್ತು ನಗರ ಬಡತನ ನಿವಾರಣೆ ಮಂತ್ರಾಲಯ ಪ್ರಕಟಿಸಿರುವ ಮಾಹಿತಿಗಳ ಪ್ರಕಾರ ಬಡವರಿಗೆ ವಸತಿ ಕಲ್ಪಿಸುವಲ್ಲಿನ ಪ್ರಗತಿ ಅತ್ಯಂತ ಕಳಪೆ. 2008 ರಲ್ಲಿ ಬಡಕುಟುಂಬಗಳಿಗೆ ಮನೆ ಪಡೆಯಲು ಸಾಲದ ಮೇಲಿನ ಬಡ್ಡಿಗೆ ಸಬ್ಸಿಡಿ ಕೊಡುವ ಒಂದು ಸ್ಕೀಮನ್ನು ಆರಂಭಿಸಲಾಯಿತು. 2012 ರ ವೇಳೆಗೆ 3,10,000 ಜನರಿಗೆ ಇದರ ಪ್ರಯೋಜನ ಒದಗಿಸುವ ಗುರಿಯಿತ್ತು. ಆದರೆ ನೀಡಿದ್ದು 7805 ಮಂದಿಗೆ ಮಾತ್ರ, ಅಂದರೆ ಸುಮಾರು 2.5ಶೇ.! ಹೇಳಿಕೊಳ್ಳಲು 1378 ಕೋಟಿ ರೂ.ಗಳನ್ನು ಇದಕ್ಕಾಗಿ ಒದಗಿಸಲಾಗಿದೆಯಂತೆ, ಆದರೆ ಇದುವರೆಗೆ ಬಳಕೆಯಾದದ್ದು ಕೇವಲ 6.5ಕೋಟಿ ರೂ. ವಾಸ್ತವವಾಗಿ ಈ ಸ್ಕೀಮಿನಲ್ಲೇ ದೋಷವಿದೆ ಎಂದು ತಜ್ಞರ ಅಭಿಪ್ರಾಯ. ಬಡವರ ಬಳಿ ನಿವೇಶನ ಇದೆ, ಮನೆ ಕಟ್ಟಿಕೊಳ್ಳಲು ಹಣಕಾಸು ಬೆಂಬಲ ಬೇಕಾಗಿದೆಯಷ್ಟೇ ಎಂಬ ಆಧಾರದಲ್ಲಿ ರೂಪಿಸಿದ ಯೋಜನೆಗೆ ಈ ಗತಿ ಬಂದಿದ್ದರೆ ಆಶ್ಚರ್ಯವಿಲ್ಲ.

ಯುಪಿಎ–2 ಸರಕಾರ ಬಹಳಷ್ಟು ಟಾಂಟಾಂ ಮಾಡುವ ಜವಹರಲಾಲ್ ನೆಹರು ನಗರ ನವೀಕರಣ ಮಿಶನ್‌ನದ್ದೂ ಇದೇ ಸ್ಥಿತಿ. ಇದರಲ್ಲಿ 50,000 ಕೋಟಿ ರೂ. ಒದಗಿಸುವದಾಗಿ ಹೇಳಿದ್ದರೂ ಬಡವರಿಗೆಂದು ಮಂಜೂರು ಮಾಡಿದ್ದರಲ್ಲಿ ಕಟ್ಟಿದ್ದು 30ಶೇ. ಮಾತ್ರ. ಜನಸಾಮಾನ್ಯರ ಕಲ್ಯಾಣದ ಹೊಣೆಗಾರಿಕೆಯಿಂದ ಜಾರಿಕೊಳ್ಳುವ ನವ–ಉದಾರವಾದಿ ದಾರಿಯಲ್ಲಿ ಪ್ರದರ್ಶನಕ್ಕೆಂದು ರೂಪಿಸುವ ಇಂತಹ ಯೋಜನೆಗಳಿಂದ ಬಹುಶಃ ಇದಕ್ಕಿಂತ ಹೆಚ್ಚಿನ ನಿರೀಕ್ಷೆ ಸಾಧ್ಯವಿಲ್ಲ.

ಜಗದಗಲ

ಶರತ್‌ಚಂದ್ರ

ಚೀನಾ ಕಮ್ಯುನಿಸ್ಟ್ ಪಕ್ಷದ 18 ನೇ ಮಹಾಧಿವೇಶನ

ಐದು ವರ್ಷಗಳಿಗೊಮ್ಮೆ ನಡೆಯುವ ಚೀನಾ ಕಮ್ಯುನಿಸ್ಟ್ ಪಕ್ಷದ (18 ನೇ) ಮಹಾಧಿವೇಶನ ಮತ್ತು 10 ವರ್ಷಗಳಿಗೊಮ್ಮೆ ನಡೆಯುವ ಪಕ್ಷ ಮತ್ತು ಸರ್ಕಾರದ ಉನ್ನತ ನಾಯಕತ್ವದ ಬದಲಾವಣೆ ಸುಲಲಿತವಾಗಿ ನಡೆದಿದೆ. ಅಮೆರಿಕನ್ ಸಾಮ್ರಾಜ್ಯಶಾಹಿ ಏಶ್ಯಾದಲ್ಲಿ ದೊಡ್ಡ ಪ್ರಮಾಣದಲ್ಲಿ ಮಿಲಿಟರಿ ಬಲ ಹೆಚ್ಚಿಸುತ್ತಿರುವ, ಚೀನಾದ ಸುತ್ತ ಆಕ್ರಾಮಕ ಮಿಲಿಟರಿ ವ್ಯೂಹ ರಚಿಸುತ್ತಿರುವ, ಚೀನಾದ ಆಂತರಿಕ ಸಮಸ್ಯೆಗಳು ಉಲ್ಬಣವಾಗಿ ಮೂಗು ತೂರಿಸಲು ಏನಾದರೂ ಅವಕಾಶ ಸಿಗಬಹುದೆ ಎಂಬ ಹಿನ್ನೆಲೆಯಲ್ಲಿ ನಡೆಯುತ್ತಿದೆ. ಚೀನಾದ ತ್ವರಿತ ಆರ್ಥಿಕ ಬೆಳವಣಿಗೆಗಳನ್ನು ಇಟ್ಟುಕೊಂಡು, ಅಸಮಾನತೆ ಕಡಿಮೆ ಮಾಡುತ್ತಾ, ಭ್ರಷ್ಟಾಚಾರ ಹೋಗಲಾಡಿಸಿ ಸಮಾಜವಾದಿ ವ್ಯವಸ್ಥೆ ಹೇಗೆ ಗಟ್ಟಿಗೊಳಿಸುವುದು ಎಂಬುದು ಪಕ್ಷದ ಮುಂದಿದ್ದ ಸವಾಲು.

ಅಧ್ಯಕ್ಷ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ಹು ಜಿಂತಾವೊ ಭ್ರಷ್ಟಾಚಾರದ ಸಮಸ್ಯೆ ಮೇಲೆ ಒತ್ತು ಕೊಡುತ್ತಾ ಅದನ್ನು ಹೋಗಲಾಡಿಸುವಲ್ಲಿ ಸೋತರೆ ಪಕ್ಷ ಮತ್ತು ಸರ್ಕಾರ ಬಿದ್ದು ಹೋಗುವ ಅಪಾಯ ಇದೆ ಎಂದು ಎಚ್ಚರಿಸಿದರು. ಇದಕ್ಕೆ ತಕ್ಕ ಕ್ರಮ ಕೈಗೊಳ್ಳಲಾಗುವುದು ಎಂದರು. ಸಮಾಜವಾದಿ ಮಾರುಕಟ್ಟೆ ಆರ್ಥಿಕದ ತ್ವರಿತಗೊಳಿಸಿ ಬೆಳವಣಿಗೆಯ ಮಾದರಿ ಬದಲಾಯಿಸುವುದು, ಅಸಮಾನತೆ ನಿವಾರಿಸುತ್ತಾ ಕನಿಷ್ಟ ಸಮೃದ್ಧಿಯ ಸಮಾಜ ಸ್ಥಾಪಿಸುವುದು, ಜನತೆಯ ಕಲ್ಯಾಣ ಮತ್ತು ಸಾಮಾಜಿಕ ಬೆಳವಣಿಗೆ ಸಾಧಿಸುವುದು, ಪ್ರಬಲವಾದ ಸಮಾಜವಾದಿ ಸಂಸ್ಕೃತಿ ಬೆಳೆಸುವುದು – ಇವೆಲ್ಲದರ ಬಗ್ಗೆ ಮುಂದಿನ ಐದು ವರ್ಷಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಹು ಮಂಡಿಸಿದ ಪ್ರಸ್ತಾವಗಳ ಬಗ್ಗೆ ಮಹಾಧಿವೇಶನ ಚರ್ಚಿಸಿತು. ಇವೆಲ್ಲವನ್ನು ಸಮಾಜವಾದಿ ವ್ಯವಸ್ಥೆಯನ್ನು ಉಳಿಸಿ ಬೆಳೆಸುತ್ತಾ ಮತ್ತು ರಾಜಕೀಯ ಸುಧಾರಣೆಗಳನ್ನು ಜಾರಿಮಾಡುತ್ತಾ ಮಾಡಬೇಕಾಗಿದೆ ಎಂದರು. ಪರಿಸರ ರಕ್ಷಣೆಯಲ್ಲಿ ಪ್ರಗತಿ, ರಕ್ಷಣೆ ಬಲಪಡಿಸುವುದು, ವಿಶ್ವ ಶಾಂತಿ ಮತ್ತು ಬೆಳವಣಿಗೆಗೂ ಪಕ್ಷ ಶ್ರಮಿಸಬೇಕು ಎಂದು ಕರೆ ಇತ್ತರು.



ಮಹಾಧಿವೇಶನದ 2270 ಪ್ರತಿನಿಧಿಗಳು 200ಕ್ಕೂ ಹೆಚ್ಚು ಸದಸ್ಯರಿರುವ ಕೇಂದ್ರ ಸಮಿತಿಯ ಆಯ್ಕೆ ಮಾಡಿದರು. ಈ ಕೇಂದ್ರ ಸಮಿತಿ 25 ಸದಸ್ಯರ ಪೊಲಿಟ್ ಬ್ಯೂರೊ ಮತ್ತು 7 ಸದಸ್ಯರ ಪೊಲಿಟ್ ಬ್ಯೂರೊ ಸೆಕ್ರೆಟಾರಿಯೆಟನ್ನು ಚುನಾಯಿಸಿತು. ಹಿಂದೆ ಇದ್ದ 9 ಪೊಲಿಟ್‌ಬ್ಯೂರೊ ಸೆಕ್ರೆಟಾರಿಯೆಟ್ ಸದಸ್ಯರಲ್ಲಿ 7 ಜನ ನಿಗದಿತ ವಯಸ್ಸು ಮತ್ತು ಅವಧಿಯ ಕಾರಣಗಳಿಂದ ನಿವೃತ್ತಿ ಹೊಂದಿದ್ದಾರೆ. ಪೊಲಿಟ್‌ಬ್ಯೂರೊ ಸೆಕ್ರೆಟಾರಿಯೆಟ್ ಸದಸ್ಯರ ಸಂಖ್ಯೆಯನ್ನು 7 ಕ್ಕೆ ಇಳಿಸಲಾಗಿದೆ. 5 ಜನ ಹೊಸಬರನ್ನು ಆಯ್ಕೆ ಮಾಡಲಾಗಿದೆ. ಕ್ಸಿ ಜಿನ್ ಪಿಂಗ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಅವರು ಮಾರ್ಚ್ 2013ರಲ್ಲಿ ನಡೆಯುವ ರಾಷ್ಟ್ರೀಯ ಜನತಾ ಕಾಂಗ್ರೆಸಿನ ಅಧಿವೇಶನದಲ್ಲಿ ಅಧ್ಯಕ್ಷರಾಗಿಯೂ, ಎರಡನೇ ಹಿರಿಯ ಪೊಲಿಟ್ ಬ್ಯೂರೋ ಸದಸ್ಯ ಲಿ ಕೆಕಿಯಾಂಗ್ ಪ್ರಧಾನಿಯಾಗಿಯೂ ಆಯ್ಕೆಯಾಗುವರೆಂದು ನಿರೀಕ್ಷಿಸಲಾಗಿದೆ. ಕ್ಸಿ ಕೇಂದ್ರೀಯ ಮಿಲಿಟರಿ ಕಮಿಶನಿನ ಮುಖ್ಯಸ್ಥರಾಗಿಯೂ ಅಧಿಕಾರ ವಹಿಸಿಕೊಳ್ಳುತ್ತಾರೆ. ಇವರಿಬ್ಬರೂ ಹಿಂದೆಯೂ ಪೊಲಿಟ್‌ಬ್ಯೂರೊ ಸೆಕ್ರೆಟಾರಿಯೆಟ್ ಸದಸ್ಯರಾಗಿದ್ದವರು.

ಜಾಗತಿಕ ಮತ್ತು (ಅದನ್ನು ಯಥಾವತ್ತಾಗಿ ಕಾಪಿ ಮಾಡುವ) ನಮ್ಮ ಮಾಧ್ಯಮಗಳಲ್ಲೂ ಮಹಾಧಿವೇಶನದ ಮೊದಲು, ನಡೆಯುತ್ತಿರುವಾಗಲೂ, ನಂತರವೂ ಕೆಲವೇ ವಿಷಯಗಳ ಬಗ್ಗೆ ವರದಿ ಮಾಡಲಾಯಿತು. ಪುಕಾರು ಹರಡಲಾಯಿತು ಎನ್ನುವುದು ಹೆಚ್ಚು ಸರಿಯಾದೀತು. ಮಹಾಧಿವೇಶನದ ಮೊದಲು 'ಭ್ರಷ್ಟಾಚಾರದ ವಿರುದ್ಧ ಹೋರಾಡಿದ' ಒಬ್ಬ ಪೊಲಿಟ್ ಬ್ಯೂರೊ ಸದಸ್ಯರ ಮೇಲೆ ಸುಳ್ಳು ಆಪಾದನೆ ಹೊರಿಸಲಾಗಿ ಅವರು ಸೆಕ್ರೆಟಾರಿಯಟ್ ಸ್ಥಾನಕ್ಕೆ ಹೋಗುವುದನ್ನು ತಡೆಗಟ್ಟಲಾಗಿದೆ ಎಂದರು. ಕೆಲವು ದಿನಗಳ ನಂತರ ಅವರ ಭ್ರಷ್ಟಾಚಾರ ಎಷ್ಟು ಅಗಾಧವಾಗಿದೆ ಎಂಬ ವರದಿಗಳು ಬರಲಾರಂಭಿಸಿದವು. ಈ ನಡುವೆ ಹೊಸ ಅಧ್ಯಕ್ಷ, ಪ್ರಧಾನಿ, ಪೊಲಿಟ್ ಬ್ಯೂರೊ ಸದಸ್ಯರ ಪದವಿಗಳಿಗೆ ಗಂಭೀರ 'ಸಂಘರ್ಷ' ನಡೆಯುತ್ತಿದೆ ಎಂದರು. ಆ ಮೇಲೆ ಹಿಂದಿನ ಅಧ್ಯಕ್ಷ ಜಿಯಾಂಗ್ ಜೆಮಿನ್ ಅವರ 'ಗುಂಪು ಗೆದ್ದಿದೆ' ಎಂದರು. ಮಹಾಧಿವೇಶನದ ವರದಿ ಚರ್ಚೆ ಎಲ್ಲಾ ಬೊಗಳೆ ಎಂದರು. ಚೀನಾದಲ್ಲಿ ನಾಯಕರು ಬದಲಾಗುತ್ತಾರೆ. ಆದರೆ ಯಾವ ನೀತಿಯೂ ಬದಲಾಗುವುದಿಲ್ಲ ಎ
ದೂರಿದರು. ಯಾಕೆಂದರೆ ಅವರ ನಿರೀಕ್ಷೆಯ
ಪಕ್ಷ ಒಡೆದು ಹೋಗಲಿಲ್ಲ ಅಥವಾ
ಸಮಾಜವಾದ ಬಿಟ್ಟು ಕೊಡಲಿಲ್ಲ ಅಥ
ಬಹುಪಕ್ಷೀಯ ಚುನಾವಣೆಯ ರಾಜಕೀ
ವ್ಯವಸ್ಥೆ ಅಂಗೀಕರಿಸಲಿಲ್ಲ. ಎಲ್ಲ
ಸುಲಲಿತವಾಗಿ ನಡೆಯಿತು. ಅದು ಅವ
ಇಷ್ಟವಾಗುವ ಸುದ್ದಿ ಅಲ್ಲ.

ಅತ್ಯಂತ ಬಡ ಅಧ್ಯಕ್ಷ – ಹೀಗೂ ಉಂಟೆ !

ಇವರ ಹೆಸರು ಜೋಸ್ ಮುಜಿಕಾ. ತಮ
ಸಣ್ಣ ತೋಟದ ಮನೆಯಲ್ಲಿ ತಮ್ಮ ದೇಶ
ಎಲ್ಲಾ ಬಡವರಂತೆ ವಾಸಿಸುತ್ತಾರೆ. ಇವರ
ಮತ್ತು ಇವರ ಹೆಂಡತಿ ಹೂವುಗಳನ
ಬೆಳೆಸುತ್ತಾರೆ. ಅಲ್ಲಿ ತಾವೇ ಒಗೆ
ಬಟ್ಟೆಯನ್ನು ಮನೆಯ ಎದುರು ಒಣಗಲ
ಹಾಕುತ್ತಾರೆ. 1,200 ಡಾಲರುಗಳಲ್ಲಿ ತಮ
ಜೀವನ ಮಾಡುತ್ತಾರೆ. ತಮ್ಮ ಸಂಬಳ
ಶೇ.90 ಭಾಗ ಬಡವರಿಗೆ ಸಮಾಜ ಸೇವ
ಕಾರ್ಯಗಳಿಗೆ ದಾನ ಮಾಡುತ್ತಾರೆ. ಅ
ಆಸ್ತಿಯೆಂದರೆ ಅವರ ತೋಟ, ಮನೆ, 19
ಮಾಡೆಲಿನ ಒಂದು ಕಾರು. ಇವರು ಜಗತ್ತಿ
ಅತ್ಯಂತ ಬಡ ಅಧ್ಯಕ್ಷ. ಉರುಗುವೇ ಅಧ್ಯ
ಇವರಿ ತಮ್ಮ ಅಧ್ಯಕ್ಷೀಯ ಅರಮ
ಬಳಸುವುದೇ ಇಲ್ಲ

ಆಳುವವರ ಶ್ರೀಮಂತರ ವೈಭ
ಭ್ರಷ್ಟಾಚಾರ ಇಡೀ ಜಗತ್ತಿನ
ಸುದ್ದಿಯಲ್ಲಿರುವಾಗ, ಉರುಗುವೇ ಅಧ್ಯ
ಈ 'ಲೈಫ್ ಸ್ಟೈಲ್' ಗಮನ ಸೆಳೆದಿ
ಅವರು 1985ರ ಹಿಂದೆ ದೇಶದ ಮಿಲಿ
ಸರ್ವಾಧಿಕಾರದ ವಿರುದ್ಧ ಗೆರಿಲ್ಲಾ ಪಡೆ
ನಾಯಕರಾಗಿದ್ದವರು. ಅವರು 6 ಬಾ
ಗುಂಡಿಗೆ ಗುರಿಯಾಗಿದ್ದರು. 14 ವರ
ಜೈಲಿನಲ್ಲಿ ಕಳೆದು ಅತ್ಯಂತ ಕ್ರೂ
ಚಿತ್ರಹಿಂಸೆಗೆ ಗುರಿಯಾಗಿದ್ದರು. 1985ರ
ಪ್ರಜಾಪ್ರಭುತ್ವ ಸ್ಥಾಪನೆಯಾದಾಗ ಬಿಡುಗ
ಆಗಿದ್ದರು. ಅವರು ತಾವು 'ಬಡವ
ಎಂದು ಒಪ್ಪುವುದಿಲ್ಲ. 'ತಮ್ಮ ಅಗತ್ಯಗಳ
ದೊಡ್ಡ ಪ್ರಮಾಣದಲ್ಲಿ ಹಿಗ್ಗಿಸಿ ಅದ
ಪಡೆಯಲು ಕೆಲಸ ಮಾಡುವವ
ಬಡವರು. ಅವರಿಗೆ ತಮಗೆ ಬೇಕಾ
ಮಾಡಲಿಕ್ಕೆ ಸಮಯವೇ ಇರುವುದಿ
ಇಂದಿನ ಜಗತ್ತಿನ ಸಂಪನ್ಮೂಲಗಳು ಈಗ
ಶ್ರೀಮಂತರಂತಹ 'ಲೈಫ್ ಸ್ಟೈಲ
ತಾಳಿಕೊಳ್ಳಲಾರದು' ಎನ್ನುತ್ತಾರೆ ಜೋ
ಮುಜಿಕಾ.

ಗಾಜಾ ಪಟ್ಟಿಯ ಮೇಲೆ ಇಸ್ರೇಲಿ ಭೀಕರ ದಾಳಿ

ಗಾಜಾ ಪಟ್ಟಿಯ ಮೇಲೆ 8 ದಿನಗಳ ಕಾಲ ಇಸ್ರೇಲ್ ಸತತವಾಗಿ ಭೀಕರ ದಾಳಿ ನಡೆಸಿದೆ. ಈ ದಾಳಿಯ ಆರಂಭದಲ್ಲೇ ಹಾಮಾಸ್ ಮಿಲಿಟರಿ ಮುಖ್ಯಸ್ಥನನ್ನು ಕ್ಷಿಪಣಿ ದಾಳಿ ಮೂಲಕ ಕೊಲೆ ಮಾಡಲಾಗಿದೆ. ಈ ಎಂಟೇ ದಿನಗಳಲ್ಲಿ ಸುಮಾರು 1500ಕ್ಕೂ ಹೆಚ್ಚು ವಿಮಾನ ದಾಳಿಗಳನ್ನು ನಡೆಸಲಾಯಿತು. ಈ ದಾಳಿಯಲ್ಲಿ 160ಕ್ಕೂ ಹೆಚ್ಚು ಪ್ಯಾಲೆಸ್ಟೈನ್ನರು ಸತ್ತಿದ್ದು ನೂರಾರು ಜನ ಗಾಯಗೊಂಡಿದ್ದಾರೆ. ಹಾಮಾಸ್ ನಡೆಸಿದ ರಾಕೆಟ್ ಪ್ರತಿದಾಳಿಗಳಲ್ಲಿ 5 ಜನ ಇಸ್ರೇಲಿಗಳು ಸತ್ತಿದ್ದಾರೆ. ಇತ್ತೀಚೆಗಷ್ಟೇ ಗಾಜಾ ಪಟ್ಟಿಗೆ ಪರಿಹಾರ ಸಾಮಗ್ರಿ ಹೊತ್ತು ತಂದ ಅಂತರ್ರಾಷ್ಟ್ರೀಯ ನೆರವು ಹಡಗನ್ನು ಅಂತರ್ರಾಷ್ಟ್ರೀಯ ಸಾಗರದಲ್ಲೇ ಇಸ್ರೇಲಿ ನೌಸೇನೆ ತಡೆದು ನಿಲ್ಲಿಸಿತ್ತು. ಈ ದಾಳಿ ಹಾಮಾಸ್ ಮಿಲಿಟರಿ ನೆಲೆಗಳ ಮೇಲೆ ಮಾತ್ರ ಎಂದು ಇಸ್ರೇಲ್ ಹೇಳಿಕೊಂಡಿದೆ. ಆದರೆ ದೊಡ್ಡ ಪ್ರಮಾಣದಲ್ಲಿ ನಾಗರಿಕರ ಸಾವು-ನೋವು ಬೇರೆಯೇ ಕತೆ ಹೇಳುತ್ತದೆ.

ಇಸ್ರೇಲಿ ದಾಳಿಯ ಹಿಂದಿರುವ ನಿಜವಾದ ಕಾರಣ ಬೇರೆಯೇ ಎನ್ನಲಾಗಿದೆ. ಇದು ಎಲ್ಲಾ ದೇಶಗಳಲ್ಲಿ ಆಳುವ ವರ್ಗದ ಪಕ್ಷಗಳ ತಂತ್ರ. ಜನತೆಯ ಸಮಸ್ಯೆಗಳು ಚುನಾವಣೆಯಲ್ಲಿ ಮುನ್ನೆಲೆಗೆ ಬರುವ, ವಿರೋಧ ಪಕ್ಷಗಳು ಅದರ ಮೇಲೆ ಪ್ರಚಾರ-ಪ್ರಕ್ಷೋಭೆ

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ನನ್ನ ಕಣ್ಣೀರ ಕೊಳ್ಳುವವರಿದ್ದರೆ......

ಪುಟ2 ರಿಂದ

ಸೃಜನಶೀಲತೆಯಿಂದಲ್ಲದೆ ಬೇರೆ ಯಾವುದರಿಂದ ನಿರೀಕ್ಷಿಸಲಾದೀತು? ಸಾಹಿತ್ಯ ಸಾಮಾಜಿಕ ಬದಲಾವಣೆಯ ಯಂತ್ರವಾಗಲಿಕ್ಕಿಲ್ಲ. ಆದರೆ ತಂತ್ರವಂತೂ ಖಂಡಿತ ಅದೇ ಆಗಿರುತ್ತದೆ. ಸಾಹಿತ್ಯವೊಂದು ಸಾಧಕವಾಗಲಿಕ್ಕಿಲ್ಲ. ಆದರೆ ಬದಲಾವಣೆಗೆ ಸಾಧನವಾಗುವುದು." ಎಂದು ನೀಲಾ ಈ ಹೈದರಾಬಾದ್ ಕರ್ನಾಟಕದ ಲೇಖಕರಿಗೆ ಈ ಜವಾಬ್ದಾರಿ ವಹಿಸುವಂತೆ ಕರೆ ನೀಡಿದರು. ಡಾ.ಮೀನಾಕ್ಷಿ ಬಾಳಿಯವರು ಈಕೂಟದ ಅಗತ್ಯದ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಮೊದಲು ಗುಲ್ಬರ್ಗ ವಿ.ವಿ.ಯ ಕನ್ನಡ ಅಧ್ಯಯನ ಕೇಂದ್ರದ ಡಾ. ನಾಗಾಬಾಯಿ ಬುಳ್ಳಾ ಸಮಾವೇಶದ ಉದ್ಘಾಟನೆ ಮಾಡುತ್ತಾ ಈ ಪ್ರದೇಶದ ಗತವೈಭವದ ಬಗ್ಗೆ ಮಾತನಾಡುವುದಕ್ಕಿಂತ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ತಮ್ಮನ್ನು ಲೇಖಕರು ತೊಡಗಿಸಿಕೊಳ್ಳಬೇಕು ಎಂದರು. ಈ ಪ್ರದೇಶದ ಸಾಹಿತ್ಯದಲ್ಲಿ ಸಣ್ಣ ಕಥೆ, ಕಾವ್ಯ ಬಿಟ್ಟರೆ ಉಳಿದ ಕ್ಷೇತ್ರಗಳು ಕಾದಂಬರಿ, ನಾಟಕ, ಮಕ್ಕಳ ಸಾಹಿತ್ಯ, ಜಾನಪದ ಅಧ್ಯಯನ, ನಾಟಕ ಬರಿದಾಗಿವೆ. ಇಡೀ ರಾಜ್ಯ ಕೋಮುವಾದೀಕರಣದಲ್ಲಿ ಮುಳುಗಿರುವಾಗ ಕೋಮು ಸೌಹಾರ್ದತೆಯ ತಾಣಗಳಾಗಿರುವ ಈ ಪ್ರದೇಶದ ವಿಶಿಷ್ಟತೆಯನ್ನು ಉಳಿಸಿಕೊಳ್ಳಬೇಕು. ಇಂತಹ ಸಮಾವೇಶ ಬಹಳ ಸಕಾಲಿಕ ಮತ್ತು ಅಗತ್ಯ ಎಂದು ಅವರು ಹೇಳಿದರು. ಸಮುದಾಯದ ಅಧ್ಯಕ್ಷ ಪ್ರೊ.ಆರ್.ಕೆ.ಹುಡಗಿಯವರು ಈ ಸಮಾವೇಶ ಏಕೆ ಸಂಘಟಿಸಿದ್ದು ಎಂಬುದರ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಡಾ.ಪ್ರಭು ಖಾನಾಪುರೆಯವರ ಅಧ್ಯಕ್ಷತೆಯಲ್ಲಿ ಈ ಪ್ರದೇಶದ ಹಲವು ಭಾಗಗಳಿಂದ ಬಂದ ಕವಿಗಳು ತಮ್ಮ ಕವನ ಓದಿದ ವಿಶಿಷ್ಟವಾದ ಕವಿ ಗೋಷ್ಠಿ ಸಮಾವೇಶಕ್ಕೆ ರಂಗೇರಿಸಿತು. ಕೆಲವು ಯುವ ಕವಿಗಳು ಸ್ವಯಂ-ಸ್ಫೂರ್ತಿಯಿಂದ ತಮ್ಮ ಕವನಗಳನ್ನು ಓದಿದರು. ಸಮಾವೇಶದ ಉದ್ದಕ್ಕೂ ಹಾಡುಗಳ ಸುಗ್ಗಿಯೇ ಇತ್ತು. ಸಮಾರೋಪದಲ್ಲಿ ಮಾತನಾಡುತ್ತಾ ಸಾಹಿತ್ಯ ಸಮುದಾಯದ ವಸಂತರಾಜ್ ಪ್ರಗತಿಶೀಲ ಮತ್ತು ಬಂಡಾಯ-ದಲಿತ ಚಳುವಳಿಗಳ ಮುಂದುವರಿಕೆಯಾದ, ಜಾಗತೀಕರಣ-ಕೋಮುವಾದ ಮತ್ತು ಪ್ರಭುತ್ವದ ಕೊತ್ತುಗಳ ಸಾಂಸ್ಕೃತಿಕ ದಾಳಿಯನ್ನೂ ಮತ್ತು ಅವುಗಳ ಸೈದ್ಧಾಂತಿಕ ಗುರಾಣೀಗಳಾದ ಪೋಸ್ಟ್ ಮಾಡರ್ನಿಸಂನ್ನು ಸಮರ್ಥವಾಗಿ ಎದುರಿಸಬಲ್ಲ, ಸಾಂಸ್ಕೃತಿಕ ರಾಜ್ಯವ್ಯಾಪಿ ಸಂಘಟಿತ ಪ್ರಭಾವ ಬೀರಬಲ್ಲ ಜನಮುಖಿ ಸಾಹಿತ್ಯ ವೇದಿಕೆಯೊಂದರ ಅಗತ್ಯದ ಬಗ್ಗೆ ಒತ್ತಿ ಹೇಳಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಗುಲ್ಬರ್ಗ ಜಿಲ್ಲಾ ಘಟಕದ ಅಧ್ಯಕ್ಷ ಮಹಿಪಾಲರೆಡ್ಡಿ ಮುನ್ನೂರು ಅವರು ಇಂತಹ ವೇದಿಕೆಗೆ ತಮ್ಮ ಘಟಕ ಎಲ್ಲಾ ಬೆಂಬಲ ನೀಡುವುದು ಎಂದು ಹೇಳಿದರು. ಸಮಾವೇಶ ಮೂರು ನಿರ್ಣಯಗಳನ್ನು ಚರ್ಚೆಯ ನಂತರ ಅಂಗೀಕರಿಸಿತು. ಆ ಮೂರು ನಿರ್ಣಯಗಳೆಂದರೆ 'ಪ್ರತ್ಯೇಕ ರಾಜ್ಯದ ಕೂಗು ಖಂಡಿಸಿ', 'ಗುಲ್ಬರ್ಗ ರಂಗಮಂದಿರದ ದುಬಾರಿ ಬಾಡಿಗೆ ಖಂಡಿಸಿ', 'ರಂಗಾಯಣ ಶಾಖೆ ಆರಂಭಿಸುವುದನ್ನು ಸ್ವಾಗತಿಸಿ'. ಕೊನೆಯದಾಗಿ ಅಶೋಕ ಶೆಟಕಾರ ಹಾಗೂ ತಂಡದವರಿಂದ ರಂಗಗೀತೆಗಳ ಕಾರ್ಯಕ್ರಮ ಇತ್ತು.

ಸಿಪಿಐ(ಎಂ) ಜನಜಾಗೃತಿ ಜಾಥಾ.....

ಪುಟ 5 ರಿಂದ

ಬಾಬುಗಸ್ತಿ ಡಿ.ಎನ್. ದೇಸಾಯಿ, ಪಿ.ಎಂ. ನಾಯಕ್, ಕೆ.ಎಲ್.ಇ. ಆಸ್ಪತ್ರೆಯ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಸಾಯಿ ಪಾಟೀಲ್ ಮೊದಲಾದವರು ಉಪಸ್ಥಿತರಿದ್ದರು.

ಮರುದಿನ ಬೆಳಗಾವಿ ನಗರದಲ್ಲಿ ಏರ್ಪಡಿಸಲಾಗಿದ್ದ ಪತ್ರಿಕಾ ಗೋಷ್ಠಿಯಲ್ಲಿ ಜಾಥಾದ ಮುಖಂಡರು ಭಾಗವಹಿಸಿ ಮಾತನಾಡಿದರು. ಜಾಥಾ ಹೀರೆಬಾಗೇವಾಡಿ, ಕಿತ್ತುರು ಮಾರ್ಗವಾಗಿ ಧಾರವಾಡ ತಲುಪಿದಾಗ ಸಂಜೆಯಾಗಿತ್ತು. ಕಡಪಾ ಮೈದಾನದಲ್ಲಿ ಜಾಥಾವನ್ನು ಎದುರು ನೋಡುತ್ತಿದ್ದ ಪಕ್ಷದ ಸದಸ್ಯರು ಮತ್ತು ಹಿತೈಷಿಗಳು ಘೋಷಣೆಗಳೊಂದಿಗೆ ಜಾಥಾವನ್ನು ಸ್ವಾಗತಿಸಿದರು. ಜಾಥಾ ವಾಹನದೊಂದಿಗೆ ಪ್ರಮುಖ ರಸ್ತೆಯಲ್ಲಿ ಮೆರವಣಿಗೆ ಯೊಂದನ್ನು ನಡೆಸಲಾಯಿತು. ಆನಂತರ ನಡೆದ ಬಹಿರಂಗ ಸಭೆಯಲ್ಲಿ ಜಿ.ಎನ್. ನಾಗರಾಜ್ ಮತ್ತು ನಿತ್ಯಾನಂದ ಸ್ವಾಮಿ ಮತ್ತು ಕೆ.ಮಹಾಂತೇಶ್ ಮಾತನಾಡಿದರು. ಆರಂಭದಲ್ಲಿ ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಮಹೇಶ್ ಪತ್ತಾರ್ ಸ್ವಾಗತಿಸಿದರು. ಕೊನೆಯಲ್ಲಿ ಕಾಮ್ರೆಡ್ ಆರ್.ಎಚ್.ಆಯಿ ವಂದಿಸಿದರು. ಪಕ್ಷದ ಜಿಲ್ಲಾ ಸಮಿತಿ.ಸದಸ್ಯರಾದ ಬಿ.ಎನ್. ಪೂಜಾರಿ, ಬಿ.ಐ. ಈಳಿಗೇರ್ ಅಲ್ಲದೆ ಕಾರ್ಮಿಕ ದುರೀಣರಾದ ಎಂ.ಬಿ.ಕಟ್ಟಿ, ವಿ.ಜಿ.ಕಮಾರ್, ವಕೀಲರಾದ ಪ್ರಕಾಶ್ ಉಡಿಕೇರಿ, ಕೆ.ಎಚ್. ಪಾಟಿಲ್. ವಿದ್ಯಾರ್ಥಿ ಮುಖಂಡರಾದ ವಿನಾಯಕಕುರುಬರ, ಜ್ಯೋತಿ, ಪುಟ್ಟರೆಡ್ಡಿ ಮೊದಲಾದವರು ಉಪಸ್ಥಿತರಿದ್ದರು.

ನವೆಂಬರ್ 20 ರಂದು ಬೆಳ್ಳಿಗ್ಗೆ ಹುಬ್ಬಳ್ಳಿ ಕಿತ್ತೂರ್ ಚೆನ್ನಮ್ಮ ವೃತ್ತದಲ್ಲಿ ಜಾಥಾವನ್ನು ಸ್ವಾಗತಿಸಲಾಯಿತು, ಪಕ್ಷದ ಜಿಲ್ಲಾ ಕಾರ್ಯದರ್ಶಿ ಬಿ.ಎಸ್.ಸೊಪ್ಪಿನ್, ಜಿಲ್ಲಾ ಸಮಿತಿ ಸದಸ್ಯರಾದ ಮಹೇಶ್ ಪತ್ತಾರ್, ನಾರಾಯಣ ಕಾಳೆ, ಮಾಗುಂಡಪ್ಪ ಅಂಗಡಿ ಬಸವರಾಜ ಪೂಜಾರ್, ಮಹೇಶ್ ಹಿರೇಮಠ ಮೊದಲಾದವರು ಹಾಜರಿದ್ದರು. ಅನಂತರ ನಡೆಸಲಾದ ಪತ್ರಿಕಾ ಗೋಷ್ಠಿಯಲ್ಲಿ ಜಿ.ಎನ್.ನಾಗರಾಜ ಮತ್ತು ನಿತ್ಯಾನಂದಸ್ವಾಮಿ ಜಾಥದ ಉದ್ದೇಶವನ್ನು ವಿವರಿಸಿದರು. ಮುಂದೆ ಜಾಥಾ ವಾಹನ ಕಲಘಟಗಿ ಮಾರ್ಗವಾಗಿ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲೂಕನ್ನು ಪ್ರವೇಶಿಸಿತು.

ಪಕ್ಷದ ಉತ್ತರ ಕನ್ನಡ ಜಿಲ್ಲಾ ಸಮಿತಿ ಸದಸ್ಯರೂ ಕಾರ್ಮಿಕ ಮುಖಂಡರೂ ಆಗಿರುವ ಕಾಮ್ರೇಡ್ ಹರೀಶ್ ನಾಯಕ್ ಮತ್ತು ಕಾಮ್ರೆಡ್ ಆರ್.ಎಂ.ಮುಲ್ಲಾ ಅವರು ಕಾವಲ್‌ವಾಡಾ ಎಂಬ ಗ್ರಾಮದಲ್ಲಿ ಸ್ಥಳೀಯ ರೈತರು, ಕೃಷಿ ಕೂಲಿಕಾರರು ಮತ್ತು ಕಟ್ಟಡ ಕಾರ್ಮಿಕರೊಂದಿಗೆ ಜಾಥಾವನ್ನು ಸ್ವಾಗತಿಸಿದರು. ಗ್ರಾಮದಲ್ಲಿ ಸಭೆಯೊಂದನ್ನು ನಡೆಸಿದ ಬಳಿಕ ಜಾಥಾ ತಂಡಕ್ಕೆ ಊಟ ನೀಡಿ ಬೀಳ್ಕೊಟ್ಟರು. ಸಂಜೆ 5 ಗಂಟೆಗೆ ಜಾಥಾ ಹಳಿಯಾಳ ಪಟ್ಟಣವನ್ನು ತಲುಪಿತು. ಗ್ರಾಮ ಪಂಚಾಯಿತಿ ನೌಕರರು ಮತ್ತು ಬಿಸಿಯೂಟ ಕಾರ್ಯಕರ್ತರ ಕಾಮ್ರೆಡ್ ಆರ್.ಎಂ.ಮುಲ್ಲಾ ನೇತೃತ್ವದಲ್ಲಿ ಜಾಥಾವನ್ನು ಸ್ವಾಗತಿಸಿದ್ದರು. ಬಸ್ ನಿಲ್ದಾಣದ ಪಕ್ಕದಲ್ಲಿ ಬಹಿರಂಗ ಸಭೆಯೊಂದನ್ನು ನಡೆಸಲಾಯಿತು. ಅಲ್ಲಿಂದ ಜಾಥಾ ದಾಂಡೇಲಿ ಕೈಗಾರಿಕಾ ನಗರಕ್ಕೆ ಆಗಮಿಸಿತು. ಪಕ್ಷದ ಸದಸ್ಯರು, ಹಿತೈಷಿಗಳು, ವೆಸ್ಟ್‌ಕೋಸ್ಟ್ ಪೇಪರ್ ಮಿಲ್ ಕಾರ್ಮಿಕರು,ಅಂಗನವಾಡಿ ಮತ್ತು ಬಿಸಿಯೂಟ ಕಾರ್ಯಕರ್ತೆಯರು ಜಾಥವನ್ನು ಸ್ವಾಗತಿಸಿದರು. ಕಿತ್ತೂರ್ ಚೆನ್ನಮ್ಮ ವೃತ್ತದಲ್ಲಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಮ್ರೆಡ್ ಶಾಂತಾರಾಮ್ ನಾಯಕ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕಾ। ನಿತ್ಯಾನಂದಸ್ವಾಮಿ ಮತ್ತು ಕಾ। ಜಿ.ಎನ್.ನಾಗರಾಜ ಮಾತನಾಡಿದರು. ಆರಂಭದಲ್ಲಿ ಕಾ। ಹೆಚ್.ಬಿ.ನಾಯಕ್ ಸ್ವಾಗತಿಸಿದ್ದರು. ಕೊನೆಯಲ್ಲಿ ಕಾ। ಹರೀಶ್ ನಾಯಕ್ ವಂದಿಸಿದರು. ಪಕ್ಷದ ಹಿರಿಯ ಮುಖಂಡರಾದ ಕಾ। ಮಂಜುನಾಥ ಪುಲೀಕರ್, ಕಾರ್ಮಿಕ ಮುಖಂಡರಾದ ಟಿ.ಎಸ್.ನಾಯಕ್, ಪೇಪರ್‌ಮಿಲ್ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಉದಯ್ ನಾಯಕ್ ಮೊದಲಾದವರು ಉಪಸ್ಥಿತರಿದ್ದರು. ಜಾಥಾ ಅಂದುರಾತ್ರಿ ದಾಂಡೇಲಿಯಲ್ಲಿ ವಸತಿಮಾಡಿ ಮರುದಿನ ಜೋಯಿಡಾ ಕಡೆಗೆ ಪ್ರಯಾಣ ಬೆಳೆಸಿತು..

ಗಾಜಾ ಪಟ್ಟಿಯ ಮೇಲೆ ಇಸ್ರೇಲಿ ಭೀಕರ ದಾಳಿ

ಪುಟ 14 ರಿಂದ

ನಡೆಸುವ ಸಾಧ್ಯತೆ ತಡೆಗಟ್ಟಲು ಯುದ್ಧ ಹುಟ್ಟು ಹಾಕುವುದು. 'ದೇಶ ಅಪಾಯದಲ್ಲಿದೆ' ಎಂದು ಬೊಬ್ಬೆ ಹೊಡೆಯುವುದು. ಈ ಅಪಾಯ ಆಗ ವಿರೋಧ ಪಕ್ಷಗಳು ಹಿಮ್ಮೆಟ್ಟಬೇಕಾಗುತ್ತದೆ. ಈಗ ಇರುವ ಪ್ರಧಾನಿ ನೆತನ್ಯಾಹು ಸರ್ಕಾರ ಅತ್ಯಂತ ಬಲಪಂಥೀಯ ಯುದ್ಧಕೋರ ಸರ್ಕಾರ. ನೆತನ್ಯಾಹು ಸರ್ಕಾರದ ಆಂತರಿಕ ಆರ್ಥಿಕ ನೀತಿಗಳು ಬಹಳ ಜನವಿರೋಧಿಯಾಗಿರುವವು. ಅರಬ್ ವಸಂತದ ಸಂದರ್ಭದಲ್ಲಿ ಇಸ್ರೇಲಿನಲ್ಲೂ ದೊಡ್ಡ ಪ್ರತಿಭಟನಾ ಪ್ರದರ್ಶನಗಳು ನಡೆದಿದ್ದವು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಬದಲಾದ ರಾಜಕೀಯ ಸನ್ನಿವೇಶದಲ್ಲಿ ಈಜಿಪ್ಟಿನಲ್ಲಿ ಈ ಇಸ್ರೇಲಿ ದಾಳಿಯ ವಿರುದ್ಧ ಹಲವು ಪ್ರತಿಭಟನಾ ಪ್ರದರ್ಶನಗಳು ನಡೆದವು. ಈ ಒತ್ತಡದಿಂದ ಈಜಿಪ್ಟಿನ ಸರ್ಕಾರ ಮಧ್ಯಸ್ತಿಕೆ ನಡೆಸಿ ಕದನ ವಿರಾಮಕ್ಕೆ ಪ್ರಯತ್ನಿಸಿತು. ಆಗ ಅಮೆರಿಕ ಮತ್ತು ಯುರೋಪಿಯನ್ ಕೂಟ ಸಹ ಇದರಲ್ಲಿ ಭಾಗವಹಿಸಬೇಕಾಗಿ ಬಂತು. ದಾಳಿಯ ಆರಂಭದಲ್ಲಿ ಅಮೆರಿಕದ ಅಧ್ಯಕ್ಷ ಒಬಾಮ ಇಸ್ರೇಲಿ ದಾಳಿ ಮತ್ತು ಹಾಮಾಸ್ ಮಿಲಿಟರಿ ಮುಖ್ಯಸ್ಥನ ಕೊಲೆ ಖಂಡಿಸುವ ಬದಲು 'ಇಸ್ರೇಲಿಗೆ ತನ್ನ ರಕ್ಷಣೆಗೆ ತಕ್ಕ ಕ್ರಮ ಕೈಗೊಳ್ಳುವ ಹಕ್ಕು ಇದೆ' ಎಂದು ಅಪ್ಪಣೆ ಕೊಡಿಸಿದರು ! ಎರಡನೇ ಅವಧಿಯಲ್ಲಿ ಒಬಾಮರಿಂದ ಮಧ್ಯ ಏಶ್ಯಾದ ಬಗ್ಗೆ ವಿದೇಶಾಂಗ ನೀತಿಯಲ್ಲಿ ಬದಲಾವಣೆ ನಿರೀಕ್ಷೆ ಮಾಡುವವರ ಮೇಲೆ ತಣ್ಣೀರೆರಚಿದ್ದಾರೆ. ಆದರೆ ಇಸ್ರೇಲಿ ಸರ್ಕಾರ ಮಿಲಿಟರಿ ಕಳಿಸಿ ಭೂದಾಳಿಯನ್ನೂ ಮಾಡಲು ಹೊರಟಾಗ ಅಮೆರಿಕ ಅದನ್ನು ತಡೆಯಿತು ಎನ್ನಲಾಗಿದೆ. ಪರಿಸ್ಥಿತಿ ಕೈಮೀರಿ ಹೋಗಬಹುದು ಎಂದು ಅಮೆರಿಕನ್ ಸರ್ಕಾರಕ್ಕೆ ಅನ್ನಿಸಿರಬೇಕು. ಈಜಿಪ್ಟ್ ಮತ್ತು ತುರ್ಕಿ ಈ ದಾಳಿಯನ್ನು ಖಂಡಿಸಿದರು.

ಕೊನೆಗೂ ಈಜಿಪ್ಟ್ ಮತ್ತು ಅಮೆರಿಕದ ವಿದೇಶ ಸಚಿವರ ಜಂಟಿ ಒತ್ತಡ ಮತ್ತು ಮಧ್ಯಸ್ತಿಕೆಯಿಂದ ಕದನ ವಿರಾಮ ಜಾರಿಗೆ ಬಂದಿದೆ. 5 ವರ್ಷಗಳಿಂದ ದಿಗ್ಬಂಧನಕ್ಕೆ ಗುರಿಯಾಗಿರುವ ಗಾಜಾ ಪಟ್ಟಿಗೆ ಭೂ ಹಾದಿಗಳನ್ನು ತೆರೆಯುವ ಮತ್ತು ಮೀನುಗಾರಿಕೆಗೆ ಅನುವು ಮಾಡಿಕೊಡುವ ಭರವಸೆಗಳೂ ಕದನ ವಿರಾಮ ಒಪ್ಪಂದದಲ್ಲಿ ಸೇರಿವೆ. ಆದರೆ ಇದು ಈಡೇರುವ ಬಗ್ಗೆ ತೀವ್ರ ಅನುಮಾನಗಳು ಇವೆ. ಬದಲಾಗಿ ಯಾವುದೇ ಕದನ ವಿರಾಮ ಉಲ್ಲಂಘನೆ ಆದರೆ, ದೊಡ್ಡ ಮಿಲಿಟರಿ ದಾಳಿ ಮಾಡುವ ಬೆದರಿಕೆ ಹಾಕಿದ್ದಾರೆ. ಮಿಲಿಟರಿ ವಿಮಾನಗಳು ಭಾರೀ ಸದ್ದು ಮಾಡುತ್ತಾ (ಆದರೆ ಬಾಂಬ್ ದಾಳಿ ಮಾಡದೆ) ಗಾಜಾ ಪಟ್ಟಿಯ ಮೇಲೆ ಗಸ್ತು ತಿರುಗುತ್ತಿವೆ. ಕೆಲವು ತಿಂಗಳುಗಳಲ್ಲಿ ನಡೆಯಲಿರುವ ಚುನಾವಣೆಯವರೆಗೆ ಈ ಸ್ಥಿತಿ ಇರಬೇಕು ಎಂದು ಪ್ರಧಾನಿ ನೆತನ್ಯಾಹು ಪ್ರಯತ್ನಿಸುತ್ತಿದ್ದಾರೆ.



ಜಿ.ಎನ್.ನಾಗರಾಜ್ 14

ಮೇ ನಾಲ್ಕರ ಚಳುವಳಿಯಲ್ಲಿ ಮಾವೋ

ಮೇ ನಾಲ್ಕರ ನಂತರ ಇಡೀ ಚೀನಾ ಸಾಮ್ರಾಜ್ಯಶಾಹೀ ವಿರೋಧೀ ಚಳುವಳಿಯಲ್ಲಿ ನಿರತವಾಗಿದ್ದಾಗ ಮಾವೋರವರು ಏನು ಮಾಡುತ್ತಿದ್ದರು? ಮಾವೋರವರ ಚಟುವಟಿಕೆ, ಚುರುಕುತನ, ರಾಜಕೀಯ ಪ್ರಜ್ಞೆಯ ಬೆಳವಣಿಗೆಯನ್ನು ಗಮನಿಸಿದವರಿಗೆ ಈ ಪ್ರಶ್ನೆ ಏಳುವುದು ಸಹಜ.

ಬೀಜಿಂಗ್‌ನಲ್ಲಿ ಗ್ರಂಥಾಲಯದಲ್ಲಿ ಹಾಗೂ ವಿವಿಧ ಸಂಘಗಳ ಮೂಲಕ ಅಧ್ಯಯನದಲ್ಲಿ ನಿರತರಾಗಿದ್ದ ಮಾವೋರವರು ಕೆಲ ತಿಂಗಳ ನಂತರ ಶಾಂಘೈ ನಗರಕ್ಕೆ ಭೇಟಿ ನೀಡಿದರು.ಶಾಂಘೈ ನಗರಕ್ಕೆ ಹೋಗುವಾಗ ದಾರಿಯಲ್ಲಿ ಅನೇಕ ಬೆಟ್ಟ ಗುಡ್ಡಗಳನ್ನು ಹತ್ತಿದರು. ಸರೋವರಗಳ ಪ್ರದೇಶಕ್ಕೆ ಭೇಟಿ ನೀಡಿದರು.ಹೀಗೆ ದೈಹಿಕ ಸಾಹಸಗಳನ್ನು ಮಾಡುತ್ತಾ ತಮ್ಮ ರಾಜ್ಯದ ರಾಜಧಾನಿ ಚಾಂಗ್ ಶಾಕ್ಕೆ ಮರಳಿದರು.

ಆ ವೇಳೆಗಾಗಲೇ ಚೀನಾದ ಸಮಸ್ಯೆಗಳ ಪರಿಹಾರಕ್ಕೆ ಮಾರ್ಕ್ಸವಾದ ಸೂಚಿಸುವ ದಾರಿಯಿಂದ ಮಾತ್ರ ಸಾಧ್ಯ ಎಂದು ಕಂಡುಕೊಂಡಿದ್ದ ಮಾವೋರವರು ಚಾಂಗ್ ಶಾದಲ್ಲಿ 1919 ರ ಏಪ್ರಿಲ್ ತಿಂಗಳಿನಲ್ಲಿ 'ಮಾರ್ಕ್ಸವಾದದ ಅಧ್ಯಯನ ಗುಂಪು 'ಒಂದನ್ನು ರಚಿಸಿದರು. ಇವರೇ ರಚಿಸಿದ್ದ' ಹೊಸ ಜನತೆಯ ಅಧ್ಯಯನ ಸಂಘ ', 'ಕೆಲಸ ಮತ್ತು ಅಧ್ಯಯನ ಸಂಘ ';ಹೊಸ ಅಲೆಯ ಸ್ಸಂಘ'ದ ಹುನಾನ್ ಘಟಕ ಎಂಬ ಇತರ ಸಂಘಗಳು ಮಾರ್ಕ್ಸವಾದದ ಅಧ್ಯಯನಕ್ಕೆ ತೊಡಗಿದ್ದವು. ಹೀಗೆ ಹುನಾನ್‌ನ ಯುವಕರು ಪ್ರಜಾಪ್ರಭುತ್ವವಾದೀ ಆಧುನಿಕ ಚಿಂತನೆಗಳಿಂದ ಮಾರ್ಕ್ಸವಾದದೆಡೆಗೆ ಸೆಳೆಯಲ್ಪಟ್ಟರು.

ಆ ನಂತರ ಮೇ ನಾಲ್ಕರ ಚಳುವಳಿ ಚಿಮ್ಮಿ ಬಂತು.ಮಾವೊ ಕೂಡಲೇ ಕಾಳಗದ ಕಣಕ್ಕೆ ಧುಮುಕಿದರು. ವಿದ್ಯಾರ್ಥಿಗಳ ಮೆರವಣಿಗೆಗಳನ್ನು ಸಂಘಟಿಸಿದರು.ಜೊತೆ ಜೊತೆಗೇ ಜಪಾನ್ ವಸ್ತುಗಳ ಬಹಿಷ್ಕಾರಕ್ಕೆ ಕರೆ ನೀಡುತ್ತಾ ನಗರದಲ್ಲೆಲ್ಲಾ ಹಲವು ಸಭೆಗಳನ್ನು ನಡೆಸಿದರು.ಈ ವಿಷಯದ ಬಗ್ಗೆ ಅವರು ಮಾಡಿದ ಭಾಷಣಗಳು ಬಹಳ ಆಕರ್ಷಣೀಯವಾಗಿದ್ದವು. ವಿದ್ಯಾರ್ಥಿಗಳನ್ನು ಮಾತ್ರವಲ್ಲದೇ ವ್ಯಾಪಾರಿಗಳನ್ನು, ಕಾರ್ಮಿಕರನ್ನೂ ಸೆಳೆದವು.

ಹುನಾನ್‌ನ ಸಂಯುಕ್ತ ವಿದ್ಯಾರ್ಥಿಗಳ ಸಂಘದ ರಚನೆ. ಮತ್ತು ಐಕ್ಯ ಹೋರಾಟಗಳು.

ಹಿಂದೆ ತಮಗಿದ್ದ ವಿದ್ಯಾರ್ಥಿಗಳ ಸಂಪರ್ಕಗಳನ್ನು ಹಾಗೂ ತಾವು ಕಟ್ಟಿದ್ದ "ಹೊಸ ಜನತೆಯ ಅಧ್ಯಯನ ಸಂಘ " ವನ್ನು ಬಳಸಿ ಪ್ರಬಲ ವಿದ್ಯಾರ್ಥಿಗಳ ಚಳುವಳಿಯನ್ನು ಸಂಘಟಿಸಿದರು. ವಿದ್ಯಾರ್ಥಿಗಳ ಚಳುವಳಿಯನ್ನ ಮತ್ತಷ್ಟು ಬಲಪಡಿಸಲು, ಹುನಾನ್‌ನ ಇತರ ವರ್ಗಗಳ ಜೊತೆ ಸಂಪರ್ಕ ಸಾಧಿಸಲು ಮತ್ತು ಆಗ ರೂಪು ತಳೆದಿದ್ದ ಅಖಿಲ ಚೀನಾ ವಿದ್ಯಾರ್ಥಿಗಳ ಸಂಘದ ಭಾಗವಾಗಲು" ಹುನಾನ್ ಸಂಯುಕ್ತ ವಿದ್ಯಾರ್ಥಿಗಳ ಸಂಘವನ್ನು ಜೂನ್‌ನಲ್ಲಿ ಸ್ಥಾಪಿಸಿದರು. ಕೂಡಲೇ ಜೂನ್ 3 ರಂದು ಈ ಸಂಘ ಜಪಾನ್ ಪರ ಅಧಿಕಾರಸ್ಥರಿಗೆ ಶಿಕ್ಷೆ ನೀಡಲು ಒತ್ತಾಯಿಸುವ ಘೋಷಣೆಯನ್ನು ಅಂಗೀಕರಿಸಿತು. ವಿದ್ಯಾರ್ಥಿಗಳು, ವ್ಯಾಪಾರಿಗಳು, ಅಂಗಡಿಗಳ ಕೆಲಸಗಾರರು. ಕಾರ್ಮಿಕರು–ಅದರಲ್ಲಿ ಹುನಾನ್ ರಾಜ್ಯದ ಅಂಚಿನ ಗಣಿ ಕಾರ್ಮಿಕರೂ ಸೇರಿದಂತೆ



ವ್ಯಾಪಕ ಮುಷ್ಕರಗಳನ್ನು ನಡೆಸಿದರು.

ಜಪಾನ್ ವಸ್ತುಗಳ ಬಹಿಷ್ಕಾರ

ವಿದ್ಯಾಥಿಗಳು ಜಪಾನ್ ವಸ್ತುಗಳ ಬಹಿಷ್ಕಾರವನ್ನು ಪರಿಣಾಮಕಾರಿಯಾಗಿ ಸಂಘಟಿಸಿದರು. 3 ರಿಂದ 5 ಜನ ವಿದ್ಯಾರ್ಥಿಗಳ ತಂಡವನ್ನು ರಚಿಸಿ ಅಂಗಡಿಗಳಲ್ಲಿ ಜಪಾನ್ ವಸ್ತುಗಳನ್ನು ಹುಡುಕುತ್ತಾ ಸಾಗಿದರು. ಇದರಲ್ಲಿ ವಿದ್ಯಾರ್ಥಿನಿಯರು ಕ್ರಿಯಾಶೀಲವಾಗಿ ಪಾತ್ರವಹಿಸಿದರು. ಜಪಾನೀ ವಸ್ತುಗಳು ಸಿಕ್ಕ ಕಡೆ ಅವುಗಳನ್ನು ಹೊರಗೆಳೆದು ಕೂಡಿ ಹಾಕಿ ಸುಡಲಾಯಿತು. ಜುಲೈನಲ್ಲಿ ವ್ಯಾಪಾರಿಗಳ ಅವರ ವಿವಿಧ ಸಂಘಗಳ ಸಭೆಯನ್ನುದ್ದೇಶಿಸಿ ಭಾಷಣ ಮಾಡಿ "ದೇಶೀಯವಸ್ತುಗಳನ್ನು ಬಳಸಿ, ಜಪಾನೀ ವಸ್ತುಗಳನ್ನು ತಿರಸ್ಕರಿಸಿ" ಎಂದು ಕರೆ ನೀಡಿದ್ದಲ್ಲದೇ ವಿದ್ಯಾರ್ಥಿಗಳು, ವ್ಯಾಪಾರಿಗಳು, ಅಂಗಡಿ ಕೆಲಸಗಾರರು, ಕುಶಲ ಕರ್ಮಿಗಳು, ಕಾರ್ಮಿಕರು, ಬುದ್ಧಿಜೀವಿಗಳು ಸೇರಿದಂತೆ ಎಲ್ಲಾ ವಲಯಗಳ ಜನರ ಸಂಘಗಳ ಒಕ್ಕೂಟವನ್ನು ರಚಿಸಿದರು.

"ಶಿಯಾಂಗ್ ನದಿ ಸಮೀಕ್ಷೆ" ವಾರ ಪತ್ರಿಕೆಯ ಆರಂಭ

ಈ ಎಲ್ಲಾ ಚಳುವಳಿಯ ಕೆಲಸಗಳಿಗೆ ಯೋಜಿತ , ಸಂಘಟಿತ , ಸ್ಪಷ್ಟ ರೂಪ ನೀಡಲು 1919 ರ ಜುಲೈ 14 ರಂದು ಚಾಂಗ್ ಶಾ ನಗರದ ಸುತ್ತ ಪ್ರವಹಿಸುವ, ಮಾವೋರವರು ದಿನ ನಿತ್ಯ ಈಸಾಡುತ್ತಿದ ಅವರ್ದ ಪ್ರೀತಿಯ ನದಿಯ ಹೆಸರಿನಲ್ಲಿ "ಶಿಯಾಂಗ್ ನದಿ ಸಮೀಕ್ಷೆ" ಎಂಬ ಹೆಸರಿನ ಪತ್ರಿಕೆಯನ್ನು ಆರಂಭಿಸಿದರು.

ಅದರಲ್ಲಿ ಮಾವೋರವರು ಬರೆದ ಮೂರು ಭಾಗಗಳಲ್ಲಿ ಪ್ರಕಟವಾದ ಲೇಖನ "ಜನ ಸಮೂಹಗಳ ಬೃಹತ್ ಐಕ್ಯತೆ" ಅವರ ಅಂದಿನ ವಿಚಾರಗಳು ಹಾಗೂ ಶೈಲಿಯನ್ನು ನೆನಪಿಸುತ್ತದೆ. "ಜನ ಸಮೂಹದ ಐಕ್ಯ ಶಕ್ತಿಯೇ ಅತ್ಯಂತ ಬೃಹತ್ ಶಕ್ತಿ .... ನಾವು ಎಚ್ಚೆತ್ತಿದ್ದೇವೆ. ವಿಶ್ವವೇ ನಮ್ಮದು, ದೇಶ ನಮ್ಮದು, ಸಮಾಜ ನಮ್ಮದು... ನಾವು ಸ್ವರ್ಗದ ದೇವತೆಗಳಿಗೆ ಹೆದರಬೇಕಾಗಿಲ್ಲ. ದೆವ್ವಗಳಿಗೆ ಹೆದರಬೇಕಾಗಿಲ್ಲ, ಸತ್ತವರಿಗೆ ಹೆದರಬೇಕಾಗಿಲ್ಲ, ಅಧಿಕಾರಿಗಳಿಗೆ, ಸೇನೆಗಳ ಒಡೆಯರಿಗೆ, ಬಂಡವಳಶಾಹಿಗಳಿಗೆ ಹೆದರಬೇಕಾಗಿಲ್ಲ. ಜನ ಸಮೂಹಗಳ ಐಕ್ಯತೆ ಒಂದು ಪ್ರವಾಹವಿದ್ದಂತೆ.ಯಾರಿಗೂ ಅದನ್ನು ತಡೆಯಲಾಗುವುದಿಲ್ಲ. ಇಡೀ ಜಗತ್ತನ್ನೇ ಅಲುಗಾಡಿಸುತ್ತದೆ. ಸ್ವರ್ಗ, ಭೂಮಿ ಇದರಿಂದ ಸ್ಫೂರ್ತಿ ಪಡೆಯುತ್ತವೆ. ದ್ರೋಹಿಗಳು,ದುಷ್ಟರು ಪಲಾಯನ ಮಾಡುತ್ತಾರೆ".

ಈ ವಾರ ಪತ್ರಿಕೆಯಲ್ಲಿ ಮಾವೋರವರು ತಮ್ಮ ಲೇಖನಗಳ ಮೂಲಕ ರಷ್ಯನ್ ಕ್ರಾಂತಿಯ ಬಗ್ಗೆ, ಮಾರ್ಕ್ಸವದದ ಬಗ್ಗೆ,ಅಂದು ಹಂಗರಿ ಮತ್ತಿತರ ಯೂರೋಪಿನ ಭಾಗಗಳಲ್ಲಿ ನಡೆಯುತ್ತಿದ್ದ ಕ್ರಾಂತಿಕಾರೀ ಚಳುವಳಿಗಳ ಬಗ್ಗೆ ಪರಿಚಯ ಮಾಡಿಕೊಟ್ಟರು. ಮೇ ನಾಲ್ಕರ ಚಳುವಳಿಯ ಅಂತರ ರಾಷ್ಟ್ರೀಯ ಮುಖವನ್ನು ಪರಿಚಯಿಸಿದರು.

ಈ ಪತ್ರಿಕೆಯ ಮೊದಲನೇ ಸಂಚಿಕೆಯಲ್ಲಿಯೇ ಮಹಿಳಾ ಕ್ರಾಂತಿಕಾರೀ ಸೈನ್ಯದ ಬಗ್ಗೆ ಲೇಖನವೊಂದನ್ನು ಬರೆದರು. ಅದು ಹುಡುಗಿಯರ ನಡುವೆ ವ್ಯಾಪಕ ಪರಿಣಾಮ ಬೀರಿತು. ಅದರ ಸ್ಫೂರ್ತಿಯಿಂದ ಸಾಮ್ರಾಜ್ಯಶಾಹಿ, ಮಿಲಿಟರಿಶಾಹಿ, ಬಂಡವಾಳಶಾಹಿ ಹಾಗೂ ಮೂಢ ನಂಬಿಕೆಗಳ ವಿರುದ್ಧ ಹೋರಾಡಲು ಒಂದು ವಿದ್ಯಾರ್ಥಿನಿಯರ ಮೈತ್ರಿ ಕೂಟವೊಂದು ಆರಂಭ ಗೊಂಡಿತು. ಮತ್ತೊಂದು ಪತ್ರಿಕೆಯಲ್ಲಿ ಒಂಬತ್ತು ಲೇಖನಗಳನ್ನು ಬರೆದ ಮಾವೋರವರು ಹಿರಿಯರು ಜೋಡಿಸುವ ಮದುವೆ ಪದ್ಧತಿಯ ಬಗ್ಗೆ ಹಾಗೂ ಶೀಲದ ಬಗ್ಗೆ ಗಂಡಿಗೊಂದು ಹೆಣ್ಣಿಗೊಂದು ಮಾನದಂಡಗಳ ಬಗ್ಗೆ ಕಿಡಿಕಾರಿದರು.

"ಶಿಯಾಂಗ್ ನದಿ ಸಮೀಕ್ಷೆ" ಪತ್ರಿಕೆ ಚಾಂಗ್ ಶಾದ ವಿದ್ಯಾರ್ಥಿಗಳ ನಡುವೆ ಬಹಳ ಜನ ಪ್ರಿಯವಾಯಿತು. ಅನೇಕ ವಿದ್ಯಾರ್ಥಿಗಳು ಪತ್ರಿಕೆಯನ್ನು ಮಾರಲು ತಾವಾಗಿಯೇ ಮುಂದೆ ಬಂದರು. ಈ ಪತ್ರಿಕೆ ಹುನಾನ್ ರಾಜ್ಯದಲ್ಲಿ ಮಾತ್ರವಲ್ಲದೆ ದಕ್ಷಿಣ ಚೀನಾದಲ್ಲಿಯೇ ಪ್ರಭಾವ ಬೀರಿತು.

ಇದೇ ರೀತಿ ಅಂದಿನ ಚೀನಾದ ವಿವಿಧ ಬಪ್ರದೇಶಗಳಲ್ಲಿ ನೂರಾರು ಪತ್ರಿಕೆಗಳು ಆರಂಭವಾದವು. ಅನೇಕ ಕಿರು ಪುಸ್ತಿಕೆಗಳು, ಕರಪತ್ರಗಳು ಇತರ ಸಾಹಿತ್ಯ ಪ್ರಕಟವಾದುವು, ಪ್ರಗತಿಪರ ಹಾಗೂ ಮಾರ್ಕ್ಸವಾದೀ ವಿಚಾರಗಳನ್ನು ಜನರ ನಡುವೆ ಜನಪ್ರಿಯಗೊಳಿಸಿದವು.

"ವಿಷಯದ ಬಗ್ಗೆ ಶೋಧ ನಡೆಸದಿದ್ದರೆ ಮಾತನಾಡುವ ಹಕ್ಕಿಲ್ಲ."

ಇದು ಮಾವೋರವರು 'ಶಿಯಾಂಗ್ ನದಿ ಸಮೀಕ್ಷೆ' ಪತ್ರಿಕೆಯಲ್ಲಿ ಬರೆದ ಲೇಖನ. ಯಾವುದೇ ವಷಯದ ಬಗೆಗ ಎಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕೆಂದರೂ ಆ ವಿಷಯದ ಬಗ್ಗೆ ಶೋಧ ನಡೆಸಿರಬೇಕು. ಅದು ಒಂದು ಸಭೆ, ಬಹಿರಂಗ ಸಭೆಯಲ್ಲಾಗಲೀ, ಸಮಿತಿಗಳ ಸಭೆಗಳಲ್ಲಾಗಲೀ, ಭಾಷಣ ಮಾಡುವುದಾಗಲೀ ಅಥವಾ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕಾಗಲೀ ತಾವು ಮಾತನಾಡುವ ವಿಷಯದ ಬಗ್ಗೆ ಶೋಧ ನಡೆಸಬೇಕು. ಶೋಧವೆಂದರೆ ಬರಿಯ ಪುಸ್ತಕಗಳ ಓದು ಮಾತ್ರವಲ್ಲ. ಆ ವಿಷಯದ ಬಗ್ಗೆ ಚೀನಾದ ನಿರ್ದಿಷ್ಟ ಪರಿಸ್ಥಿತಿಯ ಶೋಧ. ಅದಕ್ಕೆಂದೇ ಅದನ್ನು ಅಧ್ಯಯನವೆಂದು ಕರೆದಿಲ್ಲ, ಶೋಧವೆಂದು ಕರೆದಿದ್ದಾರೆ. ಈ ಲೇಖನ ಪ್ರಕಟವಾದ ಮೇಲೆ ಬೀಜಿಂಗ್‌ನಲ್ಲಿ ಇದನ್ನು ಓದಿದವರು ಮತ್ತೆ ಬೀಜಿಂಗ್‌ನಲ್ಲಿ ಪ್ರಕಟಿಸಿದರು. ಮಾವೋರವರ ಈ ವಿಚಾರ ಚೀನಾದ ಕ್ರಾಂತಿಯ ಸಂದರ್ಭದಲ್ಲಿ ಹಾಗೂ ಕ್ರಾಂತಿಯ ನಂತರ ಮತ್ತೆ ಮತ್ತೆ ಚರ್ಚೆಗೆ ಬಂದಿದೆ.

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at: Kriya Prakashana,12,18th Cross, S.R.Nagar, BANGALORE - 560027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH